## ಶುಕ್ರವಾರ, ೨೯ನೇ ಆಗಸ್ಟ್, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪ್ರತಿಜ್ಞೆ ಸ್ವೀಕರಿಸಿದ ಸದಸ್ಯರು

ಈ ಕೆಳಗಿನ ಸದಸ್ಯರು ಪ್ರತಿಜ್ಞಾ ವಚನ ಸ್ವೀಕರಿಸಿದರು:
ಲೆಫ್ಟಿನೆಂಟ್ ಕರ್ನಲ್ ಬ್ರಿಜ್‌ರಾಜ್ ನಾರಾಯಣ್ (ಗ್ವಾಲಿಯರ್ ಸಂಸ್ಥಾನ)

### ಸದನ ಸಮಿತಿಗೆ ಸದಸ್ಯರ ಚುನಾವಣೆ

**ಶ್ರೀ ಸತ್ಯನಾರಾಯಣ್** ಸಿನ್ಹ (ಬಿಹಾರ್ : ಸಾಮಾನ್ಯ) : ಮಾನ್ಯರೆ, ನಾನು ಕೆಳಗಿನ ಪ್ರಸ್ತಾವ ಮಂಡಿಸಲು ಅನುಮತಿ ಕೋರುತ್ತೇನೆ :

"ಸಂವಿಧಾನ ರಚನಾಸಭೆಯ ೪೪(೨)ನೆಯ ನಿಯಮದಲ್ಲಿ ಹೇಳಿರುವ ಪ್ರಕಾರ ಸಂವಿಧಾನ ರಚನಾ ಸಭೆಯ ಇಬ್ಬರು ಸದಸ್ಯರನ್ನು ಈ ಸದನ ಸಮಿತಿಗೆ ಸಂವಿಧಾನ ರಚನಾ ಸಭೆಯು ಚುನಾಯಿಸಲು ತೀರ್ಮಾನಿಸಿತು."

ಮಾನ್ಯರೆ, ತಮಗೆ ತಿಳಿದಿರುವಂತೆ, ಈ ಸಮಿತಿಯ ಇಬ್ಬರು ಸದಸ್ಯರ –ಶ್ರೀ ಅಬ್ದುಲ್ ಗಫಾರ್ ಖಾನ್ ಮತ್ತು ಶ್ರೀ ಎ.ಕೆ. ದಾಸ್ ಅವರ ಈ ಸದನದ ಸದಸ್ಯತ್ವವು ಕೊನೆಗೊಂಡಿದೆ. ನಿಯಮದ ಪ್ರಕಾರ ಅವರ ಸದನ ಸಮಿತಿಯ ಸದಸ್ಯತ್ವವೂ ಮುಕ್ತಾಯವಾಗಿದೆ. ಆದ್ದರಿಂದ, ಗೌರವಾನ್ವಿತ ಸಭಾಧ್ಯಕ್ಷರು ಸೂಚಿಸಿರುವ ವಿಧಾನದಲ್ಲಿ ಈ ಎರಡು ಸ್ಥಾನಗಳನ್ನು ಭರ್ತಿಮಾಡಬೇಕು.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಸದನ ಸಮಿತಿಯಲ್ಲಿನ ಖಾಲಿಯಾಗಿರುವ ಎರಡು ಸ್ಥಾನಗಳಿಗೆ ಇಂದು ಸಂಜೆ ೫ ಘಂಟೆಯವರೆಗೆ ನಾಮಪತ್ರಗಳನ್ನು ಸ್ವೀಕರಿಸಲಾಗುತ್ತದೆ. ವರ್ಗಾಯಿಸಬಹುದಾದ ಒಂದು ಮತದ ಮೂಲಕ ಅನುಪಾತೀಯ ಪ್ರಾತಿನಿಧ್ಯದ ತತ್ತ್ವಕ್ಕನುಗುಣವಾಗಿ ಅವಶ್ಯವಾದರೆ ಚುನಾವಣೆಗಳನ್ನು ಕೌನ್ಸಿಲ್ ಹೌಸ್‌ನ ನೆಲಮಹಡಿ ಅಧೀನಕಾರ್ಯದರ್ಶಿಗಳ ಕೋಣೆಯಲ್ಲಿ (ಕೊಠಡಿ ಸಂಖ್ಯೆ ೨೫) ನಾಳೆ ಸಂಜೆ ಮೂರು ಗಂಟೆಯಿಂದ ೪ ಘಂಟೆಯೊಳಗೆ ನಡೆಸಲಾಗುತ್ತದೆ.

ಕರಡು ಸಂವಿಧಾನವನ್ನು ಪರಿಶೀಲಿಸಲು ಸಮಿತಿ

**ಶ್ರೀ ಸತ್ಯನಾರಾಯಣ್** ಸಿನ್ಹಾ : ಸ್ವಾಮಿ ನಾನು ಕೆಳಕಂಡ ವಿಷಯವನ್ನು ಮಂಡಿಸುತ್ತೇನೆ.

೧. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್,

೨. ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್,

೩. ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್,

೪. ಶ್ರೀ ಕೆ.ಎಮ್. ಮುನ್ಷಿ,

೫. ಸೈಯಿದ್ ಮೊಹಮ್ಮದ್ ಸಾದುಲ್ಲಾ,

೬. ಸರ್ ಬಿ.ಎಲ್. ಮಿಟ್ಟರ್,

೭. ಶ್ರೀ ಡಿ.ಪಿ. ಖೈತಾನ್,

ಇವರನ್ನೊಳಗೊಂಡ ಒಂದು ಸಮಿತಿಯನ್ನು ವಿಧಾಯಕ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳ ಆಧಾರದ ಮೇರೆಗೆ ಸಭೆಯ ಕಚೇರಿಯಲ್ಲಿ ಸಿದ್ಧಪಡಿಸಲಾದ ಕರಡು ಸಂವಿಧಾನವನ್ನು ಪರಿಶೀಲಿಸಿ ಮತ್ತು ಆವಶ್ಯಕ ತಿದ್ದುಪಡಿ ಸಲಹೆಮಾಡಲು ನೇಮಕ ಮಾಡಿರಲಾಗುತ್ತದೆ ಎಂದು ನಿರ್ಣಯಿಸಿದೆ.

ಸ್ವಾಮಿ, ತಮಗೆ ನೆನಪಿರುವಂತೆ ಕಳೆದ ಬಾರಿ ಅಂದರೆ ನಾವು ಒಕ್ಕೂಟ ಸಂವಿಧಾನ ಮತ್ತು ಹಾಗೂ ಪ್ರಾಂತೀಯ ಸಂವಿಧಾನಗಳನ್ನು ಕುರಿತು ಚರ್ಚಿಸುತ್ತಿರುವಾಗ ತಮ್ಮ ಸಲಹೆಯಂತೆ ಸದನವು ಈ ಸದನದಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳಿಗೆ ಸೂಕ್ತ ಆಕಾರವನ್ನು ಕೊಡಲು ಒಂದು ಕರಡು ರಚನಾ ಸಮಿತಿಯನ್ನು ನೇಮಕ ಮಾಡಬೇಕೆಂದು ಅಂಗೀಕರಿಸಿತ್ತು. ಆ ದೃಷ್ಟಿಯಿಂದ ಈ ಸಮಿತಿ ನೇಮಕವಾಗಲಿದೆ. ಇದು ಒಂದು ತಜ್ಞರ ಸಮಿತಿ. ಸಲಹೆ ಮಾಡಿದ ಈ ಹೆಸರುಗಳನ್ನು ಸದನವು ಅಂಗೀಕರಿಸುತ್ತದೆ ಎಂದು ನಾನು ಆಶಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೆರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ತಮಗೆ ತಿಳಿದಿರುವಂತೆ ಒಂದು ಕ್ರಿಯಾಲೋಪವನ್ನು ಕುರಿತಂತೆ ಸೈಲ್ಹೆಟ್ ಅಭಿಪ್ರಾಯದ ಫಲವಾಗಿ ಸೈಯಿದ್ ಮೊಹಮದ್ ಸಾದುಲ್ಲಾರ ಸ್ಥಾನವನ್ನು ತೆರವುಗೊಳಿಸಲಾಯಿತು ಮತ್ತು ಇತ್ತೀಚೆಗಷ್ಟೆ ಅವರು ಪುನಃ ಚುನಾಯಿತರಾಗಿದ್ದಾರೆ. ಅವರಿನ್ನೂ ಸದಸ್ಯರ ಪಟ್ಟಿಗೆ ಸಹಿ ಹಾಕಿಲ್ಲ ಮತ್ತು ಈ ಸದನದಲ್ಲಿ ಅಧಿಕೃತವಾಗಿ ಸದಸ್ಯರಾಗಿಲ್ಲ. ಹಾಗಾಗಿ ಆದ್ದರಿಂದ ಅವರು ಯಾವುದೇ ಸಮಿತಿಗೆ ಚುನಾವಣೆಗೆ ಅರ್ಹರಲ್ಲ ಎಂದು ತಿಳಿದಿದ್ದೇನೆ. ಸ್ವಾಮಿ ತಾವು ಈ ಸದನಕ್ಕೆ ಶ್ರೀ ಸಾದುಲ್ಲಾರವರಿಗೆ ಸಂಬಂಧಿಸಿದಂತೆ ಪ್ರಸ್ತಾವವು ಕ್ರಮಬದ್ಧವಾಗಿದೆಯೇ ಎಂದು ಹೇಳುವಿರಾ?

**ಮಾನ್ಯ ಸಭಾಧ್ಯಕ್ಷರು** : ಅವರು ಪಟ್ಟಿಗೆ ಸಹಿ ಹಾಕಿದ ಅನಂತರ ಕೆಲಸ ನಿರ್ವಹಿಸಲು ಆರಂಭಿಸುತ್ತಾರೆ.

**ಬೇಗಮ್ ಐಜಾಜ್ ರಸೂಲ್** (ಸಂಯುಕ್ತ ಪ್ರಾಂತ್ಯಗಳು : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಈ ಪ್ರಸ್ತಾವ ಕುರಿತಾಗಿ ನಾನು ಯಾವ ಸೂಚನೆಯನ್ನೂ ನೀಡಿಲ್ಲ. ಸಮಿತಿಗೆ ನಾಮಕರಣವಾದ ಯಾವುದಾದರೂ ಸದಸ್ಯರು ಯಾವುದೇ ಕಾರಣಕ್ಕಾಗಿ ಸೇವೆ ಸಲ್ಲಿಸಲು ಸಮರ್ಥರಲ್ಲದಿದ್ದರೆ ಈ ಸಮಿತಿಗೆ ಯಾವುದೇ ಇತರ ಸದಸ್ಯರನ್ನು ನಾಮಕರಣ ಮಾಡಲು ಗೌರವಾನ್ವಿತ ಸಭಾಧ್ಯಕ್ಷರಿಗೆ ಈ ಸದನವು ಅಧಿಕಾರ ಕೊಡಬೇಕೆಂಬ ಈ ಪ್ರಸ್ತಾವವನ್ನು ತಮ್ಮ ಅನುಮತಿಯೊಂದಿಗೆ ಮಂಡಿಸಲು ಇಚ್ಛಿಸುತ್ತೇನೆ. ನನ್ನ ಈ ತಿದ್ದುಪಡಿಯನ್ನು ಸದನವು ದಯಾಪರತೆಯಿಂದ ಸ್ವೀಕರಿಸಿ ಈ ಅಧಿಕಾರವನ್ನು ಗೌರವಾನ್ವಿತ ಸಭಾಧ್ಯಕ್ಷರಿಗೆ ಕೊಡುತ್ತದೆ ಎಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಯ ಸೂಚನೆಯನ್ನು ನೀವು ಕೊಟ್ಟಿದ್ದಿರಾ?

**ಬೇಗಂ ಐಜಾಜ್ ರಸೂಲ್** : ನಾನೀಗ ತಾನೆ ಈ ಪ್ರಸ್ತಾವದ ಔಪಚಾರಿಕ ಸೂಚನೆಯನ್ನು ನಾನು ನೀಡಿಲ್ಲ ಎಂದು ಹೇಳಿದೆ. ಆದರೆ ನಾನು ಸದನವು ನನ್ನ ನಿಲುವಳಿಯನ್ನು ದಯವಿಟ್ಟು ಸ್ವೀಕರಿಸುತ್ತದೆ ಎಂದು ಆಶಿಸುತ್ತೇನೆ.

**ಗೌರವಾನ್ವಿತ ಶ್ರೀ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಸೂಚನೆ ಕೊಟ್ಟಿರುವ ತಿದ್ದುಪಡಿಯು ಪ್ರಸ್ತಾವವನ್ನು ಮಂಡಿಸಿರುವ ಶ್ರೀ ಸತ್ಯನಾರಾಯಣ ಸಿನ್ಹ ಅವರ ಉದ್ದೇಶವನ್ನು ಇನ್ನೂ ಹೆಚ್ಚು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ ಮತ್ತು ಅದನ್ನು ಪರಿಣಾಮಕಾರಿಯನ್ನಾಗಿಸಿದೆ. ಅದು ಈ ರೀತಿ ಇದೆ:

"ಸದನದಲ್ಲಿ ಸಭೆಯಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳ ಆಧಾರದ ಮೇಲೆ ಸದನದ ಕಚೇರಿಯಲ್ಲಿ ಸಿದ್ಧಪಡಿಸಿದ ಕರಡು ಸಂವಿಧಾನವನ್ನು ಪರಿಶೀಲಿಸಿ ಅದಕ್ಕೆ ಆವಶ್ಯಕ ತಿದ್ದುಪಡಿಗಳನ್ನು ಸೂಚಿಸಲು" ಎಂಬುವುದಕ್ಕೆ ಈ ಕೆಳಗಿನದನ್ನು ಬದಲಿ ಹಾಕಬೇಕಿದೆ:

"ಸಾಂವಿಧಾನಿಕ ಸಲಹೆಗಾರರಿಂದ ಸಿದ್ಧಪಡಿಸಲಾಗಿರುವ ಭಾರತದ ಸಂವಿಧಾನದ ಪಠ್ಯದ ಕರಡನ್ನು ಶಾಸನ ಸಭೆಯಲ್ಲಿ ಈಗಾಗಲೇ ತೆಗೆದುಕೊಂಡ ನಿರ್ಣಯಗಳನ್ನು ಅಳವಡಿಸಿ ಮತ್ತು ಪೂರಕವಾದ ಅಥವಾ ಅಂತಹ ಒಂದು ಸಂವಿಧಾನದಲ್ಲಿ ಒದಗಿಸಬೇಕಾದ ಎಲ್ಲ ವಿಷಯಗಳನ್ನು ಸೇರಿಸಿ ಪರಿಶೀಲಿಸಲು ಮತ್ತು ಸಮಿತಿಯಿಂದ ಪರಿಷ್ಕರಿಸಿದ ಕರಡು ಸಂವಿಧಾನವನ್ನು ಪರಿಗಣನೆಗೆ ವಿಧಾಯಕ ಸಭೆಗೆ ಸಲ್ಲಿಸಲು."

ಇದು ಎರಡು ವಿಷಯಗಳಿಗೆ ಅವಕಾಶ ಮಾಡುತ್ತದೆ. ಒಂದು, ಶಾಸನ ಸಭೆಯಲ್ಲಿ ಈಗಾಗಲೇ ತೆಗೆದುಕೊಂಡ ನಿರ್ಣಯಗಳಿಗೆ ಪರಿಣಾಮ ಕೊಡುವ ಉದ್ದೇಶಕ್ಕೆ ಸಾಂವಿಧಾನಿಕ ಸಲಹೆಗಾರರು ಕರಡನ್ನು ತಯಾರಿಸುವರು. ಆ ಕರಡನ್ನು ಈ ಸಮಿತಿಯ ಪರಿಶೀಲಿಸಬೇಕು. ಅಂದರೆ, ನಾವು ಈಗಾಗಲೇ ತೆಗೆದುಕೊಂಡ ನಿರ್ಣಯಗಳಿಗೆ ಪೂರಕವಾದ ಅಥವಾ ಸಾಮಾನ್ಯವಾಗಿ ಆವಶ್ಯಕವೂ ಮತ್ತು ಸಂವಿಧಾನದಲ್ಲಿ ಒದಗಿಸಬೇಕಾಗಿರುವುದು ಆದ ಅಂಶಗಳನ್ನು ಇಲ್ಲಿ ಪರಿಗಣಿಸಿಲ್ಲ. ಉದಾಹರಣೆಗೆ ಪ್ರಾಂತೀಯ ಸಂವಿಧಾನದಲ್ಲಿ ತೆಗೆದುಕೊಳ್ಳಬೇಕಾದ ಎಲ್ಲ ಕ್ರಮಗಳನ್ನು ರಾಜ್ಯಪಾಲರ ಹೆಸರಿನಲ್ಲಿ ತೆಗೆದುಕೊಳ್ಳಲಾಗುತ್ತದೆ ಎಂಬ ಒಂದು ಸಿದ್ಧಾಂತವನ್ನು ನಾವು ಹಾಕಿಕೊಂಡಿದ್ದೇವೆ. ಶಾಸನ ಸಭೆಯು ತೆಗೆದುಕೊಂಡ ಮತ್ತು ಭಾರತ ಸರ್ಕಾರದ ಅಧಿನಿಯಮದಲ್ಲಿ ಒಂದು ಸ್ಥಾನ ಕೊಡಲಾದ ಈ ನಿರ್ಣಯಕ್ಕೆ ಒತ್ತುಕೊಡುವಲ್ಲಿ ಹಲವು ವಿಷಯಗಳನ್ನು ಸೇರಿಸಿ ಅವುಗಳನ್ನು ಒಂದು ಕ್ರಮದಲ್ಲಿ ಹಾಕಬೇಕಿರುತ್ತದೆ. ಬಳಿಕ ಇತರ ಸಂವಿಧಾನಗಳಲ್ಲಿ ಪೂರಕ ವ್ಯವಸ್ಥೆಗಳಿವೆ ಮತ್ತು ಕೆಲವು ಇತರ ವ್ಯವಸ್ಥೆಗಳು ಅಂದರೆ ಉಪಬಂಧಗಳು ಸಂವಿಧಾನದಲ್ಲಿ ಸ್ಥಾನಪಡೆಯಲೇ ಬೇಕಾದವು ಇವೆ. ಅವು ಯಾವನ್ನೂ ಇಲ್ಲಿ ಚರ್ಚಿಸಿರದಿದ್ದರೂ ಅಥವಾ ಈವರೆಗೆ ನಿರ್ಧರಿಸಿರದಿದ್ದರೂ ಈ ಎಲ್ಲವನ್ನು ನಮ್ಮ ಕರಡಿನಲ್ಲಿ ಸೇರಿಸಲೇಬೇಕಿದೆ. ಈ ತಿದ್ದುಪಡಿಯ ಮೇಲೆ ಯಾವುದೇ ದೀರ್ಘ ಟೀಕೆಗಳನ್ನು ಮಾಡುವುದು ಸೂಕ್ತವೆಂದು ನನಗೆನ್ನಿಸುವುದಿಲ್ಲ. ಪ್ರತಿಯೊಂದು ಆವಶ್ಯಕ ವಿಷಯವನ್ನು ಚರ್ಚಿಸಲೂ ಮತ್ತು ಒದಗಿಸಲೂ ಸಾಧ್ಯವಾಗಿಲ್ಲ. ಆದರೆ ಅವು ಇಲ್ಲದೆ ಸಂವಿಧಾನವು ಪೂರ್ಣವಾಗುವುದಿಲ್ಲ. ನಾವು ಬಹುತೇಕವಾಗಿ ಎಲ್ಲ ಪ್ರಮುಖ ವಿಷಯಗಳ ಮೇಲೆ ನಿರ್ಣಯಗಳನ್ನು ತೆಗೆದುಕೊಂಡಿದ್ದೇವೆ. ಅವುಗಳನ್ನು ಅಳವಡಿಸಿಕೊಳ್ಳಲಾಗುತ್ತದೆ. ಆದರೆ ಕರಡು ಕೂಡ ಇವುಗಳಿಗೆ ಪೂರಕವಾದ ಮತ್ತು ಆವಶ್ಯಕವೂ ಆದ ಅಂತಹ ಎಲ್ಲ ವಿಷಯಗಳನ್ನು ಒಳಗೊಳ್ಳುತ್ತವೆ. ಈ ವಿಷಯಗಳನ್ನು ಹೊಂದಿರುವ ಕರಡು ಸದನದ ಮುಂದೆ ಚರ್ಚೆಗೆ ಮತ್ತು ನಿರ್ಣಯಕ್ಕೆ ಬರಬೇಕಿದೆ. ಮಾನ್ಯರೆ, ನಾನು ಸದನವು ಈ ತಿದ್ದುಪಡಿಯನ್ನು ಒಪ್ಪುತ್ತದೆ ಎಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಿರ್ಣಯದ ಗುಣಮಟ್ಟವನ್ನು ಹೆಚ್ಚಿಸುವ ಆ ತಿದ್ದುಪಡಿಗಳನ್ನು ಮೊದಲು ಗಮನಿಸಲಾಗುತ್ತದೆ.

**ಶ್ರೀ ಸತ್ಯನಾರಾಯಣ್** ಸಿನ್ಹಾ : ನಾನು ತಿದ್ದುಪಡಿಯನ್ನು ಒಪ್ಪುತ್ತೇನೆ ಮಾನ್ಯರೆ.

**ಶ್ರೀ ಎ.ಪಿ. ಪಟ್ಟಾಣಿ** (ಪಶ್ಚಿಮ ಭಾರತ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, ನಾನು ಮುಂದಿರಿಸಲಾಗಿರುವ ಪ್ರಸ್ತಾವವನ್ನು ಹ್ರಸ್ವಗೊಳಿಸಬೇಕು ಮತ್ತು ಸಂವಿಧಾನದ ಕರಡು ರಚಿಸುವಲ್ಲಿ ಸಾಂವಿಧಾನಿಕ ಸಲಹೆಗಾರರಿಗೆ ಸಹಕರಿಸಲು ಈ ಸಮಿತಿಯನ್ನು ನೇಮಕ ಮಾಡಲಾಗಿದೆ ಎಂದಷ್ಟೇ ಹೇಳಿದರೆ ಸಾಕು ಎಂದು ನಿವೇದಿಸಿಕೊಳ್ಳಲು ಆಶಿಸುತ್ತೇನೆ. ಸಂವಿಧಾನದ ಕರಡು ರಚಿಸುವ ಕೆಲಸವನ್ನು ಒಂದು ದೊಡ್ಡ ಸಮಿತಿಗೆ ವಹಿಸುವ ಆವಶ್ಯಕತೆ ಇದೆಯೆ ಎಂದು ನನಗೆ ಅಚ್ಚರಿಯಾಗಿದೆ. ಅನುಭವಿ ಸಲಹೆಗಾರರಾಗಿರುವ ಸಾಂವಿಧಾನಿಕ ಸಲಹೆಗಾರರಿಗೆ ಈ ಕೆಲಸವನ್ನು ಕೊಡುವುದು ತುಂಬಾ ಉತ್ತಮ. ಏಕೆಂದರೆ ಎಲ್ಲ ವಿವರಗಳು ಅವರಿಗೆ ಮಾತ್ರ ತಿಳಿದಿರುತ್ತವೆ.

ಕರಡನ್ನು ಬೇರೆ ಬೇರೆ ಭಾಗಗಳನ್ನಾಗಿ ನೀಡದೆ ಇಡಿಯಾಗಿ ನೀಡಬೇಕು. ತತ್ಫಲವಾಗಿ ನೇಮಕಗೊಂಡಿರುವ ಸಮಿತಿಯ ಸದಸ್ಯರು ಸಂವಿಧಾನವನ್ನು ರೂಪಿಸುವಲ್ಲಿ ಈ ಸದನದಲ್ಲಿ ಅಂಗೀಕರಿಸಲಾದ ತಿದ್ದುಪಡಿಗಳ ಮಾದರಿಯಲ್ಲಿ ಕರಡನ್ನು ರಚಿಸಲು ಅವರಿಗೆ ನೆರವಾಗುವರು. ಆದುದರಿಂದ ಪರಿಶೀಲಿಸುವುದು ಇತ್ಯಾದಿಗಳ ಬದಲಿಗೆ ಅದು ಸದನವು ಸರಳವಾಗಿ ಸಮಿತಿಯು ಸಂವಿಧಾನ ಕರಡು ರಚಿಸುವಲ್ಲಿ ಸಾಂವಿಧಾನಿಕ ಸಲಹೆಗಾರರಿಗೆ ಅದು ಸಹಕರಿಸುತ್ತದೆ ಎಂದು ಸದನವು ಹೇಳಿದರೆ ಉದ್ದೇಶವನ್ನು ಪೂರೈಸಿದಂತಾಗುತ್ತದೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಜನರಲ್) : ಮಾನ್ಯರೆ, ಹಿಂದಿನ ಭಾಷಣಕಾರರು ಈಗಷ್ಟೇ ಮಾಡಿದ ಸಲಹೆಯ ಬಗ್ಗೆ ನನ್ನ ಒಲವಿಲ್ಲ. ಅಧಿಕಾರಿಗಳು ಎಷ್ಟೇ ಸಮರ್ಥರಾಗಿದ್ದರೂ ಇಡೀ ಕೆಲಸವನ್ನು ಕಚೇರಿಗೆ ವಹಿಸಬೇಕು ಎಂಬುದು ಸರಿಯಲ್ಲ. ನಮ್ಮ ಮುಂದೆ ಸಂವಿಧಾನದ ಕರಡಿನ ರೂಪದಲ್ಲಿ ಇರಿಸಲಾದ ಹಲವು ವಿಷಯಗಳನ್ನು ಕುರಿತು ನಾವು ನಿರ್ಧಾರಗಳನ್ನು ತೆಗೆದುಕೊಂಡಿದ್ದೇವೆ. ಅಗ್ರವ್ಯಕ್ತಿಗಳ ಒಂದು ಸಮಿತಿಯನ್ನು ಸಂವಿಧಾನ ರೂಪಿಸಲು ನೇಮಕ ಮಾಡುವುದು ನಮಗೆ ಬಿಟ್ಟ ವಿಷಯವಾಗಿದೆ. ನಮ್ಮ ಮುಂದೆ ಇರಿಸಲಾದ ಕರಡಿಗೆ ನಾವು ತಿದ್ದುಪಡಿಗಳನ್ನು ಮಂಡಿಸಿದ್ದೇವೆ ಹಾಗೂ ಯಾವುದೇ ಸಂವಿಧಾನದಲ್ಲಿ ಸಾಮಾನ್ಯವಾಗಿ ಸ್ಥಾನ ಪಡೆಯಬೇಕಾದ ಇತರ ವಿಷಯಗಳನ್ನು ಮತ್ತು ಯಾವುದರ ಬಗ್ಗೆ ನಿರ್ಣಯಿಸಬೇಕಾಗಿದೆ ಎಂದುಕೊಂಡಿದ್ದೇವೆಯೋ ಆ ಎಲ್ಲವನ್ನೂ ಅಂಗೀಕರಿಸಿದ್ದೇವೆ. ಈ ಪಟ್ಟಿಗಳನ್ನು – ಅವು ಒಳ್ಳೆಯದಿರಲಿ ಅಹಿತವಿರಲಿ – ಅದನ್ನು ರೂಪಿಸುವವರ ನಿರ್ಣಯಕ್ಕೇ ಅದನ್ನು ಬಿಡುವುದು ತಪ್ಪು. ಕಾಲಕಾಲಕ್ಕೆ ನಾವು ಈ ಸದನದ ಹಲವು ಗೌರವಾನ್ವಿತ ಸದಸ್ಯರಿಂದ ಮಾರ್ಗದರ್ಶನವನ್ನು ಪಡೆಯಬಯಸುತ್ತೇವೆ. ಉದಾಹರಣೆಗೆ, ಗೌರವಾನ್ವಿತ ಸಭಾಧ್ಯಕ್ಷರು ಹಲವು ಬಾರಿ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್‌ರನ್ನು ಅವರ ಅಭಿಪ್ರಾಯವೇನು ಎಂದು ಕೇಳಿದ್ದಾರೆ ಮತ್ತು ಅದೇ ರೀತಿ ಇತರ ಹಲವರು ಕೂಡ ಕೊಡುಗೆ ನೀಡಿದ್ದಾರೆ. ಮಂಡಿಸಲಾಗಿರುವ ಎಲ್ಲ ತಿದ್ದುಪಡಿಗಳು ಅವರ ಬಳಿ ಇವೆ. ನಿಸ್ಸಂಶಯವಾಗಿ, ತಿದ್ದುಪಡಿಗಳನ್ನು ಔಪಚಾರಿಕವಾಗಿ ಮಂಡಿಸಲಾಗಿಲ್ಲ. ಆದರೆ ಅವುಗಳನ್ನು ಗಮನಕ್ಕೆ ತೆಗೆದುಕೊಳ್ಳಲಾಗುತ್ತದೆ. ಆದುದರಿಂದ ನಾನು ಈ ಸಮಿತಿಯು ಕರಡು ಮಸೂದೆಯನ್ನು ಇಲ್ಲಿ ಮಂಡಿಸಬಹುದು ಎಂದು ಸಲಹೆ ಮಾಡುತ್ತೇನೆ. ಅದರಲ್ಲಿ ಒಂದೊಂದು ಖಂಡವನ್ನೂ ಮುಂದೆ ವಿಧಾಯಕ ಸಭೆಯು ಪರಿಗಣಿಸುತ್ತದೆ.

ನಾನು ಗೌರವಾನ್ವಿತ ಮಹಿಳಾ ಸದಸ್ಯರು ಮಾಡಿದ ಸಲಹೆಯನ್ನು ಒಂದು ರೀತಿ ಒಪ್ಪುತ್ತೇನೆ. ಅಂದರೆ, ಸದಸ್ಯರಲ್ಲಿ ಯಾರೊಬ್ಬರು ಬರಲು ಅನುಕೂಲ ಕಾಣದಿರಬಹುದು ಮತ್ತು ಅವರಿಗಾಗಿ ಮಾಡಬೇಕಾದ ಕೆಲಸವು ಕಾಯುವುದಿಲ್ಲ ಎಂದಾದಲ್ಲಿ ಯಾರು ಬರಲು ಅನುಕೂಲವಿದ್ದು ಅಥವಾ ಯಾರು ತಮ್ಮ ಮೇಲೆ ಈ ಜವಾಬ್ದಾರಿ ಹೊರಲು ಸಿದ್ಧರಿರುವರೋ ಅಂತಹ ಸದಸ್ಯರನ್ನಾಗಿ ನೇಮಿಸಲು ಅಥವಾ ಸಹ ಸದಸ್ಯರನ್ನಾಗಿ ಮಾಡಿಕೊಳ್ಳಲು ಅಧಿಕಾರವನ್ನು ಸಭಾಧ್ಯಕ್ಷರಿಗೆ ಕೊಡಬೇಕು. ಸ್ವಾಮಿ ಸದನ ಒಪ್ಪಿದರೆ ನಾನು ಸಭಾಧ್ಯಕ್ಷರಿಗೆ ಆ ಅಧಿಕಾರ ಕೂಡ ಕೊಡಲು ಇಚ್ಛಿಸುತ್ತೇನೆ. ಇಡೀ ಜವಾಬ್ದಾರಿಯನ್ನು ಇಬ್ಬರೋ ಅಥವಾ ಮೂವರೋ ಸದಸ್ಯರು ಸೇರಿ ಹಂಚಿಕೊಳ್ಳುವುದಲ್ಲ. ಉದಾಹರಣೆಗೆ ಶ್ರೀ ಸಂತಾನಮ್ ಇಲ್ಲಿ ಈ ವಿಷಯಗಳಲ್ಲಿ ಭಾರಿ ಆಸಕ್ತಿ ವಹಿಸುತ್ತಿದ್ದಾರೆ. ಅವರು ದೆಹಲಿಯಲ್ಲೇ ಇರುತ್ತಾರೆ ಒಂದು ವೇಳೆ ಇತರರು ತಮಗೆ ಸಮಿತಿಯ ಕಾರ್ಯಗಳನ್ನು ನಡೆಸಿಕೊಂಡು ಹೋಗುವುದು ಅನುಕೂಲಕರ ಎಂದು ಕಾಣದಿದ್ದರೆ, ಈ ಮಹನೀಯರಿಗೆ ಅದನ್ನು ವಹಿಸಿಕೊಳ್ಳಲು ಕೇಳಿಕೊಳ್ಳಬಹುದು. ಆದುದರಿಂದ ಸಭಾಧ್ಯಕ್ಷರಿಗೆ ಈ ಅಧಿಕಾರವನ್ನು ಕೊಡುವ ಮಾರ್ಪಾಡಿನೊಂದಿಗೆ ಶ್ರೀ ಖೇರ್ ಅವರ ತಿದ್ದುಪಡಿಯನ್ನು ಅಂಗೀಕರಿಸಬಹುದು.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಜನರಲ್) : ನಾನು ಶ್ರೀಖೇರ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಆದರೆ ನಾನೂ ಕೆಲವು ಮುಖ್ಯ ವಿಷಯಗಳನ್ನು ಕುರಿತು ಕೆಲವು ಮಾಹಿತಿ ಹೊಂದಲು ಇಚ್ಛಿಸುತ್ತೇನೆ. ಈವರೆಗೆ ಈ ಸದನದಲ್ಲಿ ಕೆಲವು ವಸ್ತು ವಿವರಗಳನ್ನು ನಿರ್ಧರಿಸದೆ ಬಿಟ್ಟಿರುತ್ತೇವೆ. ಉದಾಹರಣೆಗೆ

ನಾವಿನ್ನೂ ಪೌರತ್ವದ ವ್ಯಾಖ್ಯೆ ಬಗ್ಗೆ ನಿರ್ಧರಿಸಬೇಕಿದೆ, ಸಂವಿಧಾನದ ಬದಲಾವಣೆಗೆ ಕ್ರಮ ಕುರಿತೂ ತುರ್ತು ಸ್ಥಿತಿ ಅಧಿಕಾರಗಳನ್ನು ಕುರಿತು ಮತ್ತು ಸಂವಿಧಾನದ ಹಣಕಾಸು ಖಂಡಗಳನ್ನು ನಿರ್ಧರಿಸಬೇಕಿದೆ. ಈಗ ಈ ಸಮಿತಿಯು ಕೆಲಸ ಆರಂಭಿಸುತ್ತದೆಯೋ ಅಥವಾ ಈ ವಿಷಯಗಳನ್ನು ಮುಂದಿನ ಅಧಿವೇಶನದಲ್ಲಿ ನಿರ್ಧರಿಸುವವರೆಗೂ ಕಾಯಬೇಕೋ ಎಂಬುದನ್ನು ತಿಳಿಯಬಯಸುತ್ತೇನೆ. ಈ ಸಮಿತಿಯು ಸುಮ್ಮನೆ ಕುಳಿತು ವಾಸ್ತವವಾಗಿ ಕೆಲಸವನ್ನೇ ಮಾಡಬಾರದೆಂದಿದ್ದರೆ ಅದನ್ನು ಸ್ಪಷ್ಟ ಮಾಡಲೇಬೇಕು. ತಾನೇ ಸಮಿತಿಯ ಖಂಡಗಳ ಕರಡು ರಚಿಸಲು ಮುಂದುವರಿಯಬೇಕು ಎಂದು ಸಲಹೆ ಮಾಡುತ್ತೇನೆ. ಆದರೆ ಅವರು ಈಗಾಗಲೇ ಸ್ಪಷ್ಟ ಎಂದು ನಿರ್ಧರಿಸಿರುವ ವಿಷಯಗಳನ್ನು ಇಟ್ಟುಕೊಳ್ಳಬೇಕು. ಇತರ ಭಾಗಗಳನ್ನು ಎದ್ದುಕಾಣುವಂತೆ ಮಾಡಲು ದೊಡ್ಡ ಅಕ್ಷರಗಳಲ್ಲಿ ಅಥವಾ ಇಟ್ಯಾಲಿಕ್‌ನಲ್ಲಿ ಬರೆದಿರಬಹುದು. ಅಂದರೆ ನಾವು ಇಲ್ಲಿ ಸಂಧಿಸಿದಾಗ ಎರಡು ಭಾಗಗಳಿಗೆ ಬೇರೆ ಬೇರೆಯ ಕ್ರಮವನ್ನು ಅಳವಡಿಸಬಹುದು. ನಮ್ಮ ನಿರ್ಧಾರಗಳು ಹೊಂದಿರುವ ಭಾಗಗಳಿಗೆ ಸಂಬಂಧಿಸಿದಂತೆ ಕೇವಲ ಅದರ ಶಾಬ್ದಿಕ ಭಾಗವನ್ನು ಪರಿಶೀಲಿಸಲಾಗುತ್ತದೆ ಮತ್ತು ಯಾವುದೇ ವಿಷಯಗಳಲ್ಲಿ ತಿದ್ದುಪಡಿಗಳನ್ನು ಅಳವಡಿಸುವುದಿಲ್ಲ. ಅದೇ ಯಾವುದೇ ನಿರ್ಧಾರ ತೆಗೆದುಕೊಳ್ಳದ ವಿಷಯಗಳನ್ನುಳ್ಳ ಭಾಗಗಳಿಗೆ ಸಂಬಂಧಿಸಿದಂತೆ ನಾವು ವಿಷಯಗಳನ್ನು ಕುರಿತಂತೆ ತಿದ್ದುಪಡಿಗಳನ್ನು ಮಂಡಿಸುವುದಾಗುತ್ತದೆ. ಆದುದರಿಂದ ಈ ಸಮಿತಿಯು ಇನ್ನೂ ನಿರ್ಧರಿಸದ ಅಂಶಗಳನ್ನು ನಿರ್ಧರಿಸುವವರೆಗೂ ಕಾಯುತ್ತದೆ ಎಂದು ನನಗನಿಸುವುದಿಲ್ಲ.

ಅವರು ಒಂದು ತಾತ್ಕಾಲಿಕ ಕರಡು ಸಿದ್ಧಪಡಿಸಲಿ ಮತ್ತು ಇಡೀ ಕರಡನ್ನು ಮುಂದಿನ ಅಧಿವೇಶನದ ಮುಂದೆ ತರಲಿ. ನಾವೀಗಾಗಲೇ ನಿರ್ಧರಿಸಿರುವ ಆ ಭಾಗಗಳಿಗೆ ಶಾಬ್ದಿಕ ತಿದ್ದುಪಡಿಗಳನ್ನು ಬಳಿಕ ಪರಿಗಣಿಸೋಣ. ಆದರೆ ಸಂವಿಧಾನದ ನೀತಿಗಳನ್ನು ಕುರಿತ ವಿಷಯಗಳಲ್ಲಿ ನಾವು ಅವುಗಳನ್ನು ಹೊಸದಾಗಿಯೇ ಪರಿಶೀಲಿಸುವುದನ್ನು ಪರಿಗಣಿಸಬಹುದು. ಹಾಗಾಗಿ ನಾವು ಸದನದ ವೇಳೆಯನ್ನು ಉಳಿಸಬಹುದು. ಇಲ್ಲದಿದ್ದರೆ ಈ ಎಲ್ಲ ಬಗೆಹರಿಯದ ವಿವರಗಳನ್ನು ನಿರ್ಧರಿಸಲು ಇನ್ನೊಂದು ಅಧಿವೇಶನ ಎಂದರೆ ಸದಸ್ಯರಿಗೆ ದೊಡ್ಡ ಶ್ರಮವೇ ಆಗುತ್ತದೆ. ಆದುದರಿಂದ ನಾವು ನವೆಂಬರಿನಲ್ಲಿ ಸೇರುವಷ್ಟರಲ್ಲಿ ನಾವು ಇಡೀ ಮಸೂದೆಯ ಸಂಪೂರ್ಣ ಕರಡೊಂದನ್ನು ನಾವೀಗ ನಿರ್ಧರಿಸುವ ವಿಷಯಗಳು ಮತ್ತು ಇನ್ನೂ ನಿರ್ಧರಿಸಬೇಕಾಗಿರುವ ಇತರ ವಿಷಯಗಳು ಸೇರಿದಂತೆ ಹೊಂದಿರುತ್ತೇವೆ ಮತ್ತು ಹಾಗಾಗಿ ನಾವು ಈ ಕ್ರಮವನ್ನು ಅಳವಡಿಸಿಕೊಳ್ಳಬಹುದು ಎಂದು ನಾನು ಆಶಿಸುತ್ತೇನೆ. ಇದು ಸಮ್ಮತವಾಗಿದೆ ಎಂದು ಆಶಿಸುತ್ತೇನೆ. ಶ್ರೀ ಖೇರ್ ಅವರ ತಿದ್ದುಪಡಿಯನ್ನು ನಾನು ಸಲಹೆ ಮಾಡಿರುವಂತೆ ಹೆಚ್ಚಿನ ವ್ಯಾಪಕ ದೃಷ್ಟಿಯಿಂದ ವ್ಯಾಖ್ಯಾನಿಸಬೇಕು.

**ಸೇಠ್ ಗೋವಿಂದ ದಾಸ್** (ಸಿ.ಪಿ. ಮತ್ತು ಬೇರಾರ್ : ಜನರಲ್) : *[ಮಾನ್ಯ ಸಭಾಧ್ಯಕ್ಷರೆ, ಒಂದು ಬಹುಮುಖ್ಯವಾದ ವಿಷಯವನ್ನು ಇನ್ನು ನಿರ್ಧರಿಸಲಾಗಿಲ್ಲ ಮತ್ತು ಈ ಸಂಬಂಧವಾಗಿ ನಾನು ನಮ್ಮ ಭಾಷೆ ಯಾವುದಾಗಿರಬೇಕು ಎಂದು ಹೇಳಬಯಸುತ್ತೇನೆ. ನೀವು ನಾವು ರಚಿಸುತ್ತಿರುವ ಸಂವಿಧಾನದ ಕರಡು ಮೊದಲಿಗೆ ನಮ್ಮ ರಾಷ್ಟ್ರೀಯ ಭಾಷೆಯಲ್ಲಿರುತ್ತದೆ ಮತ್ತು ಆವಶ್ಯಕ ಎಂದು ಪರಿಗಣಿಸಿದರೆ ಇಂಗ್ಲಿಷ್‌ಗೆ ಭಾಷಾಂತರಿಸಲಾಗುತ್ತದೆ ಎಂದು ಹೇಳಿದ್ದಿರಿ. ಈಗ ನೇಮಿಸಲ್ಪಟ್ಟಿರುವ ಸಮಿತಿಯು ತನ್ನ ವ್ಯವಹಾರವನ್ನು ಯಾವ ಭಾಷೆಯಲ್ಲಿ ಮಾಡುತ್ತದೆ ಎಂದು ತಿಳಿಯುಬಸುತ್ತೇನೆ. ಈ ವಿಷಯ ಸಮಿತಿಯಿಂದ ಗಮನಿಸಲಾಗುತ್ತದೆಯೇ ಇಲ್ಲವೆ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

ಇನ್ನೊಂದು ವಿಷಯವೆಂದರೆ ನಾವು ರಚಿಸುತ್ತಿರುವ ಮಸೂದೆಯ ಕರಡು ತಾವು ಹೇಳಿದಂತೆ ಮೊದಲು ನಮ್ಮ ಭಾಷೆಯಲ್ಲಿರುತ್ತದೆಯೋ ಅಥವಾ ಇಂಗ್ಲಿಷ್‌ನಲ್ಲಿರುತ್ತದೆಯೋ ಎಂಬುದನ್ನು ನಾನು ತಿಳಿಯಬೇಕು ಮತ್ತು ನಾವು ರಚಿಸುತ್ತಿರುವ ಮಸೂದೆಯ ಕರಡು ಮೊದಲಿಗೆ ನಮ್ಮ ರಾಷ್ಟ್ರೀಯ ಭಾಷೆಯಲ್ಲಿರಬೇಕು ಎಂದು ನಾನು ಸಲಹೆ ಮಾಡುತ್ತೇನೆ. ನಮ್ಮ ರಾಷ್ಟ್ರೀಯ ಭಾಷೆ ಯಾವುದಿರಬೇಕು ಎಂಬುದು ಕೂಡ ಈಗ ನಿರ್ಧಾರವಾಗಬೇಕು]*

**ಶ್ರೀ ಎಮ್.ಎಸ್. ಅನೆ** (ಡೆಕ್ಕನ್ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೇ, ನಾನು ಕೆಲವು ಟಿಪ್ಪಣಿಗಳನ್ನು ಮಾಡಲು ಬಂದಿದ್ದೇನೆ. ಏಕೆಂದರೆ ನನ್ನ ಮಿತ್ರ ಶ್ರೀ ಸಂತಾನಮ್ ಅವರು ಮಾಡಿರುವ ಒಂದು ಸಲಹೆ ಅಸಾಂವಿಧಾನಿಕ ಎಂದು ತೋರುತ್ತದೆ. ಶ್ರೀ ಸಂತಾನಮ್‌ರವರು ಕರಡು ರಚಿಸುವ ಸಮಿತಿಯ ಕೆಲಸವು ನಮ್ಮ ನಿರ್ಧಾರಗಳನ್ನಾಧರಿಸಿದ ಖಂಡಗಳು ಉಳಿದ ಖಂಡಗಳಿಂದ ಸ್ಪಷ್ಟವಾಗಿ ಗುರುತಿಸುವಂತಿರಬೇಕು ಎಂದು ತೋರಿಸುವಂತಹ ಒಂದು ಕರಡನ್ನು ಸಿದ್ಧಪಡಿಸಬೇಕು ಎಂದು ಕೇಳಿರುವರು. ಅವರು ಮತ್ತೆ ಇಲ್ಲಿ ಈಗಾಗಲೇ ತೆಗೆದುಕೊಂಡ ನಿರ್ಧಾರಗಳನ್ನಾಧರಿಸಿದ ಖಂಡಗಳಲ್ಲಿ ಇಲ್ಲಿ ಶಾಬ್ದಿಕ ತಿದ್ದುಪಡಿಗಳನ್ನು ಮಾತ್ರ ಮಾಡುವಂತಿರಬೇಕು ಮತ್ತು ಯಾವುದೇ ಗಮನಾರ್ಹ ತಿದ್ದುಪಡಿಯನ್ನು ಆ ಖಂಡಗಳಲ್ಲಿ ಮಾಡಲು ಅನುಮತಿಸಬಾರದು ಎಂದು ಹೇಳಿದರು. ಮಾನ್ಯರೆ, ನಾನು ಆ ರೀತಿಯಲ್ಲಿ ಸದನದ ಹಕ್ಕನ್ನು ನಿರ್ಬಂಧಿಸಲಾಗದು ಎಂದು ನಿವೇದಿಸುತ್ತಿದ್ದೇನೆ. (ಕೇಳಿ, ಕೇಳಿ) ನೀವು ಈಗ ನಿರ್ಧಾರ ತೆಗೆದುಕೊಂಡಾಗ ಇದೊಂದು ವಿಷಯ. ಮಸೂದೆ (ಬಿಲ್)ಯ ಇಡೀ ಕರಡು ನಿಮ್ಮ ಮುಂದೆ ಇದ್ದಾಗ, ತಮಗೆ ಈ ಹಿಂದೆ ತಾವು ತೆಗೆದುಕೊಂಡ ಕೆಲವು ನಿರ್ಧಾರಗಳನ್ನು ಕುರಿತು ಮತ್ತೆ ಚರ್ಚಿಸುವ ಆವಶ್ಯಕತೆ ಬರಬಹುದು. ನನ್ನ ಅಭಿಪ್ರಾಯದಲ್ಲಿ ಅಂತಹ ಕಟ್ಟುನಿಟ್ಟಾದ ನಿರ್ಬಂಧಗಳು ಅನಪೇಕ್ಷಣೀಯ. ಮುಖ್ಯವಾಗಿ ಈ ನಿರ್ದಿಷ್ಟ ವಿಷಯಕ್ಕೆ ಒತ್ತು ಕೊಡಲು ನಾನು ಬಯಸುತ್ತೇನೆ.

ಎರಡನೆಯದಾಗಿ, ಪಟ್ಟಿಯಲ್ಲಿರುವ ಹೆಸರುಗಳಿಗೆ ಇನ್ನೂ ಯಾರನ್ನಾದರೂ ನಾಮಕರಣ ಮಾಡಲು ಸಭಾಧ್ಯಕ್ಷರಿಗೆ ಅವಕಾಶವಿರಬೇಕು ಎಂಬ ಸಲಹೆ ಮಾಡಲಾಗಿದೆ. ಸಾಧಾರಣವಾಗಿ ಇದಕ್ಕೆ ಯಾರೂ ಆಕ್ಷೇಪಣೆ ತೆಗೆಯಲಾರರು. ನಾವು ಏಕೆ ಕೆಲವು ಹೆಸರುಗಳನ್ನು ಕೊಡಲು ಯೋಚಿಸಿದ್ದೇವೆಂದರೆ ಇಂತಹ ವಿಷಯದಲ್ಲಿ ಸಭಾಧ್ಯಕ್ಷರನ್ನು ಅವರ ಪಕ್ಷಪಾತದ ಜವಾಬ್ದಾರಿಯಿಂದ ಹಗುರಗೊಳಿಸುವ ಉದ್ದೇಶದಿಂದ ಹತ್ತು ಮಂದಿ ಅವರ ಬಳಿ ಹೋಗಿ ನಾನು ಈ ವಿಷಯವಾಗಿ ತುಂಬ ಅರ್ಹತೆಯುಳ್ಳ ವ್ಯಕ್ತಿ ಎನಿಸಿದೆ. ಹಾಗಾಗಿ ನನ್ನ ಹೆಸರು ಅಲ್ಲಿರಬೇಕು ಎಂದು ಹೇಳಿದರೆ ಅವರು ಅನುಕೂಲವಲ್ಲದ ಸ್ಥಿತಿಯಲ್ಲಿರುವ ಹಾಗೆ ಅದು ಮಾಡುತ್ತದೆ. ಪಟ್ಟಿಯಲ್ಲಿ ಕೊಟ್ಟಿರುವ ಹೆಸರುಗಳನ್ನು ಅಳವಡಿಸುವುದು ಉತ್ತಮ. ಯಾರಿಗೇ ಆಗಲಿ ಸಲಹೆಗಳನ್ನು ಮಾಡುವ ಮೂಲಕ ಸದಸ್ಯರಿಗೆ ನೆರವಾಗಲು ಸಮಿತಿಯಲ್ಲೇ ಇರಲೇಬೇಕೆಂಬ ಆವಶ್ಯಕತೆ ಇಲ್ಲ.

ಆದುದರಿಂದ ನಾನು ಮಹಿಳೆಯೊಬ್ಬರು ಸೂಚಿಸಿದ ಹಾಗೂ ನನ್ನ ಗೌರವಾನ್ವಿತ ಗೆಳೆಯ ಶ್ರೀ ಅನಂತಶಯನಂ ಅಯ್ಯಂಗಾರ್‌ರವರ ಬೆಂಬಲ ಸೂಚಿಸಿದ ಈ ಸಲಹೆಯನ್ನು ವಿರೋಧಿಸುತ್ತೇನೆ.

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಜನರಲ್) : ಮಾನ್ಯ ಸಭಾಧ್ಯಕ್ಷರೆ, ನಾನು ತಿಳಿದಂತೆ ಈ ಸಮಿತಿಯವರ ಕೆಲಸ ಈ ಸದನ ಅಳವಡಿಸಿಕೊಂಡಂತೆ ಕೂಡಲೇ ವ್ಯವಹಾರದೊಂದಿಗೆ ಮುಂದುವರಿಯುವುದಾಗಿದೆ. ಅಂದರೆ ಒಕ್ಕೂಟ ಮತ್ತು ಪ್ರಾಂತೀಯ ಸಂವಿಧಾನಗಳು ಸಂಬಂಧಿಸಿದಂತೆ ಭಾಷೆ, ಪೌರತ್ವ ಮತ್ತು ಮೊದಲ ಭಾಗದ ಎತ್ತಿಹಿಡಿಯಬೇಕಾದ ತತ್ತ್ವಸೂತ್ರಗಳು ಈ ವಿಷಯಗಳು ಹೊರತುಪಡಿಸಿ ಈ ಸದನವು ಪರಿಗಣಿಸಿರುವಂತೆ ರೂಪಿಸಲಾಗುತ್ತದೆ. ಉಳಿದ ಎಲ್ಲ ವಿಷಯಗಳನ್ನೂ ಈ ವಿಷಯಗಳನ್ನು ಸಮಿತಿಯು ಹಾಗೂ ಈ ಸದನದಿಂದ ಇನ್ನೂ ನಿರ್ಧಾರವಾಗಿರದ ಇತರ ವಿಷಯಗಳನ್ನು ವಿಶದವಾಗಿ ಚರ್ಚಿಸುವವರೆಗೂ ಮುಂದಿನ ಅಧಿವೇಶನದಲ್ಲಿ ಪುನಃ ಚರ್ಚಿಸಲಾಗುವುದಿಲ್ಲ. ಆದರೆ ಅದು ತನ್ನ ವ್ಯವಹಾರವನ್ನು ಸಮಿತಿ ಮುಂದುವರಿಸುವುದನ್ನು ತಡೆಯುವುದಿಲ್ಲ. ಶ್ರೀ ಸಂತಾನಮ್ ಅವರ ಆತಂಕವು ಹಾಗಾಗಿ ಸಮರ್ಥನೀಯವಲ್ಲ. ಈ ಸಮಿತಿಯು ತನ್ನ ವ್ಯವಹಾರವನ್ನು ಕೂಡಲೇ ಮುಂದುವರಿಸಬೇಕಾಗಿದೆ. ಆದುದರಿಂದ ಮಾನ್ಯರೆ, ನಾನು ಶ್ರೀ ಸಂತಾನಮ್ ಆತಂಕಪಡುವುದು ಬೇಡವೆಂದು ಭಾವಿಸುತ್ತೇನೆ.

ಎರಡನೆಯದಾಗಿ, ಶ್ರೀ ಪಟ್ಟಾಣಿಯವರು ಸಲಹೆ ಮಾಡಿದಂತೆ, ಸಂವಿಧಾನವನ್ನು ಒಬ್ಬ ತಜ್ಞ ಮಹನೀಯರು ಸಿದ್ಧಪಡಿಸಬಹುದು ಎಂದು ನಾನು ಭಾವಿಸುತ್ತೇನೆ. ವೈಯಕ್ತಿಕವಾಗಿ, ಮೂರು ಜನರುಳ್ಳ

ಒಂದು ಸಮಿತಿಯು ಅದನ್ನು ಪರಿಶೀಲಿಸಿದರೆ ಸಾಕು ಎಂದು ಭಾವಿಸುವವನಿದ್ದೆ. ಆದರೆ ಅವರಲ್ಲಿ ಕೆಲವು ಸದಸ್ಯರು ಗೈರು ಆಗುವ ಸಂಭವಿರುವುದರಿಂದ ಏಳು ಹೆಸರುಗಳನ್ನು ಸಲಹೆ ಮಾಡಲಾಗಿದೆ. ಗೈರು ಆಗಿರುವ ವ್ಯಕ್ತಿಗಳಿಗೆ ಹೆಸರುಗಳನ್ನು ತುಂಬಲು ಸಭಾಧ್ಯಕ್ಷರನ್ನು ಕೇಳುವುದರಲ್ಲಿ ನನಗೆ ಒಲವಿಲ್ಲ. ಮೂರೇ ಸಾಕು; ಐವರು ಸ್ವಲ್ಪ ಹೆಚ್ಚಾಗುತ್ತದೆ ಮತ್ತು ಏಳು ಅತಿ ಹೆಚ್ಚಾಗುತ್ತದೆ. ಆದುದರಿಂದ ನಾನು ಶ್ರೀ ಖೇರ್ ಮತ್ತು ಶ್ರೀ ಸಂತಾನಮ್ ಅವರು ಪ್ರಸ್ತಾವಿಸಿದಂತೆ, ಅಲ್ಲಿರುವ ಹೆಸರುಗಳನ್ನು ಅನುಮತಿಸಬೇಕು. ಗೈರು ಆದವರ ಸ್ಥಾನಕ್ಕೆ ಇನ್ನಾರನ್ನೂ ತೆಗೆದುಕೊಳ್ಳಲು ಸಭಾಧ್ಯಕ್ಷರಿಗೆ ಅಧಿಕಾರ ನೀಡಬಾರದು ಮತ್ತು ಶ್ರೀ ಖೇರ್ ಅವರು ಪ್ರಸ್ತಾವಿಸಿದ ಹೆಸರುಗಳನ್ನು ಒಪ್ಪಬೇಕು.

**ಡಾ. ಡಿ. ಪಟ್ಟಾಭಿ ಸೀತಾರಾಮಯ್ಯ** (ಮದ್ರಾಸ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಅನುಮತಿ ಇರುವಷ್ಟು ಅಭಿವ್ಯಕ್ತಿಗಿಂತ ಹೆಚ್ಚು ನಿರ್ಣಯವನ್ನು ನಾವು ಓದುವಂತಿಲ್ಲ. ಆದುದರಿಂದ ನಾನು ಶ್ರೀ ಸಂತಾನಮ್ ಅವರು ಮಾಡಿದ ಸಲಹೆಯಿಂದ ವ್ಯಾಕುಲಕ್ಕೊಳಗಾಗಿಲ್ಲ. ಒಬ್ಬ ವಾಸ್ತವಿಕ ರಾಜಕಾರಣಿಯಾಗಿ ಸಿದ್ಧವಾಗಿರಬೇಕಾದ ಮಸೂದೆ ಸಂಪೂರ್ಣವಾಗಿರಬೇಕು ಎಂದು ಅವರು ನಿರೀಕ್ಷಿಸುತ್ತಾರೆ. ಮತ್ತು ಕೆಲವು ಭಾಗಗಳಲ್ಲಿ ಅಪೂರ್ಣವಾಗಿರುವಂತೆ ಮತ್ತು ಇತರ ಭಾಗಗಳಲ್ಲಿ ಸಂಪೂರ್ಣ ಖಾಲಿ ಇರುವಂತೆ ಆಗಬಾರದು. ಅಂದರೆ ಅವರು ಮಸೂದೆಯು ಸಂಪೂರ್ಣವಾದುದಾಗಿರಬೇಕು ಎಂದು ಆಲೋಚಿಸುತ್ತಾರೆ. ಅದು ಸಂಪೂರ್ಣವಾದಾಗ ಅವರ ಸಲಹೆ ಕಾರ್ಯಾಚರಣೆಗೆ ಬರುತ್ತದೆ. ಸಂಪೂರ್ಣ ಮಸೂದೆ ಇರಬೇಕೇ ಮತ್ತು ಅವರ ಸಲಹೆ ಕಾರ್ಯಾಚರಣೆಗೆ ಬರಲು ಅನುಮತಿಸಬೇಕೇ ಎಂಬುದು ಪರಿಗಣಿಸಬೇಕಾದ ವಿಷಯವಾಗಿದೆ. ಅದನ್ನು ಸ್ವೀಕರಿಸಬೇಕಿದ್ದಲ್ಲಿ ಆಗ ಅದು ಇಡೀ ಸದನದ ಅಧಿಕಾರಗಳನ್ನು ತೆಗೆದುಹಾಕಿದಂತೆ ಆಗುತ್ತದೆ ಮತ್ತು ಸಂವಿಧಾನ ರಚನಾಸಭೆಯ ಪ್ರತಿನಿಧಿಯಾಗಿರುವಂತಹ ಒಂದು ವಿಧದ ಸಮಿತಿಯನ್ನು ರಚಿಸಿದಂತೆ ಆಗುತ್ತದೆ, ಅದು ಯಾವುದೇ ವಿಧದಿಂದ ಅಪೇಕ್ಷಣೀಯವಲ್ಲ. ಶ್ರೀ ಸಂತಾನಮ್ ಸ್ವತಃ ತಾವೇ ಖಚಿತವಾಗಿ ಒಕ್ಕೂಟ ಸಂವಿಧಾನ ಸಮಿತಿಯ ಮೊದಲ ಮೂರು ಅಧ್ಯಾಯಗಳನ್ನು ಮತ್ತು ಅದರದೇ ಕಡೆಯ ಎರಡು ತುಣುಕುಗಳನ್ನು ವಿವರಿಸಿದಂತೆ ಹಾಗೂ ಪ್ರಾಂತೀಯ ಮತ್ತು ಒಕ್ಕೂಟ ಅಧಿಕಾರಗಳ ಸಮಿತಿಯ ಸಮವರ್ತಿ ಪಟ್ಟಿಗಳ ಜತೆಯ ಮತ್ತು ದೊಡ್ಡ ಪಾಲು ಬಿಟ್ಟುಹೋಗಿದ್ದು ಇಡೀ ಸದನವು ಅದನ್ನು ಇನ್ನೂ ಪರಿಗಣಿಸಬೇಕಿದೆ. ಉದಾಹರಣೆಗೆ, ಒಕ್ಕೂಟ ಸಂವಿಧಾನ ಸಮಿತಿ ಮತ್ತು ಮಾದರಿ ಪ್ರಾಂತೀಯ ಸಂವಿಧಾನ ಸಮಿತಿ ಇವು ಜಂಟಿಯಾಗಿ ಭಾಷಾವಾರು ಪ್ರಾಂತ್ಯಗಳ ವಿಷಯವಾಗಿ ಒಂದು ಉಪಸಮಿತಿಯನ್ನು ನೇಮಿಸಿತು ಮತ್ತು ಅದರ ಶಿಫಾರಸು ಎರಡೂ ಸಮಿತಿಗಳ ಜಂಟಿ ಸಮಿತಿಯಿಂದ ಪರಿಗಣಿಸಲ್ಪಟ್ಟಿತ್ತು. ಅದಕ್ಕೆ ಇನ್ನು ಮುಂದೆ ಏನಾಗಬೇಕು? ಅದು ತ್ರಿಶಂಕುವಿನಂತೆ ಗಾಳಿಯಲ್ಲಿ ತೂಗಾಡುತ್ತಿರಬೇಕೆ? ಅದನ್ನು ಉಪೇಕ್ಷಿಸಬೇಕೆ? ನಾನು ಅದನ್ನು ಒಂದು ಉದಾಹರಣೆಯಾಗಿ ಮಾತ್ರ ನಮೂದಿಸುತ್ತಿದ್ದೇನೆ. ಪ್ರಶ್ನೆಯನ್ನು ಕೇಳಲೇಬೇಕೆಂಬ ಚಟದಿಂದ ನಾನು ಕೇಳುತ್ತಿಲ್ಲ ವಿಷಯಕ್ಕೆ ಒಂದು ಉದಾಹರಣೆಯನ್ನು ತೆಗೆದುಕೊಳ್ಳಬೇಕಷ್ಟೆ. ನವೆಂಬರ್ ೬ರಂದು ವಿಧಾಯಕ ಸಭೆ ಪುನಃ ಸೇರಿದಾಗ ಯಾವ ಉದ್ದೇಶಕ್ಕಾಗಿ ಪುನಃ ಸೇರಬೇಕು? ಅದು ಪ್ರತಿ ವಿವರದಲ್ಲೂ ಪೂರ್ಣ ಇರುವ ಮಸೂದೆಯನ್ನು ಅದರ ಮುಂದೆ ಮಂಡಿಸಲಾಗುವುದೆ? ಮತ್ತು ಬಳಿಕ ಅದನ್ನು ಪರಿಗಣಿಸುವುದೆ? ಎಂದು ನಾನು ಕೇಳುತ್ತೇನೆ. ಹಾಗಿದ್ದಲ್ಲಿ ಅದು ಭಾಗಗಳನ್ನು ಒಳಗೊಂಡಿರುತ್ತದೆ. ಅವನ್ನು ಈ ಸದನವು ಭಾಗಶಃವೂ ಕೂಡ ಪರಿಗಣಿಸಿಯೇ ಇಲ್ಲ. ಅದು ಹಾಗಿಲ್ಲದಿದ್ದಲ್ಲಿ ಆಗ ನವೆಂಬರ್ ೬ರ ಅಧಿವೇಶನವು ಬಿಟ್ಟುಹೋದ ಅಂಶಗಳ ಪರಿಗಣನೆಗೆ ತಾನೇ ಹೇಳಬೇಕು. ಆ ಸಂದರ್ಭದಲ್ಲಿ ಯಾವ ಮಸೂದೆಯೂ ಆ ಹೊತ್ತಿಗೆ ಸಿದ್ಧವಿರುವುದಿಲ್ಲ. ನನಗೆ ತಾರ್ಕಿಕವಾಗಿ ತಾನೇ ಎದುರಾಗುತ್ತಿರುವ ಕಷ್ಟ ಇದು. ಆದುದರಿಂದ ಸಭಾಧ್ಯಕ್ಷರು ಪರಿಸ್ಥಿತಿಯನ್ನು ಸ್ಪಷ್ಟಪಡಿಸಬೇಕು ಮತ್ತು ಹಾಗೂ ಸಾಧ್ಯವಾದರೆ ಪರಿಗಣಿಸದೆ ಬಿಡಲಾಗಿರುವ ಎಲ್ಲ ಅಂಶಗಳನ್ನು ಪೂರ್ಣಗೊಳಿಸಲು ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಸದನದ

ಅಧಿವೇಶನವನ್ನು ಕರೆಯಬಹುದು. ಆಗ ಕರಡುಗಾರರಿಗೆ ಅಥವಾ ಕರಡು ರಚಿಸುವ ಸಮಿತಿಗೆ ಇಲ್ಲವೆ ಪರಿಶೀಲನಾ ಸಮಿತಿಗೆ ಮಂಡಿಸುವ ವಸ್ತುಗಳು ಸಾಕಷ್ಟು ದೊರಕಿರುತ್ತವೆ ಮತ್ತು ಆಗಷ್ಟೇ ಅವರು ವಿಷಯದೊಂದಿಗೆ ವ್ಯವಹರಿಸಬಹುದು. ಮುಂದೆ ಏನಾಗುತ್ತದೆ ಎಂಬುದನ್ನು ನಮ್ಮ ಮನಸ್ಸಿನಲ್ಲಿ ಸ್ಪಷ್ಟವಾಗಿ ಗ್ರಹಿಸಲು ಸಾಧ್ಯವಾಗುವಂತೆ ಮಾಡಲು, ಹಾಗೂ ಉಳಿದುಹೋಗಿರುವ ಅಂಶಗಳನ್ನು ಪರಿಗಣಿಸಲು ಸೆಪ್ಟೆಂಬರ್ ಅಥವಾ ಅಕ್ಟೋಬರ್‌ನಲ್ಲಿ ಸದನದ ಸಮಾವೇಶವನ್ನು ಕರೆಯುವಂತೆ ಸಭಾಧ್ಯಕ್ಷರನ್ನು ಒತ್ತಾಯಿಸಲು ನಾನು ಈ ಸಲಹೆಯನ್ನು ಮುಂದಿಡುತ್ತಿದ್ದೇನೆ.

**ಪಂಡಿತ್ ಲಕ್ಷ್ಮೀಕಾಂತ ಮೈತ್ರ** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ಗೌರವಾನ್ವಿತ ಮಿತ್ರ ಶ್ರೀ ಖೇರ್ ಮಂಡಿಸಿದ ತಿದ್ದುಪಡಿಯು ಬಹುಜಾಗರೂಕತೆಯಿಂದ ಪರೀಶೀಲಿಸಲು ತಕ್ಕುದಾಗಿದೆ ಮತ್ತು ಆ ಸಂಬಂಧವಾಗಿ ಶ್ರೀ ಸಂತಾನಮ್ ಅವರು ಮಾಡಿದ ಟಿಪ್ಪಣಿಗಳನ್ನು ಸಹ ಸೂಕ್ಷ್ಮವಾಗಿ ಪರಿಶೀಲಿಸಬೇಕಿದೆ. ಈ ಸದನದ ಬಹುತೇಕ ಸದಸ್ಯರಿಗೆ ಮುಂದಿನ ಅಧಿವೇಶನದಲ್ಲಿ ಏನು ಮಾಡಬೇಕಿದೆ ಎಂಬುದರ ಸ್ಪಷ್ಟ ಚಿತ್ರ ಇನ್ನೂ ದೊರೆತಿಲ್ಲ ಎಂಬುದು ನನಗೆ ಖಚಿತವಾಗಿದೆ. ಶ್ರೀ ಸಂತಾನಮ್ ಅವರು ಸದನವು ಇನ್ನೂ ಒಕ್ಕೂಟ ಅಧಿಕಾರಗಳ ಸಮಿತಿಯ ವರದಿಯ ಒಂದು ಭಾಗವನ್ನು ಪರಿಶೀಲಿಸಿಲ್ಲ ಎಂದು ಹೇಳುತ್ತಾರೆ. ಈ ಸದನವು ಅದನ್ನು ಪೂರ್ತಿಯಾಗಿ ಸ್ವೀಕರಿಸುತ್ತದೆಯೇ ಅಥವಾ ಅದನ್ನು ಮಾರ್ಪಡಿಸುತ್ತದೆಯೇ ಎಂಬುದು ಯಾರಿಗೂ ತಿಳಿದಿಲ್ಲ. ಅವರು ಸದನ ಈಗಾಗಲೇ ತೆಗೆದುಕೊಂಡ ನಿರ್ಧಾರಗಳ ಮೇಲೆ ಕರಡನ್ನು ರಚಿಸಲಾಗುವುದು ಮತ್ತು ಅವಶ್ಯವಿದ್ದರೆ ಕೆಲವು ಸಣ್ಣ ಶಾಬ್ದಿಕ ಬದಲಾವಣೆಗಳನ್ನು ಮಾಡಲು ಸದಸ್ಯರಿಗೆ ಮುಕ್ತವಿದೆ ಎಂಬ ಸಲಹೆ ಮಾಡುವಂತೆ ತೋರುತ್ತದೆ. ಶಾಸನಸಭೆಯ ಕರಡು ಒಪ್ಪಿಗೆಯನ್ನು ಪಡೆಯುವಂತಹ ಒಂದು ಸಾಮಾನ್ಯ ಕಾನೂನಿನ ಕರಡಲ್ಲ ಇದು ಎಂದು ಸದನಕ್ಕೆ ತಿಳಿಸಲು ನಾನು ಇಚ್ಛಿಸುತ್ತೇನೆ. ತಾವು ಸ್ವತಂತ್ರ ಭಾರತಕ್ಕೆ ಒಂದು ಸಂವಿಧಾನ ಅಧಿನಿಯಮ ರಚಿಸುತ್ತಿದ್ದೀರಿ ಮತ್ತು ಹಾಗಾಗಿ ಸಂವಿಧಾನ ಅಧಿನಿಯಮದಲ್ಲಿನ ಪ್ರತಿ ಒಂದು ಉಪಬಂಧವನ್ನೂ ಸೂಕ್ಷವಾಗಿ ಪರಿಶೀಲಿಸಿ ಮತ್ತು ರಾಷ್ಟ್ರದ ಪ್ರತಿಯೊಂದು ಅಗತ್ಯವನ್ನೂ ಮನಸ್ಸಿನಲ್ಲಿಟ್ಟುಕೊಂಡು, ಅದನ್ನು ರಚಿಸಬೇಕಾದ ಹೊಣೆ ಪ್ರತಿಯೊಬ್ಬರ ಮೇಲೂ ಇದೆ. ತಾವು ಈ ಸದನದ ಸದಸ್ಯರ ಅಧಿಕಾರಗಳನ್ನು ಸುಮ್ಮನೆ ತಡೆಹಿಡಿದರೆ ಮತ್ತು ಅವರನ್ನು ಕೇವಲ ಶಾಬ್ದಿಕ ಬದಲಾವಣೆಗಳಿಗೆ ನಿರ್ಬಂಧಿಸಿದರೆ ತಾವು ಈ ಸದನಕ್ಕೂ ಮತ್ತು ದೇಶಕ್ಕೂ ಅತ್ಯಂತ ದೊಡ್ಡ ಅನ್ಯಾಯ ಮಾಡುತ್ತಿದ್ದೀರಿ ಎಂದು ನನಗೆನಿಸುತ್ತದೆ. ಸದನದ ಮುಂದೆ ಒಂದು ಪೂರ್ಣಚಿತ್ರ ಮಂಡಿಸುವಂತಾದಾಗ ಸದಸ್ಯರು ಸಂವಿಧಾನದ ಮಸೂದೆಯ ಖಂಡಗಳ ಕೆಲವು ಭಾಗಗಳನ್ನು ನಾವು ಈ ನಡುವೆ ತೆಗೆದುಕೊಳ್ಳಬಹುದಾದ ನಿರ್ಣಯಗಳ ಬೆಳಕಿನಲ್ಲಿ, ಕೆಲವು ಮೂಲಭೂತ ಮಾರ್ಪಾಡುಗಳನ್ನು ಮಾಡಲು ಒತ್ತಾಯಿಸಿದಂತಾಗಬಹುದು. ತಮ್ಮ ಮುಂದೆ ಬರಲಿರುವ ಕರಡು ಕೆಲವು ಔಪಚಾರಿಕ ಅಥವಾ ಶಾಬ್ದಿಕ ಬದಲಾವಣೆಗಳಿಗೆ ಮಾತ್ರ ಅನುಕೂಲಕರವಾಗಿರುತ್ತವೆ ಎಂದು ಮೊದಲೇ ಹೇಗೆ ಹೇಳುವಿರಿ? ನಾವು ಸದನದಲ್ಲಿ ಒಕ್ಕೂಟದ ಸಮಿತಿಗಳ ವರದಿಗಳನ್ನು ಕುರಿತಂತೆ ಕೆಲವೊಂದು ನೀತಿಗಳನ್ನೂ ಅಂಗೀಕರಿಸಿರುವುದರಿಂದ, ಅವುಗಳು ಈಗಾಗಲೇ ತೀರ್ಮಾನಿಸಲ್ಪಟ್ಟು, ಅವನ್ನು ಪುನರ್ವಿಮರ್ಶೆ ಮಾಡಬೇಕಾದ ಅಗತ್ಯವಿಲ್ಲವೆಂಬಂತೆ, ಅವುಗಳನ್ನು ಕಾನೂನು ಅಥವಾ ಸಂವಿಧಾನಗಳ ದೃಷ್ಟಿಯಿಂದ ಕೂಡ ಮತ್ತೆ ಪರಿಶೀಲಿಸಬೇಕಾಗಿಲ್ಲ ಹಾಗೂ ಅವು ತಾವಿರುವ ಹಾಗೆಯೇ ಉಳಿದ ಉಪಬಂಧಗಳಿಗೆ ಹೊಂದಾಣಿಕೆಯಾಗುತ್ತವೆ ಎಂದು ಶ್ರೀ ಸಂತಾನಮ್ ಅವರು ಭಾವಿಸುತ್ತಾರೆಯೇ? ಆ ದೃಷ್ಟಿಕೋನ ಅವರು ಇಟ್ಟುಕೊಂಡಿರುವರಾದರೆ ನಾನು ಅವರಿಗೆ ನೇರವಾಗಿ ಒಂದು ವಿಷಯವನ್ನು ಹೇಳಬಯಸುತ್ತೇನೆ. ಅದೆಂದರೆ, ನೀವು ರೂಪಿಸುತ್ತಿರುವ ಸಂವಿಧಾನವು ಈ ದೇಶಕ್ಕಾಗಿ ರಚಿಸಲ್ಪಡುತ್ತಿರುವ ಸಂವಿಧಾನವೆಂದು ಹೇಳಲು ನನಗೆ ಸಾಧ್ಯವಾಗುವುದಿಲ್ಲ.

ಮಾನ್ಯರೆ, ಬಳಿಕ ನಾನು ನನ್ನ ಗೌರವಾನ್ವಿತ ಮಿತ್ರ ಶ್ರೀ ಖೇರ್ ಅವರು ಕರಡು ರಚಿಸುವ ಕೆಲಸವನ್ನು

ಕೆಲವು ಜವಾಬ್ದಾರಿಯುತ ವ್ಯಕ್ತಿಗಳಿಗೆ ವಹಿಸಬೇಕು ಎಂದು ಹೇಳಿದುದನ್ನು ಪೂರಾ ಒಪ್ಪುತ್ತೇನೆ. ಹೆಚ್ಚು ಜನ ಅಡಿಗೆ ಮಾಡುವವರು ಸೇರಿ ಸಾರನ್ನು ಸಂಪೂರ್ಣವಾಗಿ ಕೆಡಿಸುವಂತೆ. ಈ ಜವಾಬ್ದಾರಿಯುತ ವ್ಯಕ್ತಿಗಳಿಗೆ ಇದುವರೆಗೆ ಸದನವು ತೆಗೆದುಕೊಂಡಿರುವ ನಿರ್ಣಯಗಳು, ಸಲಹೆಗಳು, ಮಾಡಿರಬಹುದಾದ ಬದಲಾವಣೆಗಳೊಂದಿಗೆ ಮಸೂದೆಯಲ್ಲಿ ವಾಸ್ತವವಾಗಿ ಒಳಗೊಂಡಿವೆಯೇ ಎಂಬುದನ್ನು ಪರಿಶೀಲಿಸುವ ವಿಶಿಷ್ಟ ಕೆಲಸವನ್ನು ವಹಿಸಬೇಕು. ಮಾನ್ಯ ಸಭಾಧ್ಯಕ್ಷರೆ, ನಾನು ನಿಮ್ಮನ್ನು ಕೇಳಬಯಸುವುದೆಂದರೆ ಒಂದು ಕರಡು ಮಸೂದೆಯು ಸಿದ್ಧವಾದಾಗ ಮತ್ತು ಪರಿಗಣಿಸಲು ಸದನದಲ್ಲಿ ಔಪಚಾರಿಕವಾಗಿ ಉಪಕ್ರಮಿಸಿದಾಗ ಈ ಸದನದ ಸದಸ್ಯರು ಚುನಾಯಿಸಿದ ಒಂದು ಆಯ್ಕೆ ಸಮಿತಿಯು ಎಲ್ಲ ವಿಭಾಗಗಳು (ಮತ್ತು ಎಲ್ಲ ವಿಭಾಗಗಳ ಎಂದರೆ ರಾಜ್ಯಗಳೂ ಕೂಡ) ಪ್ರತಿನಿಧಿಸಿ ಸದನದ ಪರಿಗಣನೆಗೆ ಮಂಡಿಸಲಾದ ಇಡೀ ಮಸೂದೆಯನ್ನು ಪರೀಕ್ಷಿಸಲು ಅವಕಾಶವನ್ನು ನೀಡುವಿರೋ ಇಲ್ಲವೋ ಎಂದು. ನನ್ನ ಅಭಿಪ್ರಾಯದಲ್ಲಿ ಸಂವಿಧಾನದ ಅಧಿನಿಯಮದ ಪ್ರತಿಯೊಂದು ಉಪಬಂಧಗಳ ವಿಷಯದಲ್ಲಿ ಅತಿಸೂಕ್ಷ್ಮವಾಗಿ ಗಮನ ಹರಿಸಿ ಮಸೂದೆ ಪರೀಕ್ಷಿಸಿ ಇಡೀ ವಿಷಯವನ್ನು ಕುರಿತು ಒಂದು ಆಯ್ಕೆ ಸಮಿತಿಯನ್ನು ನೇಮಕ ಮಾಡುವವರೆಗೂ ನಾವು ತೃಪ್ತಿಕರ ಫಲಿತಾಂಶಗಳನ್ನು ಪಡೆಯಲಾಗುವುದಿಲ್ಲ ಎಂದು ನನಗೆ ಖಚಿತವಾಗಿದೆ. ಒಮ್ಮೆ ಸಂವಿಧಾನ ಅಧಿನಿಯಮವನ್ನು ಅಂಗೀಕರಿಸಿದೆ ಎಂದರೆ ಅದನ್ನು ಮೂರು ಅಥವಾ ಆರು ತಿಂಗಳುಗಳಲ್ಲಿ ಅಥವಾ ಒಂದೂವರೆ ವರ್ಷದಲ್ಲಿ ಅದು ಬದಲಾಯಿಸಲಾಗುವುದಿಲ್ಲ ಎಂಬುದನ್ನು ನಾವು ಮರೆಯಬಾರದು. ಆದುದರಿಂದ ನಾವು ನಮ್ಮಿಂದ ಸಾಧ್ಯವಿರುವಷ್ಟು ಅದನ್ನು ದೋಷರಹಿತವಾಗಿರುವಂತೆ ಮಾಡಲು ಸಾಧ್ಯವಿರುವ ಪ್ರತಿಯೊಂದು ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ಯಾವುದೇ ಮಾನವ ಸಂಸ್ಥೆ ಪರಿಪೂರ್ಣವಲ್ಲ ಎಂದು ನಾನು ಬಲ್ಲೆ. ಆದರೆ ನಾವು ನಮ್ಮಿಂದ ರೂಪಿತವಾಗುವ ಸಂವಿಧಾನ ಸಾಧ್ಯವಾದಷ್ಟು ದೋಷರಹಿತವಾಗಿರುವಂತೆ ಮಾಡುವಲ್ಲಿ ಎಲ್ಲ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಸಂವಿಧಾನ ಅಧಿನಿಯಮದ ಎಲ್ಲ ಅವಕಾಶಗಳೊಂದಿಗೆ ನಾವು ತೃಪ್ತರಾಗುವವರೆಗೂ ಕೆಲಕಾಲ ನಮ್ಮ ಅಭಿಪ್ರಾಯವನ್ನು ಮುಂದೂಡೋಣ. ಆದುದರಿಂದ ಭಾರತದ ಸಂವಿಧಾನದ ಮೇಲೆ ಅಂಗೀಕಾರದ ಅಂತಿಮ ಮುದ್ರೆಯನ್ನು ಹಾಕುವ ಮುನ್ನ ನಾವು ಮಸೂದೆ ಮಂಡನೆ ಮಾಡುವಾಗ ನೀವು ಒಂದು ಆಯ್ಕೆ ಸಮಿತಿಯನ್ನು ಇಡೀ ಮಸೂದೆ ಮತ್ತು ಎಲ್ಲ ಉಪಬಂಧಗಳನ್ನು ಅತ್ಯಂತ ಜಾಗರೂಕತೆ ಮತ್ತು ಎಚ್ಚರಿಕೆಯಿಂದ ಪರೀಕ್ಷಿಸಲು ಒತ್ತಾಯಿಸುವುದಿಲ್ಲವೇ ಎಂದೂ ಮತ್ತು ಬಳಿಕ ಆಯ್ಕೆ ಸಮಿತಿಯ ವರದಿಯನ್ನು ಸದನದ ಮುಂದೆ ಮಂಡಿಸಿದಾಗ ನೀವು ಮಸೂದೆಯ ಪ್ರತಿಯೊಂದು ಪ್ರತ್ಯೇಕ ವಿಭಾಗವನ್ನೂ ಕುರಿತು ಎಚ್ಚರಿಕೆಯಿಂದ ಚರ್ಚಿಸಲು ನೀವು ಅಂತಿಮ ಅವಕಾಶವನ್ನು ನೀಡುತ್ತೀರಲ್ಲವೇ ಎಂದು ತಿಳಿದುಕೊಳ್ಳಲು ಬಯಸುತ್ತೇನೆ. ವೈಯಕ್ತಿಕವಾಗಿ ಹೇಳುವಲ್ಲಿ, ಯಾವುದರಿಂದ ಸಂವಿಧಾನ ರಚನಾಸಭೆಯು ಒಂದು ಶಾಸನ ಸಭೆಯಂತೆ ಕೆಲಸ ಮಾಡುವುದೋ ಆ ನಿಯಮ ನಿಬಂಧನೆಗಳನ್ನು ಉಪಕ್ರಮಿಸಬೇಕಾಗಿರುವಾಗ ನಾವು ಈಗ ಇಷ್ಟು ಅತಿಯಾದ ವೇಗದಲ್ಲಿ ಸಂವಿಧಾನದ ಕರಡು ರಚಿಸುವ ಅಗತ್ಯವಿಲ್ಲ ಎಂದು ನನಗೆನಿಸುತ್ತದೆ. ಒಂದು ಶಾಸನ ಸಭೆಯಾಗಿ ಕೆಲಸ ಮಾಡುವಾಗ ಈ ಸದನ ಸಂವಿಧಾನ ಅಧಿನಿಯಮದ ಉಪಬಂಧಗಳನ್ನು ಚೆನ್ನಾಗಿ ಎಚ್ಚರಿಕೆಯಿಂದ ಪರೀಕ್ಷಿಸಬಹುದು. ಬಿಟ್ಟುಹೋಗಿರುವ ವಿಭಾಗಗಳನ್ನು ಕುರಿತಂತೆ ನವೆಂಬರ್ ಅಧಿವೇಶನದ ಹೊತ್ತಿಗೆ ಈ ಸದನದಕ್ಕೆ ಒಂದು ಸಂಪೂರ್ಣ ಕರಡು ಮಂಡಿಸಬೇಕೆಂದು ಒತ್ತಾಯಿಸುವುದಾದರೆ ಆಗ ಕರಡು ರಚನಾಕಾರರು ಈ ಸದನದಿಂದ ಈವರೆಗೆ ಒಕ್ಕೂಟ ಅಧಿಕಾರಗಳ ಸಮಿತಿ ವರದಿಯು ಚರ್ಚಿಸಿಲ್ಲದಿರುವ ಅಥವಾ ಬಿಟ್ಟಿರುವ ಭಾಗಗಳಿಗೆ ಸದನವು ತನ್ನ ಒಪ್ಪಿಗೆಯನ್ನು ನೀಡಿದೆ ಎಂದು ಭಾವಿಸಿ ಮುಂದುವರಿಯಬಹುದು ಎಂದು ನಾನು ಸಲಹೆ ಮಾಡುತ್ತೇನೆ. ಹೇಗೇ ಆಗಲಿ ನಾವು ಒಂದು ವೇಳೆ ಒಕ್ಕೂಟ ಅಧಿಕಾರಗಳ ಸಮಿತಿಯ ವರದಿಯ ಶಿಫಾರಸುಗಳಿಗೆ ಸದನ ಸಮ್ಮತಿ ಪಡೆದುಕೊಳ್ಳದಿದ್ದರೆ ನಾವು ಆಗ ಅವನ್ನು ಮಾರ್ಪಡಿಸೋಣ

ಮತ್ತು ಮುಂದೆ ನೀತಿಗಳು ಸ್ವೀಕೃತವಾಗದಿದ್ದರೆ, ಕರಡನ್ನೂ ಕೂಡ ಅಂತೆಯೇ ಮಾರ್ಪಡಿಸಲಾಗುತ್ತದೆ. ಆದುದರಿಂದ ನಮ್ಮ ಮುಂದೆ ಇರಿಸಲಾಗಿರುವ ಕಾರ್ಯಕ್ರಮ ಮುಗಿಸಲು ಒಂದು ಮಧ್ಯಂತರ ಅಧಿವೇಶನ ಆವಶ್ಯಕ ಎಂಬ ನನ್ನ ಗೌರವಾನ್ವಿತ ಮಿತ್ರ ಡಾ. ಪಟ್ಟಾಭಿ ಸೀತಾರಾಮಯ್ಯನವರ ಮಾತನ್ನು ನಾನು ಒಪ್ಪುವುದಿಲ್ಲ. ಈ ವಿಷಯ ಕುರಿತಂತೆ ಮತ್ತೊಂದು ಅಧಿವೇಶನ ಕೂಡಿಸಲು ಇಡೀ ಸೆಪ್ಟೆಂಬರ್‌ನಲ್ಲಿ ಸಾಧ್ಯ ಎಂದು ನನಗನಿಸುವುದಿಲ್ಲ. ನವೆಂಬರ್ ಅಧಿವೇಶನ ಮೊದಲು ಬಿಟ್ಟುಹೋಗಿರುವ ಭಾಗಗಳನ್ನು ಚರ್ಚಿಸಬೇಕು ಮತ್ತು ಅದನ್ನು ಅಂತಿಮವಾಗಿ ಒಟ್ಟಿಗೆ ಸೇರಿಸಿ ಸಮಗ್ರಗೊಳಿಸಬಹುದು ಎಂದು ನಾನು ಹೇಳುತ್ತೇನೆ. ನಾವು ಮೂರು ತಿಂಗಳ ಅವಧಿಯಲ್ಲಿ ಮಸೂದೆಯ ಕರಡನ್ನು ನಿರೀಕ್ಷಿಸಬಹುದು. ಅದೂ ಅಲ್ಲಗೆ, ಒಂದು ದೇಶದ ಸಂವಿಧಾನ ಎಂದರೆ ಸಣ್ಣ ವಿಷಯವಲ್ಲ ಮತ್ತು ಅದನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ಆದುದರಿಂದ ತಾವು ಸದನವು ಹೇಗೆ ಮುಂದುವರಿಯಬೇಕೆಂದು ಸ್ಪಷ್ಟ ಸೂಚನೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ನಾನು ನನ್ನ ಇಲ್ಲಿನ ಗೌರವಾನ್ವಿತ ಗೆಳೆಯರ ಭಾವನೆಗಳನ್ನು ಧ್ವನಿಸುತ್ತಿದ್ದೇನೋ ಇಲ್ಲವೋ ಗೊತ್ತಿಲ್ಲ. ಆದರೆ ಸಂವಿಧಾನದ ಕರಡನ್ನು ಚರ್ಚೆಗೆ ಎತ್ತಿಕೊಳ್ಳುವುದಕ್ಕೆ ಮೂರು ವಾರಗಳಷ್ಟು ಮೊದಲಾದರೂ ಅದು ಸಂವಿಧಾನ ರಚನಾಸಭೆಯ ಗೌರವಾನ್ವಿತ ಸದಸ್ಯರ ಕೈಲಿ ಇರಬೇಕು ಎಂದು ಹೇಳುತ್ತೇನೆ. ತಾವು ಕರಡಿನಲ್ಲಿ ಅಳವಡಿಸಲಿರುವ ಉಪಬಂಧಗಳನ್ನು ಜಾಗರೂಕತೆಯಿಂದ ಪರಿಶೀಲಿಸಲು ಸದಸ್ಯರಿಗೆ ಸಾಕಷ್ಟು ಕಾಲಾವಕಾಶವನ್ನು ನೀಡದಿದ್ದರೆ, ನಮ್ಮೆಲ್ಲರ ಸಮಯವೂ ಅನಗತ್ಯವಾಗಿ ವ್ಯರ್ಥವಾಗುತ್ತದೆ. ತಾವು ಅವರಿಗೆ ಸಾಕಾಗುವಷ್ಟು ಸಮಯ ನೀಡದಿದ್ದಲ್ಲಿ, ಎಲ್ಲದಿಕ್ಕುಗಳಿಂದ ಓತಪ್ರೋತವಾಗಿ ಹರಿದುಬರುವ ತಿದ್ದುಪಡಿಗಳ ಪ್ರವಾಹವನ್ನು ನಿಲ್ಲಿಸಲು ಆಗುವುದೇ ಇಲ್ಲ. ನಾನಾದರೂ ಈ ದೇಶದ ಕರಡು ಸಂವಿಧಾನ ಪರಿಶೀಲಿಸಲು ಮೂರು ವಾರಗಳ ಸಮಯ ಅತಿ ಎಂದು ಭಾವಿಸಿಲ್ಲ. ಅಂದರೆ ಕರಡು ಸಿದ್ಧಪಡಿಸಿ ಅದನ್ನು ಅಧಿವೇಶನಕ್ಕೆ ಕಡೇ ಪಕ್ಷ ಮೂರುವಾರಗಳ ಮೊದಲು ಎಲ್ಲರಿಗೂ ತಲುಪಿಸಿರಬೇಕು. ತಾವು ಅದನ್ನು ಮಾಡಬಲ್ಲಿರಾದರೆ, ಆಗ ಗೌರವಾನ್ವಿತ ಸದಸ್ಯರು ಚರ್ಚೆಗೆ ಪರಿಪೂರ್ಣವಾಗಿ ಸಿದ್ಧರಾಗಿ ಬರುತ್ತಾರೆ ಮತ್ತು ತಿದ್ದುಪಡಿಗಳನ್ನು ವಿವಿಧ ಕಲಮುಗಳಿಗೆ ಸಂಬಂಧಿಸಿದಂತೆ ಇರಿಸಲೂಬಹುದು. ಬಹುಶಃ ಅವು ಅಷ್ಟು ಹೆಚ್ಚು ಸಂಖ್ಯೆಯಲ್ಲಿರುವುದಿಲ್ಲ. ಇಲ್ಲದೆ ಮಸೂದೆಯನ್ನು ಅವಸರವಾಗಿ ರಚಿಸಿದ್ದರೆ ಮತ್ತು ಕರಡನ್ನು ಅಧಿವೇಶನ ಆರಂಭವಾಗುವ ಕೆಲವೇ ದಿನಗಳು ಮಾತ್ರ ಮೊದಲು ಎಲ್ಲರಿಗೂ ತಲುಪಿಸಿದರೆ ಅವು ಹೆಚ್ಚೇ ಆಗುತ್ತವೆ. ಇಲ್ಲೊಂದು ತುಂಬ ಮುಖ್ಯ ವಿಷಯ. ಮಾನ್ಯರೆ, ನಾನು ತಮ್ಮ ಕಚೇರಿಯ ಮೇಲೆ ಯಾವುದೇ ಆಕ್ಷೇಪ ಮಾಡುತ್ತಿದ್ದೇನೆ ಎಂದು ಇದರ ಅರ್ಥವಲ್ಲ. ಮಾನ್ಯ ಸಭಾಧ್ಯಕ್ಷರೆ, ಕೇಂದ್ರ ಶಾಸನ ಸಭೆ ಇಲಾಖೆಯಲ್ಲಿನ ಅನುಭವದಿಂದ ನಾನು ಹೇಳಬಹುದಾದರೆ, ನಿಮ್ಮ ಸಚಿವಾಲಯವು ಕೇಂದ್ರ ಶಾಸನ ಸಭೆಯ ದಕ್ಷತೆಯ ಅರ್ಧದಷ್ಟೂ ದಕ್ಷವಿಲ್ಲ. ಪತ್ರಗಳನ್ನು ಆದೇಶದ ಪತ್ರಗಳನ್ನು ನಮ್ಮೆಲ್ಲರಿಗೂ ತಲುಪಿಸುತ್ತಿರುವ ವಿಧಾನದಿಂದ ಅದನ್ನು ನಾವು ಕಂಡುಕೊಂಡಿದ್ದೇವೆ. ಕರಡು ಸಂವಿಧಾನವನ್ನು ಒದಗಿಸುವ ಪ್ರಶ್ನೆ ಕುರಿತಂತೆ ನಮಗೆ ಸಮಯದ ಅಭಾವವಿತ್ತು ಅಥವಾ ನಾವು ನಿಮ್ಮ ವಿಳಾಸಕ್ಕೆ ಕಳುಹಿಸುತ್ತೇವೆ ಅಥವಾ ನಮಗೆ ಅದನ್ನು ಕಳುಹಿಸಲು ಆಗಲಿಲ್ಲ ಹೀಗೆ ಒಂದೊಂದೇ ನೆಪಗಳಿಂದ ಎದುರಾದರೆ ಅದು ಪ್ರಮಾದವೇ. ಆದುದರಿಂದ ನಾನು ಈ ಕರಡುಗಳನ್ನು ನಮಗೆ ಸಕಾಲದಲ್ಲಿ ತಲಪಿಸುವುದು ತುಂಬ ಆವಶ್ಯಕ ಎಂದು ಹೇಳುತ್ತೇನೆ.

ಬಳಿಕ ಮಾನ್ಯರೆ, ಇದೀಗ ಈ ಸದನ ಇಡೀ ಮಸೂದೆಯ ಒಂದೊಂದೇ ಖಂಡಗಳನ್ನು ಪರಿಶೀಲನೆಗೆ ತೆಗೆದುಕೊಳ್ಳುವ ಮೊದಲು ಅದನ್ನು ಪೂರಾ ನೋಡಲು ಒಂದು ಆಯ್ಕೆ ಸಮಿತಿಯ ನೇಮಕ ಕುರಿತು ಚಿಂತನೆ ನಡೆಸುವುದೋ ಹೇಗೆ ಎಂಬುದನ್ನು ತಾವು ಈ ಸದನದ ಇತರ ಮುಖ್ಯ ಸದಸ್ಯರೊಂದಿಗೆ ಸಲಹೆ ಪಡೆಯುವುದು ನಿಮಗೆ ಬಿಟ್ಟುದಾಗಿದೆ. ಅದು ಮಾಡುವವರೆಗೂ ನಾವು ನಮಗೆ ಎದುರಾಗುವ ತೊಂದರೆಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳುವುದಕ್ಕೆ ಸಾಧ್ಯವಾಗದಿರಬಹುದು.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಇಂಥ ವಿಷಯದ ಮೇಲೆ ತೆಗೆದುಕೊಳ್ಳುವ ನಿರ್ಣಯದ ಪ್ರಾಮುಖ್ಯ ಎಷ್ಟು ನಿಖರವಾಗಿರಬೇಕು ಎಂಬುದು ನಮಗೆ ಗೊತ್ತಿದೆ. ಒಂದು ವಿಷಯವನ್ನಂತೂ ಸ್ಪಷ್ಟಪಡಿಸಬೇಕಿದೆ. ಅದೇಂದರೆ ಈಗಾಗಲೇ ತೆಗೆದುಕೊಂಡಿರುವ ನಿರ್ಣಯಗಳ ವಿಷಯಗಳಿಗೆ ನಾವು ಬದ್ಧರಾಗಿರಬೇಕು. ಅದರಲ್ಲಿ ದೋಷಗಳೇನಾದರೂ ಪತ್ತೆಯಾದಲ್ಲಿ ಇಲ್ಲವೇ ನಿರೀಕ್ಷಿಸಿರದ ತೊಂದರೆಗಳು ಉದ್ಭವಿಸಿದಲ್ಲಿ ನಿರ್ಣಯಗಳನ್ನು ಪರಾಮರ್ಶಿಸಲು ಸದನ ಯಾವಾಗಲು ಮುಕ್ತವಿರುತ್ತದೆ. ಸರ್ಕಾರದ ಒಂದು ಸಾಧಾರಣ ಮಸೂದೆಯ ವಿಷಯದಲ್ಲಿ ಒಂದು ಆಯ್ಕೆ ಸಮಿತಿಯ ಸಾದೃಶ್ಯವನ್ನು ತೆಗೆದುಕೊಂಡರೆ ಅದು ನಮ್ಮನ್ನು ತಪ್ಪುದಾರಿಗೆಳೆಯುತ್ತದೆ. ನಾವೀಗಾಗಲೇ ಸದನದ ಕೆಲವು ಸಮಿತಿಗಳಿಂದ ಹಲವು ವಿಷಯಗಳನ್ನು ಗಮನಿಸಲು ಸುಮಾರು ಒಂದು ವರ್ಷ ತೆಗೆದುಕೊಂಡಿದ್ದೇವೆ. ನಮ್ಮಲ್ಲಿ ಮೂಲಭೂತ ಹಕ್ಕುಗಳ ಸಮಿತಿ, ಒಕ್ಕೂಟ ಅಧಿಕಾರಗಳ ಸಮಿತಿ ಮತ್ತು ಒಕ್ಕೂಟ ಸಂವಿಧಾನ ಸಮಿತಿಗಳು ಇದ್ದು ಅವು ಪರಿಶೀಲಿಸಿ ತಮ್ಮ ನಿರ್ಣಯಗಳನ್ನು ಈ ಸದನದ ಮುಂದೆ ಇರಿಸಿವೆ. ಈ ರಚನಾಸಭೆಯು ಈಗಾಗಲೇ ಪರಿಗಣಿಸಿದ ವಿಷಯಗಳನ್ನು ಕುರಿತು ಮತ್ತು ತಲುಪಿರುವ ನಿರ್ಧಾರಗಳನ್ನು ಕುರಿತು ಮುಂದೆ ಒಂದು ಹಂತದಲ್ಲಿ ನಡೆಸಬೇಕಾದ ಪರಾಮರ್ಶೆಯ ವ್ಯಾಪ್ತಿಯನ್ನು ಸ್ವಾಭಾವಿಕವಾಗಿ ಮಿತಿಗೊಳಿಸಬೇಕಾಗುತ್ತದೆ. ಸಂವಿಧಾನ ರಚನಾಸಭೆಯ ಉಲ್ಲೇಖವಿಲ್ಲದೆಯೇ ಸರ್ಕಾರದಿಂದ ಉಪಕ್ರಮಿಸಲಾದ ಒಂದು ಸಾಧಾರಣ ಮಸೂದೆಯ ಸಾದೃಶ್ಯ ತಪ್ಪು ದಾರಿಗೆಳೆಯುತ್ತದೆ. ಅಲ್ಲಿ ಸರ್ಕಾರದ ಇಲಾಖೆ ಶಾಸನಸಭೆಯ ಉಲ್ಲೇಖವಿಲ್ಲದೆ ಒಂದು ಮಸೂದೆ ಸಿದ್ಧಪಡಿಸಿ ಶಾಸನಸಭೆಯ ಮುಂದೆ ಇರಿಸುತ್ತಾರೆ. ಅನಂತರ ಸದನ ಒಂದು ಆಯ್ಕೆ ಸಮಿತಿ ನೇಮಿಸುತ್ತದೆ ಅದು ಪ್ರಶ್ನೆ ಕುರಿತು ಚಿಂತಿಸುತ್ತವೆ. ಈ ಸದನವು ಹಲವು ವಿಷಯಗಳಲ್ಲಿ ಹಿಂದೆ ತೆಗದುಕೊಂಡ ನಿರ್ಣಯಗಳನ್ನು ಪರಿಗಣಿಸದೆ, ಕರಡಿನಲ್ಲಿರುವ ಪ್ರತಿಯೊಂದು ಖಂಡ ಖಂಡವನ್ನೂ ಚರ್ಚೆಗೆ ಕೈಗೆತ್ತಿಕೊಂಡರೆ, ಅದು ನಮ್ಮ ಪ್ರಕ್ರಿಯೆಗಳನ್ನು ಮೊದಲಿನಿಂದ ಪ್ರಾರಂಭಿಸಿದ ಹಾಗೆಯೇ ಆಗುತ್ತದೆ. ತೆಗೆದುಕೊಳ್ಳುವ ಕ್ರಮಕ್ಕೆ ಯಾವಾಗಲೂ ಒಂದು ಆರಂಭವಿರುತ್ತದೆ ಮತ್ತು ಈ ಸದನದಲ್ಲಿ ಆರಂಭಿಸಿದ ಕ್ರಮಕ್ಕೆ ಒಂದು ಅಂತ್ಯ ಎಂಬುದು ಇರುವುದಿಲ್ಲ. ಯಾವ ನಿರ್ಣಯಗಳನ್ನೂ ತೆಗೆದುಕೊಂಡಿರದ ವಿಷಯಗಳ ವಿಷಯ ಬೇರೆಯಾಗಿರುತ್ತದೆ ಎಂಬುದು ಸ್ಪಷ್ಟವಾಗಿದೆ ಎಂದು ನಾನಂದುಕೊಂಡಿದ್ದೇನೆ.

ಆದರೆ ತೊಂದರೆ ಉದ್ಭವಿಸುವುದು ಈ ಸಮಿತಿಯು ಯಾವ ನಿರ್ಣಯವೂ ತಲಪದ ಉಪಬಂಧಗಳನ್ನು ಮಾತ್ರ ಪರಿಗಣಿಸಬೇಕು ಎಂಬುವ ನನ್ನ ಗೆಳೆಯ ಶ್ರೀ ಸಂತಾನಮ್ ಅವರ ಸಲಹೆಯಿಂದಾಗಿಯೇ. ಅಂದರೆ ನಾನು ಇಡೀ ಚರ್ಚೆಯ ಪುನರ್‌ಪರಿಶೀಲನೆಯನ್ನು ಸದನವು ಮಾಡಬಾರದು ಎಂದು ಹೇಳುವುದಿಲ್ಲ. ಆದರೆ ಸುಮಾರು ಎಂಟು ಅಥವಾ ಒಂಬತ್ತು ತಿಂಗಳುಗಳ ಕಾಲ ಮಾಡಲಾಗಿರುವ ಕೆಲಸಕ್ಕೆ ತನ್ನ ಗುರಿಯನ್ನು ಮುಟ್ಟುವತ್ತ ಸಾಗಿರುವ ಅಂಶವನ್ನು ಸ್ವಲ್ಪ ಮಟ್ಟಿಗಾದರೂ ನೋಡಬೇಕು. ಹಾಗೆ ನೋಡಿದಾಗ ನಾವು ಸಮಿತಿಯು ಕೆಲಸವನ್ನು ಮತ್ತೆ ಹೊಸದಾಗಿ ಪ್ರಾರಂಭಿಸಬೇಕಾಗಿರುವುದಿಲ್ಲ ಮತ್ತು ಈ ಸಂವಿಧಾನವನ್ನು ಒಂದು ಸಾಮಾನ್ಯ ಕಾನೂನಿನ ಮಸೂದೆಯೆಂಬಂತೆ ನೋಡುವುದಿಲ್ಲ, ಮತ್ತು ನಮ್ಮ ಮುಂದೆ ಮಂಡಿಸಲ್ಪಟ್ಟಿರುವ ಕರಡಿನ ಪ್ರತಿಯೊಂದು ಖಂಡವನ್ನೂ ಪರಿಶೀಲಿಸಬೇಕಾಗಿರುವುದಿಲ್ಲ. ಈ ಸಮಿತಿಯು ಎಲ್ಲ ವಿಷಯಗಳನ್ನು ಪರಿಗಣಿಸಲೇಬೇಕು ಎಂಬುದು ಸದನದ ಬಯಕೆಯೇ ಎಂಬುದು ನನಗೆ ತಿಳಿದಿಲ್ಲ. ಈ ಸದನವು ಇನ್ನೂ ನಿರ್ಣಯಿಸದೆ ಇರುವ ಪ್ರಕರಣಗಳದ್ದು ಬೇರೆಯ ವಿಷಯ. ಈ ಸದನದಲ್ಲಿ ಈಗಿನ ಮತ್ತು ಹಿಂದಿನ ಅಧಿವೇಶನಗಳಲ್ಲಿ ನಿರ್ಣಯಿಸಲ್ಪಟ್ಟಿರುವ ವಿಷಯಗಳನ್ನು ನಿರ್ದಿಷ್ಟವಾಗಿ ಪ್ರತ್ಯೇಕಿಸಬೇಕು. ಈ ಸದನದಲ್ಲಿ ನಾವು ಪ್ರತಿಖಂಡವನ್ನೂ ದೀರ್ಘವಾಗಿ ಚರ್ಚೆ ಮಾಡಿದ್ದೇವೆ. ನಾವು ನಮ್ಮ ಕಾಲವನ್ನು ಸರ್ವಥಾ ವ್ಯರ್ಥ ಮಾಡಿದ್ದೇವೆ ಎಂಬ ಭಾವನೆ ಸಾರ್ವಜನಿಕರಲ್ಲಿ ಮೂಡದಂತೆ ಮಾಡಬೇಕಾದ ಹೊಣೆ ನಮ್ಮ ಮೇಲಿದೆ. ಇದೊಂದು ಅಂಶವನ್ನು ನಾನು ಸ್ಪಷ್ಟಪಡಿಸಬೇಕಿತ್ತು.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ. ಮತ್ತು ಬೆರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅಥವಾ ಅಯ್ಯಂಗಾರ್ ಕ್ಷಮಿಸಿ ಅವರ ಸುದೀರ್ಘ ಹೆಸರು ಸರಿಯಾಗಿ ಉಚ್ಚರಿಸಲಾರೆ. ಅಯ್ಯರ್ ಆಗಲಿ ಅಯ್ಯಂಗಾರ್ ಆಗಲಿ ಅಂತಹ ವ್ಯತ್ಯಾಸವೇನಿರುವುದಿಲ್ಲ, ಯಾವುದೇ ಆಗಲಿ ಅವರು ಹಿಂದಿನ ಭಾಷಣಕಾರರು ಎಂಬುದು ಅರ್ಹ ವಿವರವಾಗಿದೆ. ಅವರು ಮಾಡಿದ ಸಲಹೆಯೆಂದರೆ ಈ ಸದನದಲ್ಲಿ ನಮ್ಮ ಸಮಯ ವ್ಯರ್ಥವಾಗಬಾರದು ಎಂದಿದೆ. ಆದರೆ ಮಾನ್ಯರೆ, ಇದೊಂದು ಮುಖ್ಯಶಾಸನ. ಅದನ್ನು ಎಂದೂ ಹಗುರವಾಗಿ ಬದಲಿಸಲಾಗದು ಮತ್ತು ಸದನದಲ್ಲಿ ನಾವು ಯಾವುದೆ ನಿಯಮವನ್ನು ಹಾಕಿಕೊಳ್ಳಬಹುದು. ಅದನ್ನು ತಿದ್ದುಪಡಿಸುವುದು ತುಂಬ ಕಷ್ಟವೇ. ನಮ್ಮ ಎಷ್ಟೋ ಗೆಳೆಯುರು ಈಗಾಗಲೇ ತಮ್ಮ ತಮ್ಮ ರಾಜ್ಯಗಳಿಂದ ಬಹುಸಂಖ್ಯೆಯ ಪ್ರತಿನಿಧಿಗಳನ್ನು ಹೊಂದಲಿದ್ದೇವೆ ಎಂಬುದನ್ನು ಮನಸ್ಸಿಗೆ ತಂದುಕೊಂಡಿದ್ದಾರೆ ಎಂಬ ಅಂಶವನ್ನು ಕೂಡ ಲೆಕ್ಕಕ್ಕೆ ತೆಗೆದುಕೊಳ್ಳಬೇಕಿದೆ. ಭಾರತ ರಾಜ್ಯಗಳು ಸಂಪ್ರದಾಯನಿಷ್ಠ ಘಟಕಗಳು ಎಂಬುದನ್ನು ನಾವೆಲ್ಲ ಬಲ್ಲೆವು ಮತ್ತು ಅವರು ಯಾವುದೇ ಬದಲಾವಣೆಗಳ ವಿರುದ್ಧ ತಮ್ಮ ಒತ್ತಾಯವನ್ನು ಹೇರುವುದು ಖಂಡಿತ. ನಾವು ಸಂವಿಧಾನ ತಿದ್ದುಪಡಿ ಮಾಡಲು ಯತ್ನಿಸಿದರೆ ಅವರು ಬದಲಾಯಿಸಲು ಅನುಮತಿ ನೀಡುವ ಬದಲು ಅದನ್ನು ಮುಂದುವರಿಸುವ ಪಕ್ಷದಲ್ಲಿ ಇರುತ್ತಾರೆ.

ಮಾನ್ಯರೆ, ಅದನ್ನು ಹೊರತುಪಡಿಸಿ ಇಂದು ನಾವೆಲ್ಲ ಯಾವ ಸನ್ನಿವೇಶದಲ್ಲಿ ಇದ್ದೇವೆ? ಮಾನ್ಯರೆ, ಶ್ರೀ ಅಲ್ಲಾದಿ ಅವರು ಈ ಕೆಲಸದ ಮೇಲೆ ನಾವು ಒಂದು ವರ್ಷ ಕಳೆದಿದ್ದೇವೆ ಎಂದು ಹೇಳಿದರು. ಮಾನ್ಯರೆ, ನನಗೆ ಭಯವೇ ಆಗಿದೆ. ಅದು ಕರಾರುವಾಕ್ಕಾಗಿ ಸರಿಯಲ್ಲ. ಮೊದಲ ಬಾರಿಗೆ ನಾವು ಡಿಸೆಂಬರ್ ತಿಂಗಳಲ್ಲಿ ಸೇರಿದೆವು. ನಾವು ಚರ್ಚಿಸಿದ ವಿಷಯಗಳಾದರೂ ಯಾವುವು? ತುಂಬಾ ಕಡಿಮೆ. ಆ ಅಧಿವೇಶನದಲ್ಲಿ ನಾವು ಮಾಡಿದ ಕೆಲಸದ ಮೊತ್ತ ವಿಶೇಷವಾಗಿ ಹೆಚ್ಚಿನ ವಾಸ್ತವಿಕ ಉಪಯೋಗದ ದೃಷ್ಟಿಯಿಂದ ಹೆಚ್ಚೇನೂ ಇಲ್ಲ. ಬಳಿಕ ನಾವು ಪುನಃ ಜನವರಿಯಲ್ಲಿ ಸೇರಿದೆವು. ಆದರೆ ಅದು ಕೂಡ ಸಣ್ಣ ಅಧಿವೇಶನವೇ ಆಗಿತ್ತು. ನಾವು ಈ ವಿಧಾಯಕ ಸಭೆಯ ಉದ್ದೇಶಗಳನ್ನು ರೂಪಿಸಿ ಒಂದು ನಿರ್ಣಯವನ್ನು ಅಂಗೀಕರಿಸಿದೆವು. ನಾವು ಜಾಗರೂಕತೆಯಿಂದ ನಮ್ಮ ಕೆಲಸದ ನಡವಳಿಗಳು ಮತ್ತು ದಾಖಲೆಗಳನ್ನು ನೋಡಿದಲ್ಲಿ ನಾವು ಇಲ್ಲಿವರೆಗೆ ಮಾಡಿದ ಕೆಲಸವನ್ನು ನೋಡಿದರೆ ಅದು ಅತ್ಯಲ್ಪವೆಂದು ನಮಗೇ ತೋರುತ್ತದೆ. ನಾವು ಹಲವು ಸಮಿತಿಗಳನ್ನು ಹೊಂದಿದ್ದೇವೆ. ಆದರೆ ಬಹುತೇಕ ಸಂದರ್ಭಗಳಲ್ಲಿ ನಾವು ಕೇವಲ ಮಧ್ಯಂತರ ವರದಿಗಳು, ತಾತ್ಕಾಲಿಕ ಸಲಹೆಗಳು, ತಾತ್ಕಾಲಿಕ ಪ್ರಸ್ತಾವಗಳನ್ನು ಅವುಗಳಿಂದ ಪಡೆದಿದ್ದೇವೆ ಅಷ್ಟೆ. ನಾವಿನ್ನೂ ಸಂವಿಧಾನದ ಒಂದು ಸಂಪೂರ್ಣ ಚಿತ್ರವನ್ನು ಹೊಂದಿಯೇ ಇಲ್ಲ. ಹಾಗೆ ನೋಡಿದರೆ ಒಕ್ಕೂಟ ಅಧಿಕಾರಗಳ ಸಮಿತಿಯಲ್ಲಿ ಅತ್ಯಂತ ಮುಖ್ಯ ಅಧ್ಯಾಯಗಳು ಇನ್ನೂ ನಿರ್ಧಾರವಾಗಬೇಕಾಗಿದೆ. ಅಂದಮೇಲೆ ನಮ್ಮ ಮುಂದೆ ಸಂವಿಧಾನದ ಒಂದು ಸ್ಥೂಲರೂಪವಿದೆ ಎಂದು ನಾವು ಹೇಗೆ ಹೇಳಬಹುದಾಗಿದೆ? ನಾನು ಹೇಳುತ್ತೇನೆ, ನಮ್ಮ ಮುಂದೆ ಇನ್ನೂ ಸಂವಿಧಾನದ ಒಂದು ಅಸ್ಥಿಪಂಜರ ಕೂಡ ಇಲ್ಲ. ಆದುದರಿಂದ ನಾವು ಒಂದು ವ್ಯಾಪಕವಾದ ಸಮಿತಿಯನ್ನು ಹೊಂದುವುದು ಸೂಕ್ತ. ಸಂವಿಧಾನಕ್ಕೆ ಒಂದು ನಿರ್ದಿಷ್ಟರೂಪವನ್ನು ನೀಡಲು, ಈ ಸದನದ ಸದಸ್ಯರನ್ನು ಎಲ್ಲ ದೃಷ್ಟಿಯಿಂದಲೂ ಪ್ರತಿನಿಧಿಸುವ, ಅತ್ಯಂತ ಸಮರ್ಥ ಹಾಗೂ ಬುದ್ಧಿವಂತರಾದ ಪ್ರತಿನಿಧಿ ಸದಸ್ಯರನ್ನು ಒಳಗೊಂಡಿರುವ ಅಂತಹ ಒಂದು ಸಮಿತಿಯನ್ನು ಮಾಡುವುದು ಸೂಕ್ತವಾಗಿರುತ್ತದೆ. ಅಂತಹ ಅವಕಾಶವನ್ನು ನೀಡದೆ ಸಂವಿಧಾನವೊಂದನ್ನು ರೂಪಿಸುವಂಥ ಶಾಸನಕ್ಕೆ ಅವಸರ ಮಾಡುವುದು ಸೂಕ್ತವಲ್ಲ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅದನ್ನು ಬೆಂಬಲಿಸಿದ ಶ್ರೀ ಸಂತಾನಮ್ ಅವರು ಮಾಡಿದ ಸಲಹೆಯನ್ನು ಈ ಸದನ ಒಪ್ಪುವುದಿಲ್ಲ ಎಂದು ನಾನು ಆಶಿಸುತ್ತೇನೆ ಮತ್ತು ನನ್ನ ಇತರ ಮಿತ್ರರು ಮಾಡಿದ ಮತ್ತು ಶ್ರೀ ಅನೆಯವರಿಂದ ಬೆಂಬಲಿಸಲಾದ ಪ್ರತಿ ಸಲಹೆಯನ್ನು ಇನ್ನೊಂದೆಡೆ ಸದನ ಅಂಗೀಕರಿಸುತ್ತದೆ ಎಂದು ಆಶಿಸುವೆ.

ನಾನು ಈ ಮೊದಲು ಹೇಳಿದಂತೆ, ನಾವು ಸಂವಿಧಾನದೊಂದಿಗೆ ಪೂರ್ಣ ಪ್ರಮಾಣದಲ್ಲಿ ರೀತಿಯಲ್ಲಿ ವ್ಯವಹರಿಸುತ್ತಿಲ್ಲ. ನಾವು ಇಡೀ ಚಿತ್ರವನ್ನು ನಮ್ಮ ಮುಂದೆ ಹೊಂದುವವರೆಗೂ ಸದನ ತಾನೇ ಒಂದಲ್ಲ ಒಂದು ರೀತಿಯಲ್ಲಿ ಸಂವಿಧಾನದ ಸ್ವರೂಪವನ್ನು ತನ್ನ ಕಣ್ಣೆದುರಿಗೆ ಇರಿಸಿಕೊಂಡಿದೆಯೆಂದು ಹೇಳಲಾಗುವುದಿಲ್ಲ. ಅದರೆ, ಕೆಲವು ವಿಷಯಗಳಲ್ಲಿ, ಉದಾ. ಅಲ್ಪಸಂಖ್ಯಾತ ಸಮಿತಿ ವರದಿ ಇತ್ಯಾದಿಗಳ ವಿಷಯಗಳಲ್ಲಿಯಂತೆ, ಸಾಕಷ್ಟು ಒಮ್ಮತವಿತ್ತು. ಅಂದರೆ ನಿರ್ಣಯಗಳು ತಲಪಿದುದನ್ನು ಪ್ರಶ್ನಿಸುವಂತಿರಲಿಲ್ಲ. ಆದರೆ ಹಲವು ಮಾರಕ ವಿಷಯಗಳು ಮತ್ತು ಆನುಷಂಗಿಕವಾಗಿ ಉದ್ಭವಿಸುವ ವಿಷಯಗಳು ಮುಖ್ಯ ಪ್ರತಿಪಾದನೆಗಳ ಉಪಸಿದ್ಧಾಂತಗಳ ಮಾದರಿ ಇದೆ. ಅದು ಅರ್ಹ ಮತ್ತು ಸೂಕ್ತವಿದ್ದು ಅವನ್ನು ಹೊಸದಾಗಿವೆಯೇ ಎಂಬುದನ್ನು ನಿರ್ಧರಿಸಬೇಕು. ನಾವೀಗಾಗಲೇ ಇವುಗಳ ವಿಷಯುವಾಗಿ ತೆಗೆದುಕೊಂಡ ನಿರ್ಧಾರಗಳನ್ನು ಬದಲಾಯಿಸಲಾಗುವುದಿಲ್ಲ ಎಂದು ತಿಳಿಯುಬಾರದು. ಆದಷ್ಟು ಸುಲಭ ಸಾಧ್ಯವಾಗಿ ಅವು ಬದಲಾಯಿಸುವಂತಿರಬೇಕು. ಅದೂ ನಾವು ಸಂವಿಧಾನದ ಇಡೀ ಚಿತ್ರವನ್ನು ಹೊಂದುವವರೆಗೂ ಸಂವಿಧಾನದಲ್ಲಿ ಒಳಗಾದ ಪ್ರತಿಶಬ್ದ, ಪ್ರತಿ ವಿಭಾಗ ಮತ್ತು ಪ್ರತಿಸಿದ್ಧಾಂತಗಳನ್ನು ಚರ್ಚಿಸಿ ಬದಲಾಯಿಸುವಂತಿರಬೇಕು. ಅಲ್ಲಿಯವರೆಗೆ ನಮ್ಮ ಯಾವ ನಿರ್ಣಯಗಳನ್ನೂ ಯಾವುದೇ ರೀತಿಯಲ್ಲಿ ಬದಲಾಯಿಸಲಾಗುವಂಥವಲ್ಲ ಎಂಬು ತಿಳಿಯಬಾರದು.

**ಶ್ರೀ ತಾಜಮಲ್ ಹುಸೇನ್** (ಬಿಹಾರ್ : ಮುಸ್ಲಿಮ್) : ಮಾನ್ಯರೆ, ನಾನು ಶ್ರೀ ಸತ್ಯನಾರಾಯಣ ಸಿನ್ಹ ರವರ ಪ್ರಸ್ತಾವವನ್ನು ವಿರೋಧಿಸಲು ನಿಂತಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಈ ಹಂತದಲ್ಲಿ ಒಂದು ಸಮಿತಿ ನೇಮಕ ಮಾಡುವುದು ತಪ್ಪಾಗುತ್ತವೆ. ಕೆಲಸಗಳನ್ನು ಭಾಗಶಃ ಮಾಡುವುದರಲ್ಲಿ ನನಗೆ ನಂಬಿಕೆ ಇಲ್ಲ. ಎಲ್ಲ ವರದಿಗಳನ್ನು ಪರಿಗಣಿಸಿ ಮುಗಿಸುವವರೆಗೂ ನಾವು ಇಲ್ಲಿ ಕುಳಿತುಕೊಳ್ಳುವುದು ನಮ್ಮ ದೃಷ್ಟಿಯಲ್ಲಿ ಅತ್ಯುತ್ತಮ ಎಂದು ನನಗನಿಸುತ್ತಿದೆ. ವರದಿಗಳನ್ನು ಪರಿಗಣಿಸಿ ನಿರ್ಣಯವನ್ನು ತೆಗೆದುಕೊಳ್ಳಲು ಹದಿನೈದು ದಿನಗಳಿಗಿಂತ ಹೆಚ್ಚೇನೂ ಸಮಯ ಬೇಕಾಗುವುದಿಲ್ಲ ಎಂದು ಎನಿಸುತ್ತದೆ. ನಾವೀಗ ಕೆಲಸ ಮುಂದುವರಿಸಿದರೆ ಅದನ್ನು ಸೆಪ್ಟೆಂಬರ್ ೧೨ರ ವೇಳೆಗೆ ಮುಗಿಸಲು ನಾವು ಸಮರ್ಥರಿದ್ದೇವೆ ಎಂದು ನಾನು ತಿಳಿದಿದ್ದೇನೆ. ಸರ್ಕಾರ ಇನ್ನೆಲ್ಲೋ ಕಾರ್ಯನಿರತವಾಗಿ ಕೆಲವು ಕಾರಣಗಳಿಗಾಗಿ ಹಾಗೆ ಮಾಡಲು ಸಿದ್ಧವಿಲ್ಲದಿದ್ದರೆ ನಾವು ಸದನವನ್ನು ಕೆಲವು ದಿನಗಳಷ್ಟು ಮುಂದಕ್ಕೆ ಹಾಕಿ ಮತ್ತೆ ಸೇರೋಣ. ಆದರೆ ನಾವು ಈಗ ಅಧಿವೇಶನ ಮುಗಿಸುವುದು ಬೇಡ. ಕೆಲವು ದಿನಗಳು ಮುಂದೂಡೋಣ, ಮತ್ತು ಪುನಃ ಸೇರೋಣ ಮತ್ತು ನಾವೀಗ ಕೈಗೆತ್ತಿಕೊಂಡಿರುವ ಕೆಲಸ ಮುಗಿಸೋಣ. ಎಲ್ಲ ವರದಿಗಳೂ ಮುಗಿದಾಗ ನಾವು ಒಂದು ಸಮಿತಿ ನೇಮಕ ಮಾಡಿ ಸುಮಾರು ಮೂರು ತಿಂಗಳ ಕಾಲ ಮುಂದೂಡೋಣ. ಸಮಿತಿಗೆ ಇಡೀ ವಿಷಯ ಪರಿಶೀಲಿಸಲು ಮತ್ತು ಪೂರ್ಣಗೊಳಿಸಲು ಮತ್ತು ಒಂದು ಮಸೂದೆ ರೂಪದಲ್ಲಿ ಅದನ್ನು ಸಲ್ಲಿಸಲು ಸುಮಾರು ಎರಡು ತಿಂಗಳುಗಳು ಬೇಕಾಗುತ್ತದೆ ಎಂದು ನಾನು ತಿಳಿದಿದ್ದೇನೆ. ಮತ್ತು ಮಸೂದೆ ಪರಿಗಣಿಸಲು ನಮಗೆ ಕಡೆಪಕ್ಷ ಒಂದು ತಿಂಗಳು ಅದನ್ನು ಅಧ್ಯಯನ ಮಾಡಲು ಬೇಕಾಗುತ್ತದೆ. ಅನಂತರ ನಾವು ಅಧಿವೇಶದಲ್ಲಿ ಸೇರಬಹುದು. ಆದುದರಿಂದ ನಾವು ಸೆಪ್ಟೆಂಬರ್ ಮಧ್ಯದವರೆಗೆ ಅಥವಾ ಕಡೇ ಪಕ್ಷ ಸೆಪ್ಟೆಂಬರ್ ಕೊನೆಯವರೆಗೆ ನಮ್ಮ ಕೆಲಸವನ್ನು ಮುಂದುವರಿಸಿ ಈ ವರದಿಗಳನ್ನು ಗಮನಿಸೋಣ. ಒಂದು ವೇಳೆ ಸೆಪ್ಟೆಂಬರ್ ಅಂತ್ಯಕ್ಕೆ ಆಗದಿದ್ದರೆ ಅಕ್ಟೋಬರ್ ನವೆಂಬರ್ ಅಥವಾ ಡಿಸೆಂಬರ್‌ಗೆ ಮುಂದೂಡಬಹುದು. ಮತ್ತು ಪುನಃ ಜನವರಿಯಲ್ಲಿ ಸೇರೋಣ ಹಾಗೂ ಈ ಕೆಲಸ ನಾವು ಮುಗಿಸುವವರೆಗೂ ಹೀಗೆಯೇ ಮುಂದುವರಿಸೋಣ. ನಾವು ಜನವರಿ ಮತ್ತು ಫೆಬ್ರವರಿಗಳಲ್ಲಿ ಎರಡು ತಿಂಗಳು ಕುಳಿತರೆ ಫೆಬ್ರವರಿ ಕೊನೆಯ ವೇಳೆಗೆ ನಾವು ಕೆಲಸವನ್ನು ಮುಗಿಸಿಬಹುದು. ಮೂರು ತಿಂಗಳುಗಳ ಕಾಲ ನಾವು ಇಲ್ಲಿ ಒಕ್ಕೂಟ ಸಂಸತ್ತಿನ ಸದಸ್ಯರಾಗಿ ಉಳಿಯಬಹುದು ಈ ಮೂರು ತಿಂಗಳುಗಳ ಅವಧಿಯಲ್ಲಿ ಸ್ವಲ್ಪ ಸಮಯವನ್ನು ಇದಕ್ಕೆ ಉಪಯೋಗಿಸಿಕೊಂಡು ಬಳಿಕ ನಾವು ಮಾರ್ಚ್ ಆರಂಭದಿಂದ

ಅಂತ್ಯದವರೆಗೆ ಕುಳಿತು ಅಥವಾ ಏಪ್ರಿಲ್ ಮಧ್ಯದವರೆಗೆ ಕೇಂದ್ರ ಶಾಸನ ಸಭೆಯ ಬಜೆಟ್ ಅಧಿವೇಶನಕ್ಕೆ ಅಧಿವೇಶನವನ್ನು ಮುಂದುವರಿಸಬಹುದು. ಸ್ವಾಮಿ ಕೆಲಸ ಸುಗಮವಾಗಿ ಸಾಗಲು ನಾವು ಈಗ ಮುಂದುವರಿಯಬೇಕು ಮತ್ತು ವರದಿಗಳನ್ನು ಗಮನಿಸುವ ಇಡೀ ಕೆಲಸ ಮುಗಿಸಿದ ಅನಂತರ ಒಂದು ಸಮಿತಿಯನ್ನು ನೇಮಕ ಮಾಡುವುದು ಅತ್ಯುತ್ತಮ ಎಂದು ನನಗನಿಸುತ್ತದೆ.

**ಮಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್** (ಮದ್ರಾಸ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಸಂವಿಧಾನ ಸಿದ್ಧಮಾಡುವ ಪ್ರಕ್ರಿಯೆ ಕಳೆದ ಎಂಟು ಅಥವಾ ಒಂಬತ್ತು ತಿಂಗಳುಗಳಿಂದ ಜರುಗುತ್ತಲೇ ಇದೆ. ಸಂವಿಧಾನ ರಚನಾಸಭೆಯು ಹಲವು ವಿಷಯಗಳನ್ನು ಅವಲೋಕಿಸಲು ಮತ್ತು ಪ್ರಾಂತಗಳಿಗೆ ಮತ್ತು ಕೇಂದ್ರಕ್ಕೆ ಒಂದು ಸಂವಿಧಾನವನ್ನು ಶಿಫಾರಸು ಮಾಡಲು ಕೆಲವು ಸಮಿತಿಗಳನ್ನು ನೇಮಿಸಿತು. ಒಕ್ಕೂಟದ ಅಧಿಕಾರಗಳು ಅಲ್ಪಸಂಖ್ಯಾತರ ಹಕ್ಕುಗಳು, ಮೂಲಭೂತ ಹಕ್ಕುಗಳು ಮುಂತಾದ ವಿಶೇಷ ವಿಷಯಗಳನ್ನು ಕುರಿತು ವರದಿಗಳನ್ನು ತಯಾರಿಸಲು ಕೂಡ ಸಮಿತಿಯೊಂದನ್ನು ನೇಮಕ ಮಾಡಿತು. ಈ ಸಮಿತಿಗಳು ಅವುಗಳಿಗೆ ವಹಿಸಿದ ಹಲವು ವಿಷಯಗಳನ್ನು ನೋಡಿದ ಹಾಗೂ ಜವಾಬ್ದಾರಿಯಿಂದ ಪರಿಶೀಲಿಸಿದ ಅನಂತರ. ಈ ಸಭೆ ತಮ್ಮ ವರದಿಗಳನ್ನು ಸಲ್ಲಿಸಿದವು. ವರದಿಗಳ ಬಹುತೇಕ ಭಾಗವನ್ನು ಈ ಸಭೆಯಲ್ಲಿ ಚರ್ಚಿಸಲಾಗಿದೆ ಮತ್ತು ಈ ಸಭೆಯು ಕೆಲವು ತೀರ್ಮಾನಗಳಿಗೆ ಬಂದಿತು ಹಾಗೂ ಒಂದಲ್ಲ ಒಂದು ರೀತಿ ಕೆಲವು ವಿಷಯಗಳನ್ನು ನಿರ್ಧರಿಸಿತು. ಇದರಿಂದಾಗಿ ನಾವು ಈಗ ಒಂದು ಖಚಿತ ಹಂತವನ್ನು ತಲಪಿದ್ದೇವೆ. ಸಮಿತಿಗಳು ಪ್ರಶ್ನೆಗಳ ಅಧ್ಯಯನ ಮಾಡಿ ತಮ್ಮ ವರದಿಗಳನ್ನು ತಯಾರಿಸಿದ ನಂತರ ಈ ವರದಿಗಳನ್ನು ಈ ಸಭೆಯಲ್ಲಿ ಚರ್ಚಿಸಲಾಗಿದೆ ಮತ್ತು ಈ ಬಹುತೇಕ ಪ್ರಶ್ನೆಗಳನ್ನು ನಿರ್ಧರಿಸಿಯಾಗಿದೆ ಮತ್ತು ಕೆಲವು ವಿಷಯಗಳನ್ನು ಮಾತ್ರ ಹಾಗೆಯೇ ಬಿಡಲಾಗಿದೆ. ಈಗ ಎರಡು ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲನೆಯದು ಸಂವಿಧಾನ ಕರಡು ರಚಿಸಲು ಒಂದು ಆಯ್ಕೆ ಸಮಿತಿಯನ್ನು ಈಗ ಆಯ್ಕೆ ಮಾಡಬೇಕೇ ಅಥವಾ ಈ ಸದನವು ಉಳಿದ ಎಲ್ಲ ವಿಷಯಗಳನ್ನು ನಿರ್ಧರಿಸಿದ ಅನಂತರ ಅದನ್ನು ಆಯ್ಕೆ ಮಾಡಬೇಕೇ ಎಂಬುದು ಆಗಿದೆ. ಎರಡನೆಯ ಪ್ರಶ್ನೆ, ಈ ಸದನವು ಹಿಂದೆ ತೆಗೆದುಕೊಂಡ ನಿರ್ಣಯಗಳನ್ನು ಮುಂದೆ ಕರಡು ಮಸೂದೆ ಬಂದ ಹಂತದಲ್ಲಿ ಪುನಃ ಪರಿಶೀಲಿಸಬೇಕೇ ಎಂಬುದಾಗಿದೆ. ಈ ಪ್ರಸ್ತಾವದ ಮೇಲೆ ಈ ಎರಡೂ ಪ್ರಶ್ನೆಗಳನ್ನು ನಿರ್ಧರಿಸಬೇಕಿದೆ. ನನ್ನ ಸ್ಪಷ್ಟ ಅಭಿಪ್ರಾಯದಲ್ಲಿ ಈಗಾಗಲೇ ನಿರ್ಧಾರ ತೆಗೆದುಕೊಂಡ ವಿಷಯಗಳ ನಿರ್ಣಯಗಳನ್ನು ಪುನಃ ತೆಗೆದು ನೋಡುವುದಕ್ಕೆ ಅವಕಾಶವಿಲ್ಲ ಅಥವಾ ಅದು ಸಮರ್ಥನೀಯವೂ ಅಲ್ಲ. ನನ್ನ ಮಿತ್ರ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ಮಂಡಿಸಿದಂತೆ. ಅವನ್ನು ಚರ್ಚಿಸಿಯಾಗಿದೆ ಮತ್ತು ಪರಿಗಣಿಸಲು ಸಮರ್ಥವಿದ್ದ ಸಮಿತಿಗಳಿಂದ ರೂಪಿಸಲಾದ ವರದಿಗಳ ಮೇಲೆ ಅವನ್ನು ಪರಿಶೀಲಿಸಿಯಾಗಿದೆ. ಅವುಗಳನ್ನು ಪುನಃ ಕೈಗೆತ್ತಿಕೊಂಡು ಕೂಲಂಕಷವಾಗಿ ಈ ಸದನ ಚರ್ಚಿಸಿದೆ. ಆದುದರಿಂದ, ಈ ಹಂತದಲ್ಲಿ ಅವನ್ನು ಪುನಃ ಪರಿಶೀಲನೆಗೆ ಕೈಗೆತ್ತಿಕೊಳ್ಳುವುದರಿಂದ ಯಾವುದೇ ಉಪಯುಕ್ತ ಉದ್ದೇಶವೂ ಈಡೇರುವುದಿಲ್ಲ ಹಾಗೂ ಅದು ಸರಿಯೂ, ಸೂಕ್ತವೂ ಅಲ್ಲ ಎಂದು ನಾನು ಅಂದುಕೊಂಡಿದ್ದೇನೆ.

**ಶ್ರೀ ಸಿ. ಸುಬ್ರಹ್ಮಣ್ಯಂ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಒಂದು ಕ್ರಿಯಾಲೋಪ ಕ್ರಮಗಳ ನಿಯಮಗಳ ನಿಯಮ ೩೨ ಈ ಕೆಳಗಿನಂತಿದೆ:

> "ಸಂವಿಧಾನ ರಚನಾಸಭೆಯು ಒಮ್ಮೆ ನಿರ್ಧರಿಸಿದ ಯಾವ ಪ್ರಶ್ನೆಯನ್ನು ಕುರಿತು ಹಾಜರಿರುವ ಸದಸ್ಯರ ಕಡೆಪಕ್ಷ ನಾಲ್ಕನೆಯ ಒಂದರಷ್ಟು ಮತಚಲಾಯಿಸುವ ಮೂಲಕ ಸಮ್ಮತಿಸದೆಯಿದ್ದರೆ ಅದನ್ನು ಪುನಃ ತೆಗೆದು ನೋಡುವಂತಿಲ್ಲ."

ಆದುದರಿಂದ ಈಗಾಗಲೇ ನಿರ್ಧರಿಸಲಾದ ಪ್ರಶ್ನೆಗಳನ್ನು ಕುರಿತು ಪುನಃ ಪರಿಶೀಲಿಸಲು ಅವಕಾಶ ಮಾಡಿದ್ದೇವೆ ಎಂಬುದು ಸ್ಪಷ್ಟ. ವಿಷಯ ಇದು ಇರುವಲ್ಲಿ ಈ ಕುರಿತು ಯಾವುದೇ ಚರ್ಚೆ ಏಕಿರಬೇಕು ಎಂಬುದನ್ನು ನಾನು ತಿಳಿಯಬೇಕಿದೆ. ನಾವೀಗಾಗಲೇ ನಿರ್ಣಯಗಳ ಪುನಃ ಪರಿಶೀಲನೆಗೆ ಅವಕಾಶ ಮಾಡಿದ್ದೇವೆ.

ಆದುದರಿಂದ ಒಮ್ಮೆ ತಲುಪಿದ ನಿರ್ಣಯಗಳನ್ನು ಪುನಃ ತೆಗೆದು ನೋಡುವುದಕ್ಕೆ ಯಾವುದೇ ಚರ್ಚೆಯ ಅಗತ್ಯವಿಲ್ಲ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಮೊದಲ ಭಾಷಣಕಾರರು ಈ ಪ್ರಶ್ನೆ ಎತ್ತಿದಾಗ ತಾವು ಈ ವಿಧಾನದ ವಿಚಾರವಾಗಿ ಹೇಳಬಹುದಿತ್ತು. ಈಗ ಚರ್ಚೆ ಇಲ್ಲಿವರೆಗೆ ಬಂದಿದ್ದು ಅದನ್ನು ನಡುವೆ ನಿಲ್ಲಿಸಲಾಗದು. ಆದರೆ ಎಲ್ಲ ಒಂದೇ. ಈ ಪ್ರಶ್ನೆಯನ್ನು ಸುದೀರ್ಘವಾಗಿ ಚರ್ಚಿಸಲಾಗಿದೆ ಎಂದು ತಿಳಿದಿದ್ದೇನೆ ಮತ್ತು ಗೌರವಾನ್ವಿತ ಸದಸ್ಯರನ್ನು ಸಾಧ್ಯವಾದಷ್ಟೂ ತಮ್ಮ ಟೀಕೆಗಳನ್ನು ಕಡಿಮೆಗೊಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

**ಮೆಹಬೂಬ್ ಅಲಿ ಬೇಗ್ ಸಾಹಿಬ್ ಬಹಾದೂರ್** : ಎರಡನೆಯ ಪ್ರಶ್ನೆಯು ಮಸೂದೆ ರಚಿಸುವಲ್ಲಿ ಆಯ್ಕೆ ಸಮಿತಿ ಕುರಿತು ಇದೆ. ನನ್ನ ಗೆಳೆಯ ಡಾ. ಪಟ್ಟಾಭಿ ಸೀತಾರಾಮಯ್ಯನವರ ವಿಚಾರವಾದ ಬಿಟ್ಟು ಹೋಗಿರುವ ಕೆಲವು ವಿಷಯಗಳನ್ನು ಚರ್ಚಿಸಬೇಕು ಮತ್ತು ಸದನ ಅದನ್ನು ಪರಿಶೀಲಿಸಬೇಕು ಎಂಬುದನ್ನು ನಾನು ಒಪ್ಪುತ್ತೇನೆ.ಅದರ ಅನಂತರ ಈ ಕರಡನ್ನು ರಚಿಸುವ ಸಮಿತಿಯನ್ನು ನೇಮಕ ಮಾಡಲು ಸಕಾಲ. ಕೆಲವು ಬಿಟ್ಟು ಹೋಗಿರುವ ವಿಷಯಗಳನ್ನು ಈ ಸದನ ಏಕೆ ಚರ್ಚಿಸಬಾರದು ಎಂಬುದಕ್ಕೆ ಯಾವುದೇ ಕಾರಣ ನನಗೆ ಕಾಣಿಸುತ್ತಿಲ್ಲ. ಬಿಟ್ಟುಹೋಗಿರುವ ಕೆಲವು ವಿಷಯಗಳು ಇತರೆ ವಿಷಯಗಳಷ್ಟು ಮುಖ್ಯವಲ್ಲ ಎಂದು ಪರಿಗಣಿಸಲಾಗಿದೆಯೇ? ಅದು ಸ್ಪಷ್ಟವಾಗಿ ಹಾಗಲ್ಲ. ಒಬ್ಬ ಸದಸ್ಯರು ಮಸೂದೆಯನ್ನು ಸದನಕ್ಕೆ ಮಂಡಿಸಿದ ಅನಂತರ ಅದು ಒಂದು ಆಯ್ಕೆ ಸಮಿತಿಗೆ ಹೋಗಬೇಕು ಎಂದು ಹೇಳಿದ್ದಾರೆ. ಈ ದೊಡ್ಡ ಸಭೆಯು ಇಡೀ ಪ್ರಶ್ನೆಯನ್ನು ಅವಲೋಕಿಸಿದೆ ಮತ್ತು ವಿಷಯಗಳನ್ನು ಒಂದು ಅಥವಾ ಇನ್ನೊಂದು ರೀತಿಯಲ್ಲಿ ನಿರ್ಧರಿಸಿದೆ ಎಂದ ಬಳಿಕ ಇದು ತೀರ ಅವಶ್ಯ ಎಂದು ನಾನು ತಿಳಿದೇ ಇಲ್ಲ. ಆದುದರಿಂದ ಕರಡು ಮಸೂದೆ ಪರಿಶೀಲಿಸಲು ಒಂದು ಆಯ್ಕೆ ಸಮಿತಿ ನೇಮಕ ಮಾಡುವ ಆವಶ್ಯಕತೆ ಇರುವುದಿಲ್ಲ ಮತ್ತು ನಾವು ಹಲವು ವಿಷಯಗಳನ್ನು ಚರ್ಚಿಸಿ ನಿರ್ಧರಿಸಿದಂತೆ ಉಳಿದ ವಿಷಯಗಳನ್ನು ಕೂಡಾ ಈ ಸಭೆ ನಿರ್ಧರಿಸಬೇಕು. ಆಗ ಕರಡು ರಚನಾ ಸಮಿತಿಗೆ ಉಳಿಯುವುದು ನಿರ್ಧರಿಸಿದ ವಿಷಯಗಳನ್ನು ಕಾನೂನುಬದ್ಧ ರೂಪದಲ್ಲಿ ಇರಿಸುವುದು ಮತ್ತು ಆ ನಿರ್ಧಾರಗಳಿಂದ ಆವಶ್ಯಕ ಎನ್ನಬಹುದಾದ ತತ್ಪರಿಣಾಮದ ಉಪಬಂಧಗಳನ್ನು ಒದಗಿಸುವುದು ಮಾತ್ರ ಆಗಿರುತ್ತದೆ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ ಅಷ್ಟೆ. ಕರಡು ಮಸೂದೆ ಸದನದ ಮುಂದೆ ಬಂದಾಗ ಅದರ ಮೇಲೆ ಚರ್ಚೆಯನ್ನು ನಡೆಸಿ ಅಲ್ಪಕಾಲದಲ್ಲಿ ಸುಲಭವಾಗಿ ಅಂಗೀಕರಿಸುವುದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಹೆಚ್ಚು ವಿವರಣೆಗಳೊಡನೆ ಚರ್ಚಿಸಿದರೆ ಅದಕ್ಕೆ ಹೆಚ್ಚು ಸಮಯ ಬೇಕಾಗುತ್ತದೆ. ಆದುದರಿಂದ ನಮ್ಮ ಮುಂದೆ ಕರಡು ಇರಿಸಿದಾಗ ಆ ಸಮಯದಲ್ಲಿ ಪುನಃ ವಿಷಯವನ್ನು ಸಾಮಾನ್ಯವಾಗಿ ಮತ್ತೆ ಪರಿಶೀಲಿಸುವುದು ನಮಗೆ ಮುಕ್ತವಾಗಿರುವುದಿಲ್ಲ ಎಂದು ನಾನು ನಿವೇದಿಸಿಕೊಳ್ಳುತ್ತಿದ್ದೇನೆ. ಅದೇ ಸಮಯಕ್ಕೆ ನನ್ನ ಅಭಿಪ್ರಾಯದಲ್ಲಿ ಸದನವು ಇತರ ವಿಷಯಗಳನ್ನು ನಿರ್ಧರಿಸಿದಂತೆಯೇ, ನಿರ್ಧರಿಸದೆ ಇರುವ ವಿಷಯಗಳನ್ನು ಕುರಿತು ನಿರ್ಧರಿಸಬೇಕು ಮತ್ತು ಈ ಹಂತದಲ್ಲಿ ನಮಗೆ ಒಂದು ಸಮಿತಿಯನ್ನು ನೇಮಕ ಮಾಡುವ ಅಗತ್ಯವಿಲ್ಲ.

**ಶ್ರೀ ರಾಜ್ ಕೃಷ್ಣಬೋಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಸಂಬಂಧವಾಗಿ ನಾನು ಹೇಳುವುದು ಹೆಚ್ಚೇನೂ ಇಲ್ಲ. ನನ್ನ ಅಭಿಪ್ರಾಯದಲ್ಲಿ ಇಲ್ಲಿಯವರೆಗಿನ ನಡವಳಿಗಳಲ್ಲಿ ನಾವು ನಿರಂತರತೆ ಮತ್ತು ಸ್ಥಿರತೆ ಕಾಯ್ದುಕೊಂಡಿದ್ದಿದ್ದರೆ ಸೂಕ್ತವಾಗಿರುತ್ತಿತ್ತು. ಇಂದಿನ ಚರ್ಚೆಯಲ್ಲಿ ನಾವು ಅನುಸರಿಸುತ್ತಿದ್ದ ಪಥದಿಂದ ದೂರಸರಿದಂತೆ ತೋರುತ್ತದೆ. ಮೊದಲು ನಾವು ಸಂವಿಧಾನ ರಚಿಸುವ ಸಿದ್ಧಾಂತಗಳನ್ನು ನಿರ್ಧರಿಸುವ ಆಲೋಚನೆ ಮಾಡಿದ್ದೆವು. ನೀವು ಎರಡು ಸಮಿತಿಗಳನ್ನು ಸಜ್ಜು ಮಾಡಿದ್ದಿರಿ ಮತ್ತು ಅವು ಸಿದ್ಧಾಂತಗಳನ್ನು ಇತ್ಯರ್ಥಮಾಡಿವೆ. ಒಮ್ಮೆ ನೀತಿಗಳನ್ನು ನಿರ್ಧರಿಸಿದ ಮೇಲೆ ಅವುಗಳ ಮೇಲೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಿದ್ದರೆ ಸೂಕ್ತವಾಗುತ್ತಿತ್ತು. ಇದನ್ನು ಮಾಡಲಾಗಲಿಲ್ಲ. ಏಕೆಂದರೆ ಪ್ರಸಕ್ತ ಅಧಿವೇಶನ ಆಗಸ್ಟ್

೩೧ಕ್ಕೆ ಮೊದಲೇ ಮುಗಿಯುತ್ತವೆ. ಆದುದರಿಂದ ಇನ್ನು ಮುಂದೆ ಅಧಿವೇಶನವನ್ನು ಕರೆದಾಗ ಅಧಿವೇಶನವು ಎಷ್ಟು ದಿನ ನಡೆಯುತ್ತದೆ ಎಂಬುದರ ಸ್ಪಷ್ಟ ಸೂಚನೆಗಳು ನಮಗೆ ದೊರೆತಿರಬೇಕು ಎಂದು ನಾನು ಆಶಿಸುತ್ತೇನೆ. ಈ ಸಂಬಂಧವಾಗಿ ನಮಗೆ ಯಾವುದೇ ಸೂಚನೆಗಳು ದೊರೆಯುವುದಿಲ್ಲ ಮತ್ತು ನಮಗೆ ಬರುವ ಅಭಿಪ್ರಾಯವೆಂದರೆ ಈ ರಚನಾಸಭೆಯ ಕೆಲಸವನ್ನು ಮುಗಿಸಿ ಶೀಘ್ರದಲ್ಲಿಯೇ ನಾವು ನಮ್ಮ ನಮ್ಮ ಚುನಾವಣಾ ಕ್ಷೇತ್ರಗಳಿಗೆ ಹಿಂದಿರುಗುತ್ತೇವೆ ಎಂಬುದಾಗಿರುತ್ತದೆ. ಆದರೆ ಇನ್ನು ಮುಂದೆ ಅಧಿವೇಶನ ಸರಿಸುಮಾರು ಎಷ್ಟು ಕಾಲ ಮುಂದುವರಿಯುವುದೆಂಬ ಸ್ಪಷ್ಟ ಸೂಚನೆ ನಮಗೆ ದೊರಕಬೇಕು. ಆಗ ಸದಸ್ಯರು ತಾವು ಅಷ್ಟುಕಾಲ ತಂಗಲು ಸಿದ್ಧರಿಲ್ಲ ಎಂದು ಹೇಳಬಹುದು. ಎರಡೂ ಸಮಿತಿಗಳು ಶ್ರಮದಿಂದ ಮತ್ತು ಶ್ರಮದ ದುಡಿಮೆಯ ಅನಂತರ ಒಪ್ಪಲಾದ ನೀತಿಗಳನ್ನು ಕುರಿತು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ನಾವು ಇಷ್ಟಪಟ್ಟಿರಬಹುದಿತ್ತು ಎಂದು ನಾನು ಅತ್ಯಂತ ಗೌರವದಿಂದ ನಿವೇದಿಸಲು ಇಷ್ಟಪಡುತ್ತೇನೆ. ಬೇರೆ ರೀತಿ ಮಾಡುವುದು ತಪ್ಪಾಗುತ್ತದೆ ಮತ್ತು ನಾವು ನಮ್ಮ ಕರ್ತವ್ಯವನ್ನು ಮಾಡ್ತುತ್ತಿಲ್ಲ ಎಂದು ನನಗೆನಿಸುತ್ತದೆ. ನಾವು ೩೧ನೇ ದಿನಾಂಕದ ಅನಂತರ ಇಲ್ಲಿ ಸೇರುವುದಿಲ್ಲ ಎಂದು ತಾವು ನಿರ್ಧರಿಸಿರುವಾಗ ನಾನು ನಿವೇದಿಸಿಕೊಳ್ಳುವುದೇನೆಂದರೆ ಯಾವುದನ್ನು ಕುರಿತು ನಾವು ನಮ್ಮ ಅಭಿಪ್ರಾಯ ವ್ಯಕ್ತಪಡಿಸಿಲ್ಲವೋ ಆ ಒಕ್ಕೂಟ ಸಂವಿಧಾನದ ನೀತಿಗಳನ್ನು ಕುರಿತು ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸೆಪ್ಟೆಂಬರ್ ಕೊನೆಯ ವೇಳೆಗೆ ಅಥವಾ ಅಕ್ಟೋಬರ್ ಆರಂಭದಲ್ಲಿ ಇನ್ನೊಂದು ಅಧಿವೇಶನ ಕರೆಯಬೇಕು. ಅದಾದ ಅನಂತರ ಕರಡನ್ನು ಸಿದ್ಧಪಡಿಸಬೇಕು. ಅದನ್ನು ನಾವು ಅಂಗೀಕರಿಸುತ್ತೇವೆ ಹೌದು. ಭಾಷೆಯ ತಪ್ಪು ಏನಾದರೂ ಇದ್ದರೆ ನಾವು ತಿದ್ದುತ್ತೇವೆ. ಮಸೂದೆ ನಮ್ಮ ಮುಂದೆ ಬಂದಾಗ ಅವಶ್ಯವಿದ್ದರೆ ನಾವು ತಿದ್ದುಪಡಿ ಮಾಡಬಹುದು. ಆದರೆ ನಾವು ಮೂಲಸಿದ್ಧಾಂತಗಳ ವಿರುದ್ಧ ಹೋಗುವ ಹಕ್ಕನ್ನು ಹೊಂದಿರುವುದಿಲ್ಲ. ಬಳಿಕ ವಯಸ್ಕ ಮತದಾನದ ಬದಲಿಗೆ ಪರೋಕ್ಷ ಚುನಾವಣೆ ಮೇರೆಗೆ ರಾಜ್ಯಪಾಲರನ್ನು ಆಯ್ಕೆ ಮಾಡಬೇಕು ಎಂದು ನಮಗೆ ಹೇಳಲಾಗುವುದಿಲ್ಲ. ನಾವು ಈ ರೀತಿ ಸಿದ್ಧಾಂತಗಳನ್ನು ಬದಲಾಯಿಸುತ್ತಾ ಹೋದರೆ ಸಂವಿಧಾನ ರಚನಾ ಸಭೆಯ ಕೆಲಸ ತುಂಬ ಕಷ್ಟಕರವಾಗುತ್ತದೆ ಮತ್ತು ಕೆಲಸ ಮುಗಿಯುವುದೇ ಇಲ್ಲ. ಆದುದರಿಂದ ನಾನು ಅತ್ಯಂತ ಗೌರವಯುತವಾಗಿ ನಿವೇದಿಸಿಕೊಳ್ಳುವುದೆಂದರೆ ಈವರೆಗೆ ಮುಗಿಸಿರುವುದನ್ನು ಹಾಗೆಯೇ ಕಾಯ್ದುಕೊಳ್ಳಬೇಕು ಮತ್ತು ಒಕ್ಕೂಟ ಹಾಗೂ ಪ್ರಾಂತೀಯ ಸಂವಿಧಾನಗಳ ಉಳಿದ ನೀತಿಗಳನ್ನು ಕುರಿತಂತೆ ಅಭಿಪ್ರಾಯ ದೃಢಪಡಿಸಿಕೊಳ್ಳುವ ಸಲುವಾಗಿ ಇನ್ನೊಂದು ಅಧಿವೇಶನವನ್ನು ಸೆಪ್ಟೆಂಬರ್ ಅಂತ್ಯದ ವೇಳೆಗೆ ಅಥವಾ ಅಕ್ಟೋಬರ್ ಆರಂಭದಲ್ಲಿ ಕರೆಯಬೇಕು ಎಂದೇ ಆಗಿದೆ. ಅದರ ಅನಂತರ ನಾವು ಸಾಂವಿಧಾನಿಕ ಸಲಹೆಗಾರರಿಗೆ ಕರಡು ಸಿದ್ಧಪಡಿಸಲು ಸಮಯ ಕೊಡುತ್ತೇವೆ ಮತ್ತು ನಮ್ಮ ಮುಂದೆ ಪೂರ್ಣಗೊಂಡ ಕರಡು ಬಂದಾಗ ನಾವು ನಮ್ಮ ಅಂತಿಮ ಅಭಿಪ್ರಾಯ ಕೊಡುತ್ತೇವೆ. ಆದುದರಿಂದ ನಮ್ಮ ಕಾರ್ಯದಲ್ಲಿ ನಾವು ನಿರಂತರತೆ ಕಾಯ್ದುಕೊಳ್ಳಬೇಕಾದುದು ಅವಶ್ಯವಿದೆ.

ನಾನೀಗಾಗಲೇ ಹೇಳಿದಂತೆ ಇಲ್ಲಿಂದ ಮುಂದೆ ಸಂವಿಧಾನ ರಚನಾ ಸಭೆಯನ್ನು ಕರೆದಾಗ ಸುಮಾರು ಎಷ್ಟು ದಿನಗಳು ನಾವು ಇಲ್ಲಿ ತಂಗಬೇಕೆಂಬುದರ ಸೂಚನೆಯನ್ನು ಕೊಡಬೇಕು. ಸದಸ್ಯರು ಹಾಗಾಗಿ ಕೆಲಸವು ಇಂತಿಷ್ಟು ಸಮಯದಲ್ಲಿ ಮುಗಿಯುತ್ತದೆ ಎಂಬುದನ್ನು ತಾವೇ ಕಲ್ಪಿಸಿಕೊಳ್ಳದೆ ಮತ್ತು ಅದಕ್ಕನುಗುಣವಾಗಿ ತಮ್ಮ ಏರ್ಪಾಡುಗಳನ್ನು ಮಾಡಿಕೊಳ್ಳಲು ಹೋಗುವುದಿಲ್ಲ. ಪ್ರತಿಯಾಗಿ ಅವರು ನಿಮ್ಮ ನಿರ್ದೇಶನಗಳ ಆಧಾರದ ಮೇಲೆ ತಮ್ಮ ಕಾರ್ಯಕ್ರಮ ರೂಪಿಸಿಕೊಳ್ಳುತ್ತಾರೆ. ಆಗ ಈ ತೊಡಕುಗಳು ಉದ್ಭವಿಸುವುದಿಲ್ಲ.

**ಶ್ರೀ ಜೈಪಾಲ್ ಸಿಂಗ್** (ಬಿಹಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಈಗ ಮಂಡಿಸಿರುವ ನಿರ್ಣಯವನ್ನು ವಿರೋಧಿಸುತ್ತೇನೆ. ಏಕೆಂದರೆ ಈ ಹಂತದಲ್ಲಿ ತಜ್ಞರ ಅಥವಾ ಇತರೆ ಯಾವುದೇ ಸಮಿತಿಯನ್ನು ನೇಮಕ ಮಾಡುವುದು ಸರಿಯಲ್ಲ ಎಂದು ಭಾವಿಸುತ್ತೇನೆ. ಏಕೆಂದರೆ ಅಂತಹ ಸಮಿತಿ ನಾವು ನಿರ್ಧರಿಸಿರದ

ವಿಷಯಗಳನ್ನು ಬೆದಕಿಕೊಂಡು ಹೋಗಬಹುದು. ಅವರು ಹಿಂದಿನ ನಿರ್ಧಾರಗಳನ್ನು ಸಂಪೂರ್ಣವಾಗಿ ಬದಲಾವಣೆ ಮಾಡಬಹುದು ಮತ್ತು ಸಾಂವಿಧಾನಿಕ ಭಾಷೆಯಲ್ಲಿ ಅದಕ್ಕೆ ಮರುರೂಪವನ್ನು ಕೊಡಬಹುದು ಮತ್ತು ಕೆಲವು ಭಾಷಣಕಾರರಿಂದ ಈ ಸಮಿತಿಯು ಸದನ ನಿರ್ಧಾರ ತೆಗೆದುಕೊಳ್ಳದ ವಿಷಯಗಳನ್ನು ಗಮನಿಸಬಹುದು ಎಂದು ಹಲವು ಸದಸ್ಯರು ಆಪಾದಿಸಿದ್ದಾರೆ. ನಾನು ಅರ್ಥ ಮಾಡಿಕೊಳ್ಳಬಲ್ಲೆ. ಬಹಳಷ್ಟು ಮುಖ್ಯ ವಿಷಯಗಳು ಇನ್ನೂ ಉಳಿದಿವೆ. ಈ ಸಭೆಯು ಅವನ್ನು ಇನ್ನೂ ನಿರ್ಧರಿಸಿಲ್ಲ ಮತ್ತು ಅವುಗಳ ವಿಷಯದಲ್ಲಿ ಹೇಗೆ ನಮ್ಮ ಸಂವಿಧಾನ ರಚಿಸುವ ಅಧಿಕಾರವನ್ನು ಯಾವುದೇ ಸಮಿತಿಗೆ ನಿಯೋಜಿಸಬಹುದು ಎಂದು ನನಗೆ ಅರ್ಥವಾಗುತ್ತಿಲ್ಲ. ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳಿವೆ ಎಂದು ನನಗನಿಸುವುದಿಲ್ಲ. ಖಂಡಗಳನ್ನು ಮತ್ತು ಇತರ ವಿಷಯಗಳನ್ನು ನಾವೀಗಾಗಲೇ ನಿರ್ಧರಿಸಿರುವುದರ ಬಗ್ಗೆ ಒಂದು ಸಮಿತಿಯು ಸೂಕ್ತ ಸಾಂವಿಧಾನಿಕ ಭಾಷೆಯಲ್ಲಿ ಪ್ರತಿ ಮಾಡಬಹುದು ಎಂಬುದನ್ನು ನಾನು ಒಪ್ಪುತ್ತೇನೆ. ಇಲ್ಲಿ ಒಂದು ವಿಧದ ಅಂತಿಮರೂಪವನ್ನು ತಲಪಬೇಕು ಎಂಬ ಅಂಶ ಉದ್ಭವಿಸಿದೆ. ನಿಜ, ನಾವು ಒಂದು ಸಂವಿಧಾನ ರಚಿಸುತ್ತಿದ್ದೇವೆ. ಅದನ್ನು ಪ್ರತಿ ಐದು ನಿಮಿಷಗಳಿಗೊಮ್ಮೆ ನಾವು ಬದಲಾಯಿಸುವಂತಿಲ್ಲ ಎಂಬುದನ್ನು 'ಸಂವಿಧಾನ' ಎಂಬ ಶಬ್ದವೇ ಹೇಳುತ್ತದೆ. ಆದರೆ ಅದೇ ಕಾಲಕ್ಕೆ ಅಂತಿಮಹಂತವನ್ನು ತಲುಪುವ ಮೊದಲು ಸನ್ನಿವೇಶವನ್ನು ಪರಾಮರ್ಶಿಸಲು ನಾವು ಸಾಕಷ್ಟು ಅವಕಾಶವನ್ನು ಹೊಂದಿರಬೇಕು ಎಂದು ನಾನು ಭಾವಿಸುತ್ತೇನೆ. ಅದು ನಮ್ಮ ಹಿಂದಿನ ನಿರ್ಧಾರಗಳನ್ನು ನಾವು ಬದಲಿಸಬಹುದು. ಸದನವು ಒಂದು ಸ್ವತಂತ್ರ ಅಂಗ ಮತ್ತು ಅದು ನಿರ್ಧಾರಗಳನ್ನು ಮಾಡಲು ಮತ್ತು ಮಾಡದಿರಲು ಹಕ್ಕನ್ನು ಉಳ್ಳದ್ದಾಗಿದೆ. ನನಗೆ ಈ ಹಂತದಲ್ಲಿ ಒಂದು ಸಮಿತಿ ನೇಮಕ ಮಾಡುವುದರಿಂದ ನಾವು ಕುದುರೆಯ ಮುಂದೆ ಗಾಡಿ ಕಟ್ಟುತ್ತಿದ್ದೇವೆ ಎಂಬ ಹಾಗೆ ತೋರುತ್ತದೆ. ನಾವು ಹೆಚ್ಚು ಹೆಚ್ಚು ಅರ್ಥ ಮಾಡಿಕೊಂಡಂತೆ ನಾವು ವಿಷಯಗಳ ಬಗ್ಗೆ ಅವಸರ ಮಾಡುವುದರಿಂದ ನಮಗೇನೂ ಲಾಭವಾಗುವುದಿಲ್ಲ ಎಂದು ತಿಳಿದುಬರುತ್ತದೆ. ನಾವು ತಜ್ಞರ ಸಮಿತಿಗಳ ನೇಮಕ ಮಾಡಿದ್ದೇವೆ; ಅವರು ತಮ್ಮ ವರದಿಗಳನ್ನು ಕೊಟ್ಟಿದ್ದಾರೆ; ಮತ್ತು ಏನಾಗಿದೆ ಎಂದರೆ ಆ ವರದಿಗಳು ಈ ಸಂವಿಧಾನ ರಚನಾಸಭೆಯ ಮುಂದೆ ಬಂದಾಗ ಅವುಗಳನ್ನು ಕೂಲಂಕಷವಾಗಿ ಚರ್ಚಿಸಲಾಯಿತು ಮತ್ತು ತಜ್ಞರ ಶಿಫಾರಸುಗಳಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಇದರಿಂದ ಕರಡು ರಚಿಸುವ ಸಮಿತಿಗೂ ಕೂಡ ಅದು ತನ್ನ ವರದಿ ಸಲ್ಲಿಸುವಾಗ ಸುಲಭವಾಗಿರುತ್ತದೆ. ಆ ಸಂದರ್ಭದಲ್ಲಿ ನಾವು ಸಮಯ ವ್ಯರ್ಥ ಮಾಡುತ್ತಿದ್ದೇವೆ ಎಂದು ನನಗೆನಿಸುತ್ತದೆ. ಅದರ ಬದಲಿಗೆ ನಾವು ಮಾಡಬೇಕಾದುದು ಏನೆಲ್ಲ ಉಳಿದಿದೆ ಅದನ್ನು ಪೂರೈಸುವುದು ಉತ್ತಮ. ಆಗ ಕರಡು ರಚನಾ ಸಮಿತಿಯು ಈ ಸಂವಿಧಾನ ರಚನಾಸಭೆ ತೆಗೆದುಕೊಂಡ ಎಲ್ಲ ನಿರ್ಧಾರಗಳ ಮೇಲೆ ಒಂದು ಮಸೂದೆ ಸಿದ್ಧಮಾಡುವ ಸ್ಥಿತಿಯಲ್ಲಿರುತ್ತದೆ. ಆ ಮಸೂದೆಯಲ್ಲಿನ ಭಾಷೆಯನ್ನು ಬದಲಾಯಿಸುವ ಅಥವಾ ಒಳಗೊಂಡ ವಿಷಯವನ್ನು ಬದಲಾಯಿಸುವ ವಿಷಯವನ್ನು ಮಸೂದೆಯು ನಮ್ಮ ಮುಂದೆ ಬಂದಾಗ ಪರಿಶೀಲಿಸಬಹುದು. ಮಾನ್ಯರೆ, ಸಂವಿಧಾನದ ಭಾಷೆಯಲ್ಲಿ ಬುಡಕಟ್ಟು ಜನರ ವಿಷಯವನ್ನು ಕುರಿತ ಕರಡನ್ನು ಸಿದ್ಧಪಡಿಸುವುದನ್ನು ಈ ಸಮಿತಿಗೆ ಬಿಡಬಾರದು ಎಂದು ನಾನು ಭಾವಿಸುತ್ತೇನೆ. ಉದಾಹರಣೆಗೆ ಬುಡಕಟ್ಟು ವಿಷಯಗಳ ಸಂಬಂಧವಾಗಿ ಸಾಂವಿಧಾನಿಕ ಭಾಷೆ ಖಂಡಗಳಲ್ಲಿ ಕರಡು ರಚಿಸಲು ಉಪಸಮಿತಿಗಳಲ್ಲಿ ಒಂದಾಗಿರುವ ಬುಡಕಟ್ಟು ಸಮಿತಿಯನ್ನು ಸಲಹಾ ಸಮಿತಿಯು ಈಗ ನೇಮಿಸಿದೆ. ಅದೂ ಇನ್ನೂ ತನ್ನ ಕೆಲಸ ಪೂರೈಸಬೇಕಿದೆ. ನಾವು ಒಂದು ಮಧ್ಯಂತರ ವರದಿ ಸಲ್ಲಿಸಿದ್ದೇವೆ ಎಂದು ನಾನು ಬಲ್ಲೆ. ಹಾಗೆಂದರೆ ಈ ತಜ್ಞರ ಕರಡು ರಚನಾಕಾರರ ಸಮಿತಿಯು ಇನ್ನೂ ಸಭೆಯ ಮುಂದೆ ಬರದಿರುವ ವಿಷಯಗಳ ಬಗ್ಗೆ ತನ್ನ ಕರಡನ್ನು ಸಲ್ಲಿಸುತ್ತದೆಯೆಂದು ಇದರ ಅರ್ಥವೇ? ಸದನವು ತನ್ನ ನಿರ್ಧಾರಗಳನ್ನು ಮಾಡಲು ಹಕ್ಕುಳ್ಳದ್ದಾಗಿರಬೇಕು ಮತ್ತು ಎಷ್ಟೇ ಮಹತ್ತ್ವದ ತಜ್ಞರು ಇರಬಹುದಾದರೂ ನಾವು ಎಂದೂ ನಮ್ಮ ಸಾಂವಿಧಾನಿಕ ಅಧಿಕಾರವನ್ನು ಯಾವುದೇ ಸಮಿತಿಗೆ ನಿಯೋಜಿಸುವಂತಿಲ್ಲ ಎಂದು ನಾನು ಹೇಳಲು ಬಯಸುತ್ತೇನೆ.

ಅವರು ಮಾಡಿರುವ ಕೆಲಸಕ್ಕೆ ನಾವು ಆಭಾರಿಗಳಾಗಿದ್ದೇವೆ. ಅವನ್ನು ನಾವು ನೋಡಿದ್ದೇವೆ. ಆದರೆ ನಮ್ಮ ಅನುಭವವೆಂದರೆ ತಜ್ಞರು ರೂಪಿಸಿದ ವಿಷಯಗಳು ಸದನದ ಮುಂದೆ ಬಂದಾಗ ತಜ್ಞರನ್ನೂ ಕೂಡ ಸದನವು ಬದಲಾಯಿಸಬೇಕಾಗುತ್ತದೆ.

**ಶ್ರೀ ಹುಸೇನ್ ಇಮಾಮ್** (ಬಿಹಾರ್ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನಾನು ಸದನದ ಸಮಯವನ್ನು ಹೆಚ್ಚಾಗಿ ತೆಗೆದುಕೊಳ್ಳಲು ಇಷ್ಟಪಡುವುದಿಲ್ಲ. ನಾವು ಯಾವ ಸ್ಥಿತಿಗಳಡಿ ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ಎತ್ತಿಹೇಳಲು ನಾನು ಬಯಸುತ್ತೇನೆಯಷ್ಟೆ. ಈ ಕ್ಷಣದಲ್ಲಿ ದೇಶದಲ್ಲಿ ಬಹಳಷ್ಟು ಬೇಗುದಿ ಮತ್ತು ತೊಂದರೆ ಇದೆ. ಅದರಿಂದ ನಾವೆಲ್ಲ ಇಲ್ಲಿ ಕುಳಿತುಕೊಳ್ಳುವುದು ಸರಿಯಲ್ಲ ಎಂದು ತೋರುತ್ತಿದೆ ಹಾಗೂ ನಮ್ಮ ಸ್ಥಾನಗಳಲ್ಲಿರುವುದೂ ಬೇಡ ಎನ್ನಿಸುತ್ತದೆ. ಈ ಅಧಿವೇಶನ ಮುಂದುವರಿಸಬೇಕು ಎಂಬ ಒಂದು ಸಲಹೆ ಮಾಡಲಾಯಿತು. ಸಂಪೂರ್ಣ ಆವಶ್ಯಕ ಎನ್ನುವುದಕ್ಕಿಂತ ಒಂದು ದಿನ ಹೆಚ್ಚು ಮುಂದುವರಿಸಬೇಕೆನ್ನುವುದೂ ಪ್ರಮಾದ ಎಂದು ನನಗೆನಿಸುತ್ತದೆ. ಆದಷ್ಟು ಬೇಗ ನಾವು ಅಧಿವೇಶವನ್ನು ಮುಗಿಸಿ ಹಿಂದಕ್ಕೆ ಹೋಗಿ ಹಳ್ಳಿಗಾಡುಗಳಲ್ಲಿ ಶಾಂತಿಯ ಸಂದೇಶ ಕೊಡಬೇಕು. ಭಾರತದ ಪೌರರಾಗಿ ಶಾಂತಿ ನೆಲಸುವುದನ್ನು ನೋಡುವುದು ನಮ್ಮ ಕರ್ತವ್ಯವಾಗಿದೆ. ಶ್ರೀ ಸತ್ಯನಾರಾಯಣ ಸಿನ್ಹರ ಪ್ರಸ್ತಾವ ಬಲು ಸರಳ ಮತ್ತು ಇತರ ಗೌರವಾನ್ವಿತ ಸದಸ್ಯರು ಅದಕ್ಕೆ ಏಕೆ ಅವಿಶ್ವಾಸ ತೋರಿದರು ಎಂದು ನನಗೆ ಅರ್ಥವಾಗುತ್ತಿಲ್ಲ. ನಾವದನ್ನು ಶಾಂತ ರೀತಿಯಲ್ಲಿ ಪರೀಕ್ಷಿಸೋಣ. ಈ ಸ್ವರೂಪದ ಒಂದು ಸಭೆಗೆ ವಿಷಯಗಳನ್ನು ವಿವರವಾಗಿ ಒಳಹೊಕ್ಕು ಪರೀಕ್ಷಿಸಲು ಸಾಧ್ಯವಿಲ್ಲ. ಎಲ್ಲವನ್ನೂ ವಿವರವಾದ ಪರಿಶೀಲನೆಗಾಗಿ ಆಯ್ಕೆ ಸಮಿತಿಗಳಿಗೆ ಬಿಡಲಾಗಿದೆ. ಇಲ್ಲಿವರೆಗೆ ಪರಿಶೀಲಿಸುವ ಅನುಕೂಲವನ್ನು ಹೊಂದಿದ್ದೆವು. ಮೊದಲನೆಯದಾಗಿ ತಾವು ಒಕ್ಕೂಟ ಅಧಿಕಾರಗಳ ಸಮಿತಿ ಹೊಂದಿದ್ದೀರಿ ಮತ್ತು ಬಳಿಕ ಒಕ್ಕೂಟ ಸಂವಿಧಾನ ಸಮಿತಿ ಹೊಂದಿದೆವು. ಈ ಎರಡೂ ಸಮಿತಿಗಳು ವಿಷಯದ ಒಳಹೊಕ್ಕು ಇಡೀ ವಿಷಯವನ್ನು ಸೂಕ್ಷ್ಮವಾಗಿ ಪರಿಶೀಲಿಸಿ ತಮ್ಮ ಶಿಫಾರಸುಗಳನ್ನು ರೂಪಿಸಿದವು. ಅವುಗಳನ್ನು ಸದನ ಪರೀಕ್ಷಿಸಿದೆ. ಆದರೆ ನಾನು ಸದನಕ್ಕೆ ಒಂದು ವಿಷಯವನ್ನು ಹೇಳುತ್ತೇನೆ. ನಿಸ್ಸಂಶಯವಾಗಿ ಬಹಳಷ್ಟು ಸಂಖ್ಯೆಯ ತಿದ್ದುಪಡಿಗಳು ಮಂಡನೆಯಾದವು. ಆದರೆ ಹಾಗೆ ಮಂಡನೆಯಾದ ತಿದ್ದುಪಡಿಗಳು ಇತರ ತಿದ್ದುಪಡಿಗಳಿಂದ ಹೆಚ್ಚಾಗಿ ಸ್ಫೂರ್ತಿ ಪಡೆದಿದ್ದವು ಮತ್ತು ಪ್ರಸ್ತಾವಿಸಲಾದ ಸಮಿತಿಯಲ್ಲಿದ್ದ ತಜ್ಞರ ಅಭಿಪ್ರಾಯಗಳೇ ಅಂತಿಮವಾಗಿ ಯಶಸ್ವಿಯಾದವು. ಎರಡು ಬಾರಿ ನಡೆಸಿದ ಪರಿಶೀಲನೆಯ ಅನಂತರ ತಜ್ಞರಿಂದ ಮೂರನೆಯ ಪರಿಶೀಲನೆ ಇದೆ ಎಂಬ ಭರವಸೆ ನಮಗಿದೆ. ಈಗ ಸದನದ ಹಕ್ಕುಗಳ ದುರಾಕ್ರಮಣದ ಪ್ರಶ್ನೆಯೂ ಇರುವುದಿಲ್ಲ. ಸದನವು ಒಂದು ಸ್ವತಂತ್ರ ಸಂಸ್ಥೆಯಾಗಿರುವುದರಿಂದ ಅದು ಮೊದಲ ಸಂದರ್ಭದಲ್ಲಿ ತಾನು ಒಪ್ಪಿದುದನ್ನು ಬದಲಾಯಿಸುವ ಹಕ್ಕುಳ್ಳದ್ದಾಗಿದೆ. ಯಾವೆಲ್ಲ ಸದನದಿಂದ ಅಂಗೀಕಾರವಾಗಿವೆಯೋ ಅವು ಮಾತ್ರ ಪವಿತ್ರವಾಗಿದ್ದು ಮತ್ತು ಅವು ಸದನದ ಸಮ್ಮತಿಯನ್ನು ಪಡೆದ ಅನಂತರ ತಾವು ಇಂತಹ ಒಂದು ಸ್ವತಂತ್ರ ಸಭೆಯ ಅಂಗವಾಗಿದ್ದಿರೆಂದು ನಿಮ್ಮನ್ನು ನೀವೇ ಗೌರವಭಾವದಿಂದ ನೋಡಿಕೊಂಡು, ಈ ಸಭೆಯು ಒಪ್ಪಿದುದನ್ನು ಬದಲಾಯಿಸುವ ಪ್ರಯತ್ನಗಳಿಗೆ ನೀವೇ ಸ್ವತಃ ನಿರ್ಬಂಧವನ್ನು ಹೇರಿಕೊಳ್ಳಬೇಕು ಮತ್ತು ತಮ್ಮ ನಿರ್ಧಾರದ ಮೇಲೆ ಮರಳಿ ಹಿಂದಕ್ಕೆ ಹೋಗಬೇಡಿರಿ. ಆದುದರಿಂದ ಸದನದಿಂದ ಅಂಗೀಕಾರವಾಗದಿರುವ ಯಾವುದೇ ಅಂಶ ತಂದಲ್ಲಿ ಅದನ್ನು ಪರೀಕ್ಷಿಸಲು ಮತ್ತು ಪುನಃ ಪರಿಗಣಿಸಲು ಹಾಗೂ ಬದಲಾಯಿಸಲು ಸದನವು ಮುಕ್ತವಿರುತ್ತದೆ. ತತ್ತ್ವಶಃ ಸಮ್ಮತಿಸದಿರುವ ಯಾವುದೇ ಪ್ರಸ್ತಾವಗಳನ್ನು ತಿದ್ದುಪಡಿ ಮಾಡುವ ಸದನದ ಹಕ್ಕನ್ನು ಯಾರೂ ನಿರಾಕರಿಸುವ ಹಾಗಿಲ್ಲ. ಆದರೆ ಇದನ್ನೆ ಸದಸ್ಯರು ಅರಿತುಕೊಳ್ಳಬೇಕು ಎಂದು ನಾನು ಬಯಸುತ್ತೇನೆ. ನಾವು ಒಗಟುಗಳಲ್ಲಿ ಮಾತನಾಡುತ್ತಿದ್ದೇವೆ. ನಾವು ವಾಸ್ತವವಾಗಿ ವಿಭಿನ್ನ ಪಕ್ಷಗಳಿಗೆ ಸೇರಿದವರು ಮತ್ತು ಬೇರೆ ಬೇರೆಯ ನಿರ್ಧಾರಗಳನ್ನು ಅಲ್ಲಿ ತೆಗೆದುಕೊಳ್ಳುತ್ತೇವೆ. ಆಗ ಜನರು ಏನು ಬೇಕಾದರೂ ಹೇಳಬಹುದು ಏನೂ ಬೇಸರವಿಲ್ಲ. ಆದರೆ ತಿದ್ದುಪಡಿಯನ್ನು ಒಪ್ಪಬೇಕಾದರೆ

ಬಹುಮತದ ಪ್ರಶ್ನೆಬರುತ್ತದೆ ಮತ್ತು ಯಾರೆಲ್ಲ ಅದಕ್ಕೆ ವಿರೋಧವಿದ್ದರೂ ಅದಕ್ಕೆ ಮತ ಹಾಕುವರು. ಅದು ನಿಜವಾದ ಸನ್ನಿವೇಶ. ಆದುದರಿಂದ ಸಮಿತಿಯನ್ನು ರೂಪಿಸದಿದ್ದರೆ ಸಲಹೆಗಳು ನಿರ್ವಹಿಸಲ್ಪಡುವ ಉತ್ತಮ ಅವಕಾಶವನ್ನು ಹೊಂದಿರುತ್ತವೆ ಎಂದು ಹೇಳುವುದು ನಿರರ್ಥಕ. ಸಮಿತಿಯನ್ನು ರೂಪಿಸಲಿ, ಇಲ್ಲದಿರಲಿ ಪಕ್ಷದ ವ್ಯವಸ್ಥೆ ನಡೆಯುತ್ತಿರುತ್ತವೆ ಮತ್ತು ಹಾಗಾಗಿ ಪಕ್ಷದ ವ್ಯವಸ್ಥೆಯ ಸಮ್ಮತಿ ಹೊಂದಬಹುದಾದ ತಿದ್ದುಪಡಿಗಳು ಮಾತ್ರ ಅಂಗೀಕೃತವಾಗಬಹುದು. ಆದುದರಿಂದ ಕ್ರಮವಿಧಾನಕ್ಕೆ ಆಕ್ಷೇಪಗಳನ್ನು ಮಾಡುವುದು ನಿರರ್ಥಕ ಎಂದು ನಾನು ಸಲಹೆ ಮಾಡುತ್ತೇನೆ. ಕ್ರಮವಿಧಾನ ಸರಿಯೇ ಇದೆ. ಕಚೇರಿಯು ಸಲ್ಲಿಸಿದ ಕರಡು ಪರೀಕ್ಷಿಸಲು ಲಭ್ಯವಿರುವ ಉತ್ತಮ ಜನರನ್ನೇ ನೀವು ನೇಮಕ ಮಾಡಿದ್ದೀರಿ ಮತ್ತು ಸದನದಿಂದ ನಿರ್ದಿಷ್ಟವಾಗಿ ಸಮ್ಮತಿ ಪಡೆದ ಈ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸುವುದು ಕಷ್ಟವೇನಿಲ್ಲ. ಆದುದರಿಂದ ಸ್ವಾಮಿ ಸದನವು ಈ ಪ್ರಸ್ತಾವವನ್ನು ಸರ್ವಾನುಮತದಿಂದ ಅಂಗೀಕರಿಸುತ್ತದೆ ಎಂದು ನಾನು ಭಾವಿಸುತ್ತೇನೆ.

**ಶ್ರೀ ಶಂಕರ್ ದತ್ತಾತ್ರಯದೇವ** (ಬಾಂಬೆ : ಸಾಮಾನ್ಯ) : ಮಾನ್ಯರೆ ನಾನು ಮುಕ್ತಾಯ ಮಂಡಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಮುಕ್ತಾಯ ಮಂಡಿಸಲಾಗಿದೆ. ನಾನು ಸದನದ ಮುಂದೆ ಇಡುತ್ತಿದ್ದೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಗಿದೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಸತ್ಯನಾರಾಯಣ ಸಿನ್ಹ ಅವರು ಉತ್ತರಿಸಬಹುದು.

**ಶ್ರೀ ರಾಮನಾಥ್ ಗೋಯೆಂಕಾ** (ಮದ್ರಾಸ್ : ಸಾಮಾನ್ಯ) : ಕೆಲವು ತಿದ್ದುಪಡಿಗಳನ್ನು ಮಂಡಿಸಲಾಗಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನಾನು ತಿದ್ದುಪಡಿಗಳನ್ನು ಮುಂದೆ ತೆಗೆದುಕೊಳ್ಳುತ್ತೇನೆ. ಪ್ರಸ್ತುತ ನಾನು ನಿರ್ಣಯದ ಪಠ್ಯಕ್ಕೆ ಸಂಬಂಧಿಸಿದ ತಿದ್ದುಪಡಿಯನ್ನು ಎತ್ತಿಕೊಳ್ಳುತ್ತೇನೆ.

**ಶ್ರೀ ಸತ್ಯನಾರಾಯಣ್ ಸಿನ್ಹ :** ಮಾನ್ಯರೆ, ನಾನು ಇಲ್ಲಿನ ಅನೇಕ ಗೆಳೆಯರು ವ್ಯಕ್ತಪಡಿಸಿದ ಶಂಕೆ ಮತ್ತು ಅನುಮಾನಗಳನ್ನು ಮೆಚ್ಚುವಷ್ಟು ಸಮರ್ಥನಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಕರಡು ರಚನಾ ಸಮಿತಿಯ ವರದಿಯು ಸದನದ ಮುಂದೆ ಇದೆ ಎಂದು ತಿಳಿದಿದ್ದೇನೆ ಮತ್ತು ಸದನವು ತಾನು ಬಯಸುವ ಯಾವುದನ್ನೇ ಬದಲಾಯಿಸಲು ಮಾರ್ಪಡಿಸಲು ಮತ್ತು ವ್ಯತ್ಯಾಸ ಮಾಡಲು ಸಹಜವಾದ ಹಕ್ಕು ಹೊಂದಿದೆ. ಸಂವಿಧಾನ ರಚನಾ ಸಭೆಯು ತಾನೇ ತೆಗೆದುಕೊಂಡ ನಿರ್ಧಾರಗಳನ್ನು ಕೂಡಾ ಬದಲಾಯಿಸುವ ಹಕ್ಕನ್ನು ಹೊಂದಿದೆ ಎಂದು ತಿಳಿದಿದ್ದೇನೆ. ಆದರೆ ಅದು ಒಮ್ಮೆ ತೆಗೆದುಕೊಂಡ ನಿರ್ಧಾರವನ್ನು ಬದಲಾಯಿಸುತ್ತ ಹೋಗುವುದು ಉತ್ತಮವಲ್ಲ. ಹಾಗಾಗಿ ನಾನು ಸದನವು ಚರ್ಚಿಸಲಾದ ಮತ್ತು ನಿರ್ಧಾರಗಳು ತಲಪಿಯಾದ ಮುಖ್ಯ ನೀತಿಗಳ ಮೇಲಿನ ನಿರ್ಧಾರಗಳನ್ನು ಒದಲಾಯಿಸಲು ಒಪ್ಪುವುದಿಲ್ಲ ಎಂದು ತಿಳಿದಿದ್ದೇನೆ. ಆದರೆ ಈ ನಮ್ಮ ಅಭಿಪ್ರಾಯಗಳನ್ನು ಇನ್ನೂ ತಿಳಿಸಿರದ ನೀತಿಗಳಿಗೆ ಸಂಬಂಧಿಸಿದಂತೆ ಅವನ್ನು ಕರಡು ರಚಿಸುವಲ್ಲಿ ಸೇರಿಸಬಹುದಿದ್ದು ಇಡಿಯಾದ ಮಸೂದೆಯು ಈ ಸದನದ ಮುಂದೆ ಬಂದಾಗ ಅದನ್ನೂ ಬದಲಾಯಿಸಲು ಮತ್ತು ವ್ಯತ್ಯಾಸ ಮಾಡಲು ಎಲ್ಲ ಹಕ್ಕಗಳನ್ನೂ ಸದನವು ಹೊಂದಿದೆ ಎಂದು ತಿಳಿದಿದ್ದೇನೆ. ಯಾವುದೇ ಅನಗತ್ಯ ಗಡಿಬಿಡಿಗೆ ಇಲ್ಲಿ ಕಾರಣವಿಲ್ಲ. ಸಮಿತಿಯ ವರದಿಯು ಈ ಸದನದ ಮುಂದೆ ಇರುತ್ತದೆ. ಮತ್ತು ಅದು ಬಯಸಿದ ಯಾವುದನ್ನೇ ಮಾರ್ಪಡಿಸುವ ಅಥವಾ ಬದಲಾಯಿಸುವ ಪ್ರತಿಯೊಂದು ಅವಕಾಶವನ್ನೂ ಹೊಂದಿರುತ್ತದೆ.

**ಮಾನ್ಯ ಸಭಾಧ್ಯಕ್ಷರು :** ನಾನು ನಿರ್ಣಯವನ್ನು ಮತಕ್ಕೆ ಹಾಕುವ ಮುನ್ನ ಪರಿಸ್ಥಿತಿಯನ್ನು ಸ್ಪಷ್ಟಪಡಿಸುವುದು ಆವಶ್ಯಕ ಎಂದು ನಾನು ತಿಳಿದಿದ್ದೇನೆ. ಈ ಸದನದ ಸದಸ್ಯರ ಅಧಿಕಾರಗಳನ್ನು ಕಿತ್ತುಕೊಳ್ಳುವ ಯಾವ ಉದ್ದೇಶವೂ ನನಗೆ ಇಲ್ಲ. ಮತ್ತು ಅಂತಹ ಯಾವುದೇ ಉದ್ದೇಶವಿದ್ದರೂ ಅದು ಯಾವ ಪರಿಣಾಮವೂ ಉಳ್ಳದ್ದಾಗಿರುವುದಿಲ್ಲ ಎಂದು ನನಗೆನಿಸುತ್ತದೆ. ಇಲ್ಲಿನ ಭಾವನೆ ಎಂದರೆ ಸದನದ ಮುಂದಿನ ಅಧಿವೇಶನದಲ್ಲಿ ಅದರ ಮುಂದೆ ಹೆಚ್ಚು ಕಡಿಮೆ ಪೂರ್ಣಗೊಂಡ ರೂಪದಲ್ಲಿ ಮಸೂದೆಯನ್ನು ಇರಿಸುವುದಾಗಿದ್ದು ಸದಸ್ಯರು

ಕರಡಿಗೆ ತಮ್ಮ ಗಮನವನ್ನು ಪೂರ್ಣವಾಗಿ ಕೊಡುವ ಸ್ಥಿತಿಯಲ್ಲಿರಬಹುದಾಗಿದ್ದು ಬಳಿಕ ಕರಡಿನ ಒಂದೊಂದು ಪ್ರಕರಣವನ್ನೂ ಕೂಲಂಕಷವಾಗಿ ಅಭ್ಯಾಸಮಾಡಿ ಚರ್ಚಿಸಿ ಅಂತಿಮವಾಗಿ ಅವುಗಳನ್ನು ನಾವೀಗಾಗಲೇ ಬಹುಮುಖ್ಯ ಅಂಶಗಳನ್ನೊಳಗೊಂಡ ಸಿದ್ಧಾಂತಗಳನ್ನು ಚರ್ಚಿಸಿ ಅಳವಡಿಸಿದ್ದೇವೆ ಮತ್ತು ಇನ್ನೂ ನಿರ್ಧಾರ ತೆಗೆದುಕೊಳ್ಳಬೇಕಾಗಿರುವ ವಿಷಯಗಳೂ ಕೆಲವು ಇವೆ. ಉದ್ದೇಶವೆಂದರೆ ಸಮಿತಿಯು ಸ್ವೀಕೃತವಾಗಿರುವುಗಳಷ್ಟೇ ಅಲ್ಲದೆ ಇನ್ನೂ ಪರಿಗಣಿಸದೆ ಇರುವ ಅಂಶಗಳನ್ನು ಕೂಡ ಸಿದ್ಧಪಡಿಸಿ ಇಟ್ಟುಕೊಂಡಿರಬೇಕು ಎಂದು ಸಲಹೆ ಮಾಡಲಾಗಿದೆ. ಹಾಗಾಗಿ ಎರಡೂ ಬಗೆಯ ವಿಷಯಗಳೂ ಸದನದ ಮುಂದೆ ಇರುತ್ತದೆ. ಆದರೆ ಒಂದು ವಿಭಿನ್ನ ನೆಲೆಯ ಮೇಲಷ್ಟೆ. ಈಗಾಗಲೇ ಸ್ವೀಕೃತವಾಗಿರುವ ಭಾಗಗಳನ್ನು ಸದನವು ಒಂದು ದೃಷ್ಟಿಕೋನದಿಂದ ಪರಿಗಣಿಸುತ್ತದೆ. ಆಗ ಸದನವು ಸಾಧಾರಣವಾಗಿ ಅದರ ಹಿಂದಿನ ನಿರ್ಧಾರಗಳನ್ನೇ ಅನುಸರಿಸುತ್ತದೆ ಮತ್ತು ಒಂದು ಪರಿಷ್ಕರಣೆಯ ಅಗತ್ಯವನ್ನು ಕಾಣುವವರೆಗೆ ಅವುಗಳನ್ನು ಬದಲಾಯಿಸುವುದಿಲ್ಲ. ಆದರೆ ನಾವು ಇನ್ನೂ ಚರ್ಚಿಸದಿರುವ ಅಂಶಗಳಿಗೆ ಸಂಬಂಧಿಸಿದಂತೆ ಸದನವು ಹೆಚ್ಚಿನ ಸ್ವಾತಂತ್ರ್ಯದೊಂದಿಗೆ ಕರಡನ್ನು ಸಹಜವಾಗಿಯೇ ಪರಿಶೀಲಿಸುತ್ತದೆ ಮತ್ತು ಸಮಯ ಉಳಿಸಲು ಇದು ಒಂದು ಉತ್ತಮ ಪಥ ಎಂದು ನಾನು ತಿಳಿದಿದ್ದೇನೆ. ಹಾಗಾಗಿ ಸದನವು ಇಡೀ ವಿಷಯವನ್ನು ಪರಿಗಣಿಸಬಹುದು ಮತ್ತು ಸಂವಿಧಾನದ ರಚನೆಯು ಹೊರಬಂದಂತೆ ಒಂದು ವ್ಯಾಪಕವಾದ ಅಭಿಪ್ರಾಯ ರೂಪಿಸಲು ಒಂದು ಅವಕಾಶವನ್ನೂ ಹೊಂದಬಹುದು. ಸಂವಿಧಾನ ಮುಗಿಯಬೇಕು ಎಂದು ನಾನು ಕಾತರನಾಗಿದ್ದೇನೆ ಎಂದು ನಾನು ಹೇಳುತ್ತೇನೆ; ಆದರೆ ಅದೇ ಸಮಯಕ್ಕೆ ನಾನು ನಾವು ಯಾವುದನ್ನೂ ಆತುರದಲ್ಲಿ ಮಾಡಬಾರದು ಎಂಬ ವಿಷಯದಲ್ಲಿಯೂ ಅಷ್ಟೇ ಕಾತರನಾಗಿದ್ದೇನೆ. ಅಂತಿಮವಾಗಿ ಅಳವಡಿಸುವ ಮುನ್ನ ಪ್ರತಿಖಂಡವೂ, ಒಂದು ಖಂಡದ ಪ್ರತಿವಾಕ್ಯ ಮತ್ತು ವಾಕ್ಯ ಪ್ರತಿ ಶಬ್ದವನ್ನೂ ತೂಗಿ ನೋಡಲಾಗುತ್ತದೆ ಹಾಗೂ ಎಲ್ಲ ಸದಸ್ಯರಿಂದಲೂ ಜಾಗರೂಕತೆಯಿಂದ ನೋಡಲ್ಪಡುತ್ತದೆ (ಕೇಳಿ, ಕೇಳಿ). ಆದುದರಿಂದ ಕರಡು ಅದರ ಅಂತಿಮರೂಪಕ್ಕೆ ಮೊದಲು ಪರಿಗಣನೆಗೆಂದು ಬಂದಾಗ ನಾವು ಅದನ್ನು ಸಂಪೂರ್ಣವಾಗಿ ಪರಿಗಣಿಸಲು ಎಷ್ಟು ಆವಶ್ಯಕವೆಂದು ತಿಳಿಯುತ್ತೇವೆಯೋ ಅಷ್ಟೂ ಸಮಯ ತೆಗೆದುಕೊಳ್ಳಬೇಕು. ಹಾಗೂ ಸದಸ್ಯರು ಅಲ್ಲಿ ಬಳಕೆಯಾದ ಒಂದೊಂದು ಶಬ್ದವನ್ನೂ ಪರಿಗಣಿಸಲು ಮತ್ತು ಕರಡನ್ನು ಕುರಿತು ತಮ್ಮ ಸ್ವಂತ ನಿರ್ಧಾರ ಕೊಡಲು ಅವಕಾಶ ಹೊಂದಿರುತ್ತಾರೆ. ನಾವೀಗಾಗಲೇ ನಿರ್ಧರಿಸಿದ ಆದರೆ ಅವುಗಳಲ್ಲಿ ಸೂಚಿತವಿರುವ ಸಿದ್ಧಾಂತಗಳಡಿ ಖಚಿತವಾಗಿ ಬರದ ವಿಷಯಗಳಿಗೆ ಸಂಬಂಧಿಸಿದಂತೆ ಕರಡು ಸಿದ್ಧಪಡಿಸಲು ಸಮಿತಿಗೆ ಯಾವುದೋ ಮುಕ್ತ ಅವಕಾಶವನ್ನು ಕೊಡುವ ತಿದ್ದುಪಡಿಯಾದ ರೂಪದಲ್ಲಿರುವ ಈ ನಿರ್ಣಯವನ್ನು ಸದಸ್ಯರು ಸ್ವೀಕರಿಸಲು ಹರ್ಷಿಸುತ್ತಾರೆ ಎಂದು ಇದರೊಂದಿಗೆ ನಾನು ತಿಳಿಯುತ್ತೇನೆ. ನಾನು ಈಗ ಶ್ರೀ ಖೇರ್‌ರವರ ತಿದ್ದುಪಡಿಯನ್ನು ಸದನದಲ್ಲಿ ಮತಕ್ಕೆ ಹಾಕುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಮಸೂದೆಯು ಹಿಂದಿ ಅಥವಾ ರಾಷ್ಟ್ರೀಯ ಭಾಷೆಯಲ್ಲಿರುತ್ತದೆ ಎಂಬ ನಿಮ್ಮ ಘೋಷಣೆ ಕುರಿತು ತಾವು ಏನು ಹೇಳುವಿರಿ?

**ಮಾನ್ಯ ಸಭಾಧ್ಯಕ್ಷರು :** ನಾವು ಹಿಂದಿಯಲ್ಲಿ ಅದನ್ನು ಹೊಂದೋಣ. ಸಮಯ ಬಂದಾಗ ನಾನು ಅದನ್ನು ನಿಮ್ಮ ಮುಂದೆ ಇಡುತ್ತೇನೆ.

**ಇನ್ನೊರ್ವ ಗೌರವಾನ್ವಿತ ಸದಸ್ಯರು :** ಮಸೂದೆ ಓದಲು ತಾವು ನಮಗೆಷ್ಟು ವಾರಗಳು ಕೊಡುವಿರಿ?

**ಮಾನ್ಯ ಸಭಾಧ್ಯಕ್ಷರು :** ವಾಸ್ತವ ದೃಷ್ಟಿಯೆಂದರೆ, ಎರಡರಿಂದ ಮೂರುವಾರಗಳಷ್ಟು ಸಮಯವನ್ನು ನೀಡಲಾಗುವುದು. ನಾನೀಗ ಶ್ರೀ ಬಿ.ಜಿ. ಖೇರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ:

ಮುಂದಿಟ್ಟಿರುವ ವಿಷಯ:

"'ಸಂವಿಧಾನ ರಚನಾ ಮಂಡಲಿಯಲ್ಲಿ ತೆಗೆದುಕೊಂಡ ನಿರ್ಧಾರದ ಮೇರೆಗೆ ಸಭೆಯ ಕಚೇರಿಯಲ್ಲಿ ಸಿದ್ಧಪಡಿಸಿದ

ಭಾರತದ ಸಂವಿಧಾನ ಕರಡಿಗೆ ಪರಿಶೀಲಿಸಲು ಮತ್ತು ಆವಶ್ಯಕ ತಿದ್ದುಪಡಿಗಳನ್ನು ಸಲಹೆ ಮಾಡಲು' ಎಂಬ ಶಬ್ದಗಳಿಗೆ ಕೆಳಗಿನದನ್ನು ಬದಲಿಯಾಗಿ ಆದೇಶಿಸಬೇಕು.:

'ಸದನದಲ್ಲಿ ತೆಗೆದುಕೊಳ್ಳಲಾದ ನಿರ್ಣಯಗಳನ್ನು ಅಳವಡಿಸಿ, ಅವುಗಳಿಗೆ ಆನುಷಂಗಿಕವಾದ ವಿಷಯಗಳನ್ನು ಸೇರಿಸಿ, ಸಂವಿಧಾನದ ಸಲಹೆಗಾರರು ಸಿದ್ಧಪಡಿಸಿರುವ ಹಾಗೂ ತದನಂತರ ಸಮಿತಿಯು ಪರಿಷ್ಕರಿಸಿರುವ ಭಾರತದ ಸಂವಿಧಾನದ ಪಠ್ಯದ ಕರಡನ್ನು ಪರಿಶೀಲಿಸಲು ಸದನದ ಮುಂದೆ ಮುಂಡಿಸಲು"

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾನೀಗ ತಿದ್ದುಪಡಿಯಾದ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಸಮಿತಿಯನ್ನು ರಚಿಸಲು ಬೇಕಾದ ಸದಸ್ಯರ ಹೆಸರುಗಳನ್ನು ಕುರಿತಂತೆ ನಾನು ಹಲವು ತಿದ್ದುಪಡಿಗಳಿರುವುದನ್ನು ಕಾಣುತ್ತಿದ್ದೇನೆ.

**ಗೌರವಾನ್ವಿತ ಸದಸ್ಯರು** : ನಾವು ತಿದ್ದುಪಡಿಗಳನ್ನು ಮಂಡಿಸುತ್ತಿಲ್ಲ.

**ಡಾ. ಪಿ.ಎಸ್. ದೇಶ್‌ಮುಖ್** : ತಿದ್ದುಪಡಿಗಳ ಸೂಚನೆ ಕೊಟ್ಟಿರುವ ಎಲ್ಲ ಮಿತ್ರರಲ್ಲಿ ವಿಜ್ಞಾಪನೆ. ಈಗಾಗಲೇ ಸಲಹೆ ಮಾಡಿದ ಹೆಸರುಗಳ ಪಟ್ಟಿಗೆ ನನ್ನ ಹೆಸರು ಸೇರಿಸಿದ ಎಲ್ಲರನ್ನೂ ತಮ್ಮ ತಿದ್ದುಪಡಿಗಳನ್ನು ದಯಮಾಡಿ ಮಂಡಿಸಬಾರದೆಂದು ಕೇಳಿಕೊಳ್ಳುತ್ತೇನೆ. ಕರಡು ರಚಿಸುವ ಸಮಿತಿಗೆ ನನ್ನ ಹೆಸರನ್ನು ಒಬ್ಬ ಸದಸ್ಯನಾಗಿರಲು ಪ್ರಸ್ತಾವಿಸಿದ ಅವರ ಕೃಪೆಗಾಗಿ ನಾನು ಅವರಿಗೆ ವಂದನೆ ಸಲ್ಲಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಅಂದರೆ ಈಗ ನಾವು ಪಟ್ಟಿಗೆ ಹೊಸ ಹೆಸರುಗಳನ್ನು ಸೇರಿಸಲು ತಿದ್ದುಪಡಿಗಳನ್ನು ಚದುರಿದ್ದೇವೆ.

ಬೇಗಮ್ ಐಜಾಜ್ ರಸೂಲ್ ಮಾಡಿರುವ ಒಂದು ಸಲಹೆ ಇದೆ. ಅದೇಂದರೆ ಸಮಿತಿಯಲ್ಲಿ ಸದಸ್ಯರಾಗಲು ಯಾರಿಗಾದರೂ ಸಾಧ್ಯವಿಲ್ಲದಿದ್ದ ಸಂದರ್ಭದಲ್ಲಿ ಅಥವಾ ಯಾವುದೇ ಸ್ಥಾನ ಖಾಲಿಯಾದರೆ ಅದನ್ನು ತುಂಬಲು ನನಗೆ ಅಧಿಕಾರ ಕೊಡಬೇಕೆಂಬುದಾಗಿ ಅದರಲ್ಲಿ ಹೇಳಲಾಗಿದೆ. ಶ್ರೀ ಸಾದುಲ್ಲಾ ಎಂಬುವರು ದುರದೃಷ್ಟವಶಾತ್ ಸಮರ್ಥರಿಲ್ಲದಿರುವುದರಿಂದ ಹಾಗೂ ಸಮಿತಿಗೆ ಸೇವೆ ಸಲ್ಲಿಸಲು ಅವರಿಂದ ಸಾಧ್ಯವಿಲ್ಲದಿರುವುದರಿಂದ ಈ ಸಲಹೆಯನ್ನು ಮಾಡಲಾಗಿದೆ ಎಂದು ಭಾವಿಸುತ್ತೇನೆ. ಸದನವು ವಾಸ್ತವದಲ್ಲಿ ಅಂತಹ ಸಂದರ್ಭ ಉಂಟಾದಲ್ಲಿ ಖಾಲಿ ಜಾಗ ತುಂಬಲು ನನಗೆ ಅಧಿಕಾರವನ್ನು ಕೊಡುತ್ತದೆ ಎಂದುಕೊಂಡಿದ್ದೇನೆ (ಸದಸ್ಯರು: ಹೌದು)

ಮುಂದಿಟ್ಟಿರುವ ವಿಷಯ:

"ಶ್ರೀ ಸತ್ಯನಾರಾಯಣ್ ಸಿನ್ಹ ಮಂಡಿಸಿದ ನಿರ್ಣಯದಲ್ಲಿ ಸಲಹೆ ಮಾಡಿರುವ ಹೆಸರುಗಳ ಮೂಲಪಟ್ಟಿಯನ್ನು ಅಂಗೀಕರಿಸತಕ್ಕದ್ದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಸಂವಿಧಾನ ರಚನಾಸಭೆಯ ಕಾರ್ಯಸಮಿತಿಯ ವರದಿ

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** (ಬಾಂಬೆ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ೧೯೪೭ರ ಆಗಸ್ಟ್ ೨೦ರಂದು ಸಂವಿಧಾನ ರಚನಾ ಸಭೆಯ ನಿರ್ಧಾರಗಳ ಪ್ರಕಾರ ಸಭಾಧ್ಯಕ್ಷರು ನೇಮಿಸಿದ ಸಮಿತಿಯಿಂದ ಸಲ್ಲಿಸಲಾದ ೧೯೪೭ರ ಭಾರತೀಯ ಸ್ವಾತಂತ್ರ್ಯ ಅಧಿನಿಯಮದಡಿ ಸಂವಿಧಾನ ರಚನಾಸಭೆಯ ಕಾರ್ಯಗಳ ಮೇಲಿನ ವರದಿಯನ್ನು ಸಭೆಯು ಪರಿಗಣಿಸಬೇಕೆಂಬ ಈ ಗೊತ್ತುವಳಿಯನ್ನು ನಾನು ಮಂಡಿಸುತ್ತಿದ್ದೇನೆ.

ಮಾನ್ಯರೆ, ಸಮಿತಿಯ ವರದಿಯನ್ನು ಈಗಾಗಲೇ ಸದನದ ಎಲ್ಲ ಸದಸ್ಯರಿಗೆ ಕಳುಹಿಸಲಾಗಿದೆ ಮತ್ತು ಈ ಹಂತದಲ್ಲಿ, ಅಂದರೆ ವರದಿಯು ಸದಸ್ಯರ ಕೈಲಿ ಕಳೆದ ಎರಡು ದಿನಗಳಿಂದಲೂ ಇರುವುದರಿಂದ, ಈ ಸಮಿತಿಯ ಕೆಲಸ ಕುರಿತಂತೆ ಸುದೀರ್ಘವಾಗಿ ವ್ಯಾಖ್ಯಾನ ಮಾಡಬೇಕು ಎಂದು ನನಗೆನಿಸುತ್ತಿಲ್ಲ. ನಾನು ಮೊದಲಿಗೆ ಸಮಿತಿಯ ಶಿಫಾರಸುಗಳ ಕಡೆ ಗಮನ ಸೆಳೆದಲ್ಲಿ ಸಾಕು ಎನಿಸುತ್ತದೆ.

ಒಟ್ಟಾರೆ ಸಮಿತಿಯು ಐದು ಶಿಫಾರಸುಗಳನ್ನು ಮಾಡಿದೆ. ಅದರ ಮೊದಲ ಶಿಫಾರಸು ಶಾಸನಸಭೆಯಾಗಿ ಕೆಲಸ ಮಾಡಲು ಸಂವಿಧಾನ ರಚನಾಸಭೆ ಮುಕ್ತ ಮತ್ತು ಹಾಗೆಯೇ ಅದು ಕೆಲಸ ಮಾಡಬೇಕು; (೨) ಶಾಸನ ಸಭೆಯಾಗಿ ಕೆಲಸ ಮಾಡುವಾಗ ಅದು ಸಾಧ್ಯವಾದಷ್ಟು ಆವಶ್ಯಕ ತಿದ್ದುಪಡಿಗಳೊಂದಿಗೆ ಶಾಸನ ಸಭೆಯ ನಿಯಮಗಳನ್ನು ಅಳವಡಿಸಿಕೊಳ್ಳಬೇಕು; (೩) ಆವಶ್ಯಕ ತಿದ್ದುಪಡಿಗಳನ್ನು ಸಂವಿಧಾನ ರಚನಾ ಸಭೆಯ ಅಧ್ಯಕ್ಷರ ಆದೇಶಗಳ ಅಡಿ ಮಾಡಬೇಕು; (೪) ಸಂವಿಧಾನ ರಚನಾಸಭೆಯು ಸಂವಿಧಾನ ರಚಿಸುವ ಅಂಗವಾಗಿ ಮಾಡುವ ಕೆಲಸವನ್ನು ಮತ್ತು ಒಂದು ಸಾಧಾರಣ ಶಾಸನ್ನ ಸಭೆಯಾಗಿ ಮಾಡುವ ಕೆಲಸವನ್ನು ಪ್ರತ್ಯೇಕವಾಗಿ ಮಾಡಬೇಕು ಮತ್ತು ಬೇರೆ ಬೇರೆ ದಿನಗಳಲ್ಲಿ ನಡೆಯುವಂತೆ ಪ್ರತ್ಯೇಕ ಅಧಿವೇಶನಗಳನ್ನು ನಡೆಸಬೇಕು; (೫) ಅಧಿವೇಶನ ಮುಂದೂಡಿಕೆ ಮತ್ತು ಮುಕ್ತಾಯ ಮಾಡುವ ಅಧಿಕಾರ ಸಭಾಧ್ಯಕ್ಷರಲ್ಲಿರಬೇಕೇ ಹೊರತು ಭಾರತ ಸರಕಾರದ ಅಧಿನಿಯಮದ ಅಳವಡಿಕೆಯಲ್ಲಿ ಕಂಡು ಬರುವಂತೆ ಗವರ್ನರ್ ಜನರಲ್‌ರಲ್ಲಿ ಅಲ್ಲ. ಈ ಶಿಫಾರಸುಗಳನ್ನು ಮಾಡಿದ ಮೇಲೆ ಸಮಿತಿಯು ಅವರ ಶಿಫಾರಸುಗಳನ್ನು ಜಾರಿಗೆ ತರುವಲ್ಲಿ ಎದುರಾಗಬಹುದಾದ ಯಾವುದಾದರೂ ಏನಾದರೂ ತೊಡಕುಗಳಿವೆಯೆ ಎಂಬದನ್ನು ಗಮನಿಸಿತು ಮತ್ತು ತಮ್ಮ ಶಿಫಾರಸುಗಳನ್ನು ಜಾರಿಗೆ ತರಲು ಮೂರು ತೊಡಕುಗಳನ್ನು ಕಂಡುಕೊಂಡು ಅವುಗಳನ್ನು ಅವರು ಬಗೆಹರಿಸಬೇಕಾಯಿತು.

ಮೊದಲನೆಯ ಸಂವಿಧಾನ ರಚನಾಸಭೆ ಮತ್ತು ಶಾಸನಸಭೆ ಈ ಎರಡೂ ಅಂಗಗಳ ಮೇಲೆ ಒಬ್ಬರೇ ವ್ಯಕ್ತಿ ಅಧ್ಯಕ್ಷತೆ ವಹಿಸಬೇಕೆ ಎಂಬ ಪ್ರಶ್ನೆ. ಈ ತೊಡಕು ಉದ್ಭವಿಸಿರುವುದಕ್ಕೆ ಭಾರತ ಸರಕಾರದ ಅಧಿನಿಯಮದ ೨೨ನೆಯ ಪ್ರಕರಣವು ಕಾರಣವಾಗಿತ್ತು. ಅದು ಸ್ಪೀಕರ್ ಕಚೇರಿಗೆ ಸಂಬಂಧಿಸಿದ ಅ ಪ್ರಕರಣವನ್ನು ಭಾರತದ ಸ್ವಾತಂತ್ರ್ಯದ ಅಧಿನಿಯಮದಲ್ಲಿ ಮಾಡಿಕೊಂಡ ಬದಲಾವಣೆಗಳಲ್ಲಿ ಕೈಬಿಡಲಾಗಿದ್ದು, ಸಭಾಧ್ಯಕ್ಷರೇ ಸಂವಿಧಾನ ರಚನಾಸಭೆ ಹಾಗೂ ಶಾಸನಸಭೆಗಳೆರಡರ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳಬೇಕೆಂದು ಅದರಲ್ಲಿ ಹೇಳಿ, ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಯಿತು. ಸಾಧಾರಣವಾಗಿ ಮಾತನಾಡುವುದಾದರೆ ಇದು ಯಾವುದೇ ತೊಡಕು ಸೃಷ್ಟಿಸಬಾರದು. ಆದರೆ ಉದಾಹರಣೆಗೆ ಸಭಾಧ್ಯಕ್ಷರು ಒಂದು ರಾಜ್ಯದ ಒಬ್ಬ ಸಚಿವ ಆದ ಇಂಥ ಸಂದರ್ಭದಲ್ಲಿ ಈ ತೊಡಕು ಉದ್ಭವಿಸಬಹುದು. ಅಂದರೆ, ಸಭಾಧ್ಯಕ್ಷರು ಒಂದು ರಾಜ್ಯದ ಸಚಿವರಾಗಿ ಸಂವಿಧಾನ ರಚನಾಸಭೆಯ ಅಧ್ಯಕ್ಷತೆ ವಹಿಸುವುದೆಂದರೆ ಅದು ಒಂದು ಅಸಮಂಜಸ ವಿಷಯವಾಗುತ್ತದೆ. ತತ್ಫಲವಾಗಿ ಎರಡು ಮಾರ್ಗಗಳಲ್ಲಿ ಯಾವುದಾದರೂ ಒಂದನ್ನು ಅಳವಡಿಸಿಕೊಳ್ಳಬೇಕು; ಅಂದರೆ ಸಭಾಧ್ಯಕ್ಷರು ಒಬ್ಬ ಸಚಿವರಾಗಿರಬಾರದು ಅಥವಾ ಅವರು ಸಚಿವರಾಗಿಯೇ ಮುಂದುವರಿಯುವುದಾದಲ್ಲಿ ಸಂವಿಧಾನ ರಚನಾಸಭೆಯು ಮತ್ತೋರ್ವ ಅಧಿಕಾರಿಯನ್ನು ಆಯ್ಕೆ ಮಾಡಿ ಅವರನ್ನು ಸ್ಪೀಕರ್ ಇಲ್ಲವೇ ಉಪಾಧ್ಯಕ್ಷರು ಎಂದು ಕರೆದು ಅವರ ಕೆಲಸಗಳು ಸಂವಿಧಾನ ರಚನಾಸಭೆಗೆ ಅದು ಕಾನೂನುಗಳನ್ನು ಮಾಡುವ ಉದ್ದೇಶಕ್ಕೆ ಅಧಿವೇಶನದಲ್ಲಿರುವಾಗ, ಅಧ್ಯಕ್ಷತೆ ವಹಿಸುವಂತೆ ಮಾಡಬೇಕಾಗುತ್ತದೆ.

ಸಮಿತಿಗೆದುರಾದ ಎರಡನೆಯ ತೊಂದರೆ ಎಂದರೆ ರಾಜ್ಯಗಳ ಪ್ರತಿನಿಧಿಗಳನ್ನು ಕುರಿತುದಾಗಿದೆ. ಸಂವಿಧಾನ ರಚನಾಸಭೆಯು ಕಾನೂನು ಮಾಡುವ ಉದ್ದೇಶಗಳಿಗೆ ಸಭೆ ಸೇರಿದಾಗ ಅದು ಭಾರತ ಸರ್ಕಾರದ ಅಧಿನಿಯಮಕ್ಕೆ ಏಳನೆಯ ಅನುಸೂಚಿತ ಪಟ್ಟಿ ಸಂಖ್ಯೆ ೧ರಲ್ಲಿ ಸೇರಿರುವ ಎಲ್ಲ ವಿಷಯಗಳನ್ನು ಕಾರ್ಯಾಚರಣೆಯ ಅಡಿಯಲ್ಲಿ ತಂದುಕೊಳ್ಳುತ್ತದೆ ಎಂಬುದನ್ನು ಸದನವು ನೆನಪು ಮಾಡಿಕೊಳ್ಳಬಹುದು.

ರಾಜ್ಯಗಳು ಪ್ರಸ್ತುತ 'ಒಕ್ಕೂಟಕ್ಕೆ ಸೇರ್ಪಡೆಯಾಗುವ ಪತ್ರ'ದ ಪ್ರಕಾರ ಒಕ್ಕೂಟದ ಭಾಗವಾಗಿದ್ದು ಆ ಪತ್ರದಲ್ಲಿರುವ ಪಟ್ಟಿಯು, ಏಳನೆಯ ಅನುಸೂಚಿಯಲ್ಲಿ ಇರುವ ೧ನೆಯ ಸಂಖ್ಯೆಯ ಪಟ್ಟಿಯೊಂದಿಗೆ ತಾಳೆಯಾಗುವುದಿಲ್ಲ. ಹಾಗೆ ನೋಡಿದರೆ ಸೇರ್ಪಡೆಯ ಪತ್ರದಲ್ಲಿ ಸೇರಿರುವ ವಿಷಯಗಳು ಪಟ್ಟಿ ಸಂಖ್ಯೆ ೧ರಲ್ಲಿ ಸೇರಿರುವ ವಿಷಯಗಳಿಂತ ಗಮನಾರ್ಹವಾಗಿ ಕಡಿಮೆ ಸಂಖ್ಯೆಯವಾಗಿವೆ. ಇಲ್ಲಿ ಉದ್ಭವಿಸುವ ತೊಂದರೆ ಹೀಗಿದೆ: ಒಕ್ಕೂಟಕ್ಕೆ ಸೇರ್ಪಡೆಯ ಪತ್ರದ ಅನುಸಾರವಾಗಿ ಸೇರ್ಪಡೆಯಾಗಿರುವ ರಾಜ್ಯಗಳ ಪ್ರತಿನಿಧಿಗಳಾಗಿ ಈ ಸಭೆಯಲ್ಲಿರುವ ಸದಸ್ಯರು, ಸೇರ್ಪಡೆಯ ಪತ್ರದ ಪ್ರಕಾರ ಇತರ ಸದಸ್ಯರಿಗಿಂತ ಕಡಿಮೆ ವಿಷಯಗಳಿಗೆ ಅರ್ಹರಾಗಿರುವುದರಿಂದ, ಅವರು ಅವರ ಪಟ್ಟಿಯಲ್ಲಿ ಇಲ್ಲದ ವಿಷಯಗಳನ್ನು ಕುರಿತ ಚರ್ಚೆಯಲ್ಲಿಯೂ ಭಾಗವಹಿಸಬಹುದೇ ಎಂಬ ಪ್ರಶ್ನೆ ಎದುರಾಗುತ್ತದೆ. ಈ ವಿಷಯ ಕುರಿತಂತೆ ವ್ಯವಹರಿಸಲು ಎರಡು ಮಾರ್ಗಗಳಂತೂ ಇದ್ದವು. ಅವುಗಳಲ್ಲಿ ಒಂದು ಮಾರ್ಗವೆಂದರೆ ಒಳಗೆ ಮತ್ತು ಹೊರಗೆ ಎಂದು ಕರೆಯಲಾಗುವ ಕ್ರಮವನ್ನು ಅಳವಡಿಸುವುದಾಗಿತ್ತು. ಅಂದರೆ ಅವರು ಸಂವಿಧಾನ ರಚನಾ ಸಭೆಯಲ್ಲಿ ಕುಳಿತು ಚರ್ಚೆ ಮಾಡಲಾಗುತ್ತಿದ್ದ ವಿಷಯ ಸೇರ್ಪಡೆಯ ಪತ್ರ ಹಾಗೂ ಪಟ್ಟಿ ಸಂಖ್ಯೆ ೧ ಎರಡರಲ್ಲೂ ಒಂದೇ ಆಗಿದ್ದಾಗ ಅವರು ಮತ ಹಾಕಬೇಕು ಮತ್ತು ಸದನದಲ್ಲಿ ಒಂದು ವಿಷಯ ಚರ್ಚೆಯಾಗುತ್ತಿದ್ದ ವಿಷಯವು ಸೇರ್ಪಡೆಯ ಪತ್ರದ ಭಾಗವಾಗಿ ಇಲ್ಲದಿದ್ದರೆ ಅವರು ಭಾಗವಹಿಸುವಂತೆ ಇರಬಾರದು. ಸಮಿತಿಯು ಎರಡನೆಯ ಮಾರ್ಗ ತಾತ್ತ್ವಿಕವಾಗಿ ಹೆಚ್ಚು ತಾರ್ಕಿಕವಾದರೂ ವಾಸ್ತವಿಕ ದೃಷ್ಟಿಯಿಂದ ಅಂತಹ ಒಂದು ಭೇದವನ್ನು ನಾವು ಮಾಡಬಾರದು ಎಂಬ ತೀರ್ಮಾನಕ್ಕೆ ಬಂದಿತು. ಆದುದರಿಂದ ಸಮಿತಿಯು ಪಟ್ಟಿ ಸಂಖ್ಯೆ ೧ ಮತ್ತು ಸೇರ್ಪಡೆಯ ಪತ್ರದಲ್ಲಿ ಇರುವ ವಿಷಯಗಳನ್ನು ಪರಿಗಣಿಸದೆ ಭಾರತೀಯ ರಾಜ್ಯಗಳ ಪ್ರತಿನಿಧಿಗಳು ಎರಡೂ ಪಟ್ಟಿಗಳಲ್ಲಿರುವ ಯಾವ ವಿಷಯದ ಮೇಲಿನ ನಿಲುವಳಿಗಳಲ್ಲಾದರೂ ಭಾಗವಹಿಸಬಹುದು ಎಂದು ಶಿಫಾರಸು ಮಾಡಿತು.

ಸಮಿತಿ ಎದುರಿಸಬೇಕಾದ ಮೂರನೆಯ ಪ್ರಶ್ನೆ ಎಂದರೆ ಸಚಿವರ ಸ್ಥಾನಮಾನ. ಸದನ ತಿಳಿದಿರುವಂತೆ ಕೆಲವರು ಸಚಿವರು ಸಂವಿಧಾನ ರಚನಾಸಭೆಯ ಸದಸ್ಯರಾಗಿಲ್ಲ. ಆ ಪ್ರವರ್ಗದಲ್ಲಿ ಅಂತಹ ಐವರು ಇದ್ದಾರೆ. ಇಲ್ಲಿ ಉದ್ಭವಿಸಿರುವ ಪ್ರಶ್ನೆ ಸಂವಿಧಾನ ರಚನಾಸಭೆಯ ಸದಸ್ಯರಾಗಿರುವ ಸಚಿವರು ಸಂವಿಧಾನ ರಚನಾಸಭೆ ಹಾಗೂ ಶಾಸನಸಭೆ ಎರಡರ ನಡವಳಿಗಳಲ್ಲಿಯೂ ಪಾಲ್ಗೊಳ್ಳಬಹುದೇ ಎಂಬುದು. ಶಾಸನಸಭೆಯಲ್ಲಿ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಅವರ ಸ್ಥಿತಿ ಸುರಕ್ಷಿತ. ಭಾರತ ಸರ್ಕಾರದ ಅಧಿನಿಯಮದ ಪ್ರಕರಣ ೨ರ ಉಪಪ್ರಕರಣ (೨)ನ್ನು ಉಳಿಸಿಕೊಂಡಿರುವುದರಿಂದ ಮತ್ತು ಸದನದ ಸದಸ್ಯರು ಅನುಚ್ಛೇದ ೧೦ರ ಉಪಪ್ರಕರಣ (೨)ರಲ್ಲಿರುವ ಉಪಬಂಧಗಳ ಅಡಿಯಲ್ಲಿ ಒಬ್ಬ ವ್ಯಕ್ತಿ ಶಾಸನ ಸಭೆಯ ಸದಸ್ಯನಾಗದೆಯೂ ಶಾಸನಸಭೆಯ ಕೆಲಸದಲ್ಲಿ ಭಾಗಿಯಾಗಬಹುದು ಮತ್ತು ಒಬ್ಬ ಸಚಿವನಾಗಿರಬಹುದು ಎಂದು ಹೇಳಿರುವುದರಿಂದ ಈ ಸದಸ್ಯರು ಸುರಕ್ಷಿತರಾಗಿರುತ್ತಾರೆ. ಆದುದರಿಂದ ಅದರಡಿ ಸಂವಿಧಾನ ರಚನಾಸಭೆಯ ಸದಸ್ಯರಲ್ಲದ ಸಚಿವರು ರಾಜ್ಯದ ಸಚಿವರಾಗಿದ್ದುಕೊಂಡೇ ಸಂವಿಧಾನ ರಚನಾಸಭೆಯಲ್ಲಿ ಅದು ಒಂದು ಶಾಸನಸಭೆಯಾಗಿ ಕೆಲಸ ಮಾಡುವಾಗ ಭಾಗವಹಿಸಲು ಅರ್ಹರಾಗಿರುತ್ತಾರೆ.

ಆದರೆ, ಸಂವಿಧಾನ ರಚನಾಸಭೆಯೊಂದಿಗೆ ಅವರ ಸಂಬಂಧ ಹೇಗಿರಬೇಕು ಎನ್ನುವ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಪ್ರಸ್ತುತ, ಅವರು ಸಂವಿಧಾನ ರಚನಾಸಭೆ ಸದಸ್ಯರಾಗಿಲ್ಲದ ಕಾರಣ, ಸಂವಿಧಾನದ ರಚನಾ ಸಭೆಯ ಕೆಲಸದಲ್ಲಿ ಅಂದರೆ ಅದು ಸಂವಿಧಾನ ಸಿದ್ಧಪಡಿಸುವಲ್ಲಿ ಅವರು ಭಾಗವಹಿಸುವ ಅರ್ಹತೆ ಉಳ್ಳವರಲ್ಲ. ಸಂವಿಧಾನವನ್ನು ರಚಿಸುವುದರಲ್ಲಿ ಅವರ ಭಾಗವಹಿಸುವಿಕೆಯನ್ನು ಖಾತರಿಯೂ ಪಡಿಸಿರಬೇಕೆಂಬುದು ಅಗತ್ಯವೆಂಬ ತೀರ್ಮಾನವನ್ನು ಸಮಿತಿಯು ತೆಗೆದುಕೊಂಡಿತು. ಆದ್ದರಿಂದ ೧೦ನೆಯ ಪ್ರಕರಣ ೨ನೆಯ ಉಪಪ್ರಕರಣವು ಅವರು ಶಾಸನಸಭೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವನ್ನು ನೀಡುತ್ತದೆ. ಹಾಗೆಯೇ

ಸರ್ಕಾರದ ಸದಸ್ಯರು ಸಂವಿಧಾನ ಸಭೆಯ ಸದಸ್ಯರಾಗಿರದಿದ್ದರೂ, ಸಂವಿಧಾನ ಸಭೆಯ ಕಾರ್ಯಗಳಲ್ಲಿ ಭಾಗವಹಿಸಲು ಅನುಮತಿಯನ್ನು ನೀಡುವಂತಹ ಅವಕಾಶಗಳನ್ನು ತನ್ನ ನಿಯಮಗಳಲ್ಲಿ ಸಂವಿಧಾನ ರಚನಾ ಸಭೆಯು ಮಾಡತಕ್ಕದ್ದು.

ಮಾನ್ಯರೆ, ಸಮಿತಿಯು ಯಾವ ಶಿಫಾರಸನ್ನೂ ಮಾಡಿರದ ಇನ್ನೂ ಎರಡು ವಿಷಯಗಳಿವೆ ಮತ್ತು ನಾನು ಅವನ್ನು ಉಲ್ಲೇಖಿಸುವುದು ಅವಶ್ಯವಾಗಿದೆ. ಮೊದಲನೆಯ ವಿಷಯ ದ್ವಿಸದಸ್ಯತ್ವದ ಪ್ರಶ್ನೆ. ಸದನ ತಿಳಿದಿರುವಂತೆ ಸಂವಿಧಾನ ರಚನಾಸಭೆಯ ಕೆಲವು ಸದಸ್ಯರು ಪ್ರಾಂತೀಯ ಶಾಸನಸಭೆಯ ಸದಸ್ಯರೂ ಆಗಿದ್ದಾರೆ. ಈವರೆಗೆ ಯಾವುದೇ ಅಸಮಂಜಸತೆ ಇಲ್ಲ. ಕಾರಣ, ಸಂವಿಧಾನ ರಚನಾಸಭೆಯು ಒಂದು ಶಾಸನ ಸಭೆಯಲ್ಲ. ಆದರೆ ಸಂವಿಧಾನ ರಚನಾಸಭೆಯು ಒಂದು ಶಾಸನಸಭೆಯ ಅಂಗವಾಗಿ ಕೆಲಸ ಮಾಡಲು ಆರಂಭಿಸಿದಾಗ ದ್ವಿಸದಸ್ಯತ್ವದ ತುಮುಲ ನಿಸ್ಸಂಶಯವಾಗಿ ಉದ್ಭವಿಸುತ್ತದೆ. ನಾನು ಈ ವಿಷಯದೊಂದಿಗೆ ವ್ಯವಹರಿಸುವ ಭಾರತ ಸರ್ಕಾರದ ಅಧಿನಿಯಮದ ಪ್ರಕರಣ ೬೮(೨) ರಲ್ಲಿ ಉಳ್ಳ ಉಪಬಂಧದತ್ತ ಗಮನ ಸೆಳೆಯಬಹುದು. ಪ್ರಕರಣ ೬೮(೨) ಒಬ್ಬ ಸದಸ್ಯನು ಕೇಂದ್ರ ಅಥವಾ ಪ್ರಾಂತೀಯ ಹೀಗೆ ಎರಡು ಶಾಸನ ಸಭೆಗಳ ದ್ವಿಸದಸ್ಯತ್ವ ಹೊಂದಲು ಅವಕಾಶವನ್ನು ನೀಡುವುದಿಲ್ಲ. ಆದರೆ ಈ ಉಪಬಂಧವನ್ನು ಈಗ ಕೈಬಿಡಲಾಗಿದೆ. ತತ್ಫಲವಾಗಿ ಸಂವಿಧಾನ ರಚನಾಸಭೆಯ ಸದಸ್ಯರಿಗೆ ಅವರು ಶಾಸನಸಭೆಯ ಸದಸ್ಯರಾಗಿಯೂ ಕೆಲಸ ಮಾಡುವಾಗ ಇನ್ನೊಂದು ಶಾಸನಸಂಸ್ಥೆಯ ಸದಸ್ಯರಾಗಿರಲು ಕೂಡ ಅನುಮತಿ ಇದೆ. ಅಸಮಂಜಸತೆಯು ಶುದ್ಧ ಸಾಂವಿಧಾನಿಕ ದೃಷ್ಟಿಯಿಂದ ಉಳಿಯುತ್ತದೆ. ಸಂವಿಧಾನದ ರಚನಾಸಭೆಗೆ ಅವರು ಪ್ರಕರಣ ೬೮(೨) ಕೈಬಿಡುವುದರ ಹಿಂದಿರುವ ನೀತಿಯನ್ನು ಒಪ್ಪುತ್ತದೆಯೋ ಅಥವಾ ಪ್ರಕರಣ ೬೮(೨) ಹೊರತಾಗಿಯೂ ದ್ವಿಸದಸ್ಯತ್ವವನ್ನು ತಡೆಯುತ್ತದೆಯೋ ಎಂಬುದು ಸಂವಿಧಾನ ಸಭೆಗೆ ಬಿಟ್ಟ ವಿಷಯವಾಗಿದೆ.

ಸಮಿತಿಯು ಯಾವ ಶಿಫಾರಸನ್ನೂ ಮಾಡದ ಎರಡನೇ ಪ್ರಶ್ನೆಯು ಸಂವಿಧಾನದ ರಚನಾಸಭೆಯ ಆಡಳಿತಾತ್ಮಕ ವ್ಯವಸ್ಥೆಗೆ ಸಂಬಂಧಿಸಿದೆ. ಆಡಳಿತಾತ್ಮಕ ಸಂಸ್ಥೆಯ ಮಂಡಲಿಯು ಒಂದು ಪ್ರತ್ಯೇಕ ಒಗ್ಗೂಡಿದ ಸಂಸ್ಥೆಯಾಗಿರುವುದರಿಂದ ಅದು ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರ ಪ್ರತ್ಯೇಕ ನಿಯಂತ್ರಣದಡಿಯಲ್ಲಿ ಬರುತ್ತದೆ. ಎಲ್ಲಿವರೆಗೆ ಸಂವಿಧಾನ ರಚನಾಸಭೆಯು ಈ ನಿರ್ದಿಷ್ಟ ಮತ್ತು ಏಕಮಾತ್ರ ಕೆಲಸವನ್ನು, ಅಂದರೆ ಸಂವಿಧಾನ ಸಿದ್ಧಪಡಿಸುವ ಕೆಲಸವನ್ನು ಮಾಡುತ್ತಿರುತ್ತೋ ಅಲ್ಲಿಯವರೆಗೆ ಈ ವಿಷಯದಲ್ಲಿ ಯಾವುದೇ ತೊಡಕು ಇರಲಿಲ್ಲ. ಆದರೆ ಸಂವಿಧಾನ ರಚನಾಸಭೆಯು ಈಗ ಮಾಡುತ್ತಿರುವ ಎರಡೂ ಕಾರ್ಯಗಳನ್ನು ಕೆಲಸ ಮಾಡುವಾಗ ಅಂದರೆ ಒಮ್ಮೆ ಸಂವಿಧಾನ ರಚಿಸುವುದು ಮತ್ತು ಇನ್ನೊಮ್ಮೆ ಶಾಸನಸಭೆಯಾಗಿ ಕಾರ್ಯನಿರ್ವಹಿಸುವುದು, ಶಾಸನಸಭೆಯ ಮುಖ್ಯಸ್ಥನನ್ನಾಗಿ ಇನ್ನೊಬ್ಬ ವ್ಯಕ್ತಿಯನ್ನು ಅಂದರೆ ಸ್ಪೀಕರ್ ಅಥವಾ ಡೆಪ್ಯೂಟಿ ಸ್ಪೀಕರ್‌ನನ್ನು ಇಟ್ಟು ಆತನಿಗೆ ಸಹಾಯಕ ಸಿಬ್ಬಂದಿಯನ್ನು ಒದಗಿಸುವಲ್ಲಿ ತೊಂದರೆಗಳು ಉದ್ಭವಿಸಬಹುದು. ಆದರೆ ಸಮಿತಿಯು ಈ ವಿಷಯದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಲು ತನಗೆ ವಹಿಸಿರುವ ವಿಷಯಗಳ ಅಡಿಯಲ್ಲಿ ಸಾಧ್ಯವಿಲ್ಲ ಎಂದು ಆಲೋಚಿಸಿತು. ಹಾಗಾಗಿ ಈ ವಿಷಯದಲ್ಲಿ ಅದು ಯಾವ ತೀರ್ಮಾನವನ್ನೂ ತೆಗೆದುಕೊಳ್ಳಲಿಲ್ಲ.

ಮಾನ್ಯರೆ, ನಾನೀಗ ಮಾಡಿದುದಕ್ಕಿಂತ ಸದನದ ವೇಳೆಯನ್ನು ಮತ್ತಷ್ಟು ಹೆಚ್ಚು ತೆಗೆದುಕೊಳ್ಳುವ ಆವಶ್ಯಕತೆ ಇಲ್ಲ ಎಂದು ನನಗನಿಸುತ್ತದೆ. ನಾನು ಏನು ಹೇಳಿರುವೆನೋ ಅದು ಸಮಿತಿಯು ಏನು ಮಾಡಿದೆ ಎಂಬುದನ್ನು ಸದಸ್ಯರಿಗೆ ತಿಳಿಸುತ್ತದೆ ಮತ್ತು ಅವರು ತಮ್ಮ ಅಭಿಪ್ರಾಯದಲ್ಲಿ ಉತ್ತಮವೆಂದು ಕಾಣುವ ರೀತಿಯಲ್ಲಿ ವರದಿಯ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬಹುದು.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಮುನ್ಷಿಯವರು ಈ ಸಮಿತಿಯ ಶಿಫಾರಸುಗಳನ್ನು ಒಳಗೊಂಡ ಒಂದು

ನಿರ್ಣಯದ ಸೂಚನೆಯನ್ನು ಕೊಟ್ಟಿರುತ್ತಾರೆ. ಆ ಪ್ರಸ್ತಾವವನ್ನು ಮೊದಲು ಎತ್ತಿಕೊಳ್ಳುವುದು ಉತ್ತಮ ಮತ್ತು ಚರ್ಚೆ ಅನಂತರ ಆಗಬಹುದು ಎಂದು ನನಗೆನಿಸುತ್ತದೆ.

**ಡಾ. ಪಿ.ಎಸ್. ದೇಶ್‌ಮುಖ್ :** ನಾವು ಮೊದಲು ವರದಿಯನ್ನು ಪರಿಗಣಿಸುವುದೆಂಬುದರ ಪ್ರಸ್ತಾವವನ್ನು ತೆಗೆದುಕೊಳ್ಳುವುದು ಉತ್ತಮವಲ್ಲವೆ ಮತ್ತು ಅದನ್ನು ಕುರಿತ ಒಂದು ನಿರ್ಣಯದ ಅನಂತರ ಇತರ ತಿದ್ದುಪಡಿಗಳನ್ನು ಎತ್ತಿಕೊಳ್ಳೋಣ.

**ಮಾನ್ಯ ಸಭಾಧ್ಯಕ್ಷರು :** ವರದಿಯನ್ನು ಪರಿಗಣಿಸುವ ಪ್ರಸ್ತಾವವನ್ನು ಕುರಿತು ಒಂದು ಪ್ರತ್ಯೇಕ ಚರ್ಚೆ ಅಗತ್ಯವೇ? ಸದನ ಅನುಮತಿಸಿದರೆ ಎರಡೂ ಒಟ್ಟಿಗೆ ಹೋಗಬಹುದು ಎಂದು ನನಗನಿಸುತ್ತವೆ. ವಾಸ್ತವವಾಗಿ ಹೇಳಬೇಕೆಂದರೆ ಶ್ರೀ ಮುನ್ಷಿಯವರು ಮಂಡಿಸುವ ನಿರ್ಣಯ ವಾಸ್ತವವಾಗಿ ಅದೇ ಆಗಿದೆ.

**ಶ್ರೀ ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ನನ್ನ ಹೆಸರಿನಲ್ಲಿರುವ ನಿರ್ಣಯವನ್ನು ನಾನು ಮಂಡಿಸುತ್ತೇನೆ. ಇದರಲ್ಲಿನ ನಿರ್ಣಯದ ಕಂಡಿಕೆಗಳು, ಒಂದು ಅಥವಾ ಎರಡು ವಿಷಯಗಳ ಹೊರತಾಗಿ, ಬಹುತೇಕ ವರದಿಯ ರೀತಿಯಲ್ಲಿಯೇ ಇದೆ. ಈ ಹೊರತಾದವುಗಳ ಬಗ್ಗೆ ನಾನು ಸದನದ ಗಮನ ಸೆಳೆಯುತ್ತೇನೆ. ಖಂಡಗಳನ್ನು ವರದಿಯ ಭಾಗದಿಂದಲೇ ಎತ್ತಿಕೊಳ್ಳಲಾಗಿದೆ ಅವನ್ನು ಗೌರವಾನ್ವಿತ ಡಾ. ಅಂಬೇಡ್ಕರ್ ಸದನಕ್ಕೆ ವಿವರಿಸಿರುತ್ತಾರೆ. ಹಾಗಾಗಿ ನಾನು ಅದರ ಹಿನ್ನೆಲೆಯ ಬಗೆಗೆ ಹೇಳುವ ಅಗತ್ಯವಿಲ್ಲ. ಆದರೆ ವರದಿಗೆ ಸೂಕ್ತ ಪರಿಣಾಮ ಕೊಡುವುದಕ್ಕಾಗಿ ನಾನು ಮಾಡಿರುವ ಒಂದೆರಡು ಬದಲಾವಣೆಗಳನ್ನು ಕುರಿತು ಸದನದ ಗಮನ ಸೆಳೆಯುತ್ತೇನೆ.

ಕಂಡಿಕೆ (೪) ಹೀಗೆ ಇರುತ್ತದೆ:–

"ಪ್ರಭುತ್ವದ ಶಾಸನ ಸಭೆಯಾಗಿ ಕೆಲಸ ಮಾಡುವಾಗ ಸಂವಿಧಾನ ರಚನಾಸಭೆಯ ಚರ್ಚೆಗಳನ್ನು ಕುರಿತಂತೆ ಅಧ್ಯಕ್ಷತೆ ವಹಿಸಲು ಸ್ಪೀಕರ್ ಎನ್ನಲಾಗುವ ಒಬ್ಬ ಅಧಿಕಾರಿಯನ್ನು ಚುನಾಯಿಸಲು ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಸೂಕ್ತ ಉಪಬಂಧಗಳನ್ನು ಕಲ್ಪಿಸಬೇಕು."

ಈ ಸಂಬಂಧವಾಗಿ ನಾನು ವರದಿಯು ಎರಡು ಪರ್ಯಾಯಗಳನ್ನು ಸದನದ ಮುಂದೆ ಇರಿಸಿದೆ ಎಂದು ಹೇಳಬೇಕಿದೆ:

ಮೊದಲನೆಯ ಪರ್ಯಾಯ ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ತಮ್ಮ ಇಡೀ ಸಮಯವನ್ನು ಸಂವಿಧಾನ ರಚನಾಸಭೆಯ ಕೆಲಸಕ್ಕೆ–ಅದು ಸಂವಿಧಾನ ಸಿದ್ಧಮಾಡುವಾಗ ಮತ್ತು ಪ್ರಭುತ್ವ ಶಾಸನಸಭೆಯ ವ್ಯವಹಾರ ನಡೆಸುವಾಗ ಹೀಗೆ ಎರಡೂ ಕೆಲಸ ಮಾಡುವುದಕ್ಕೆ – ಮೀಸಲಿಡುವಂಥ ವ್ಯಕ್ತಿ ಆಗಿರಬೇಕು. ಅವರು ಇನ್ನೊಂದು ಪರ್ಯಾಯವನ್ನೂ ಸೂಚಿಸಿದ್ದಾರೆ: ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಒಬ್ಬ ಸಚಿವರಾಗಿದ್ದರೆ ಶಾಸನ ಸಭೆಯಾಗಿ ಕೆಲಸ ಮಾಡುವಾಗ ಶಾಸನ ಸಭೆಯ ಅಧ್ಯಕ್ಷತೆ ವಹಿಸಲು ಒಬ್ಬ ಅಧಿಕಾರಿಯನ್ನು ಚುನಾಯಿಸಲು ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಅವಕಾಶವನ್ನು ಕಲ್ಪಿಸಬಹುದು. ಮಾನ್ಯರೆ, ತಾವು ಒಬ್ಬ ಸಚಿವರೂ ಆಗಿರುವ ಕಾರಣ ನಾನು ಎರಡನೇ ಪರ್ಯಾಯವನ್ನು ಆಯ್ಕೆ ಮಾಡಿದ್ದೇನೆ ಮತ್ತು ಅದನ್ನು ನನ್ನ ಕಂಡಿಕೆ (೫)ರಲ್ಲಿ ಸೇರಿಸಿರುತ್ತೇನೆ. ಇದರ ಫಲಿತಾಂಶವೆಂದರೆ ಸದನವು ಸಂವಿಧಾನ ರಚನಾಸಭೆ ಒಂದು ಶಾಸನ ಸಭೆಯಾಗಿ ಕೆಲಸ ಮಾಡುವಾಗ ಸಭೆಯ ಚರ್ಚೆಗಳಲ್ಲಿ ಅಧ್ಯಕ್ಷರಾಗಿರಲು ಒಬ್ಬ ಅಧಿಕಾರಿಯನ್ನು ಚುನಾಯಿಸಬೇಕು.

ನಾನು ಮಾಡಿರುವ ಇನ್ನೊಂದು ಬದಲಾವಣೆ ಎಂದರೆ ಅಧಿಕಾರಿಯ ಹೆಸರನ್ನು ಸೂಚಿಸುವುದು ಚುನಾವಣೆಯು ಮುಗಿದ ಅನಂತರ ಆ ಅಧಿಕಾರಿಗೆ ಸ್ಪೀಕರ್ ಎಂದು ನಾಮಾಂಕಿತ ಮಾಡಬೇಕು. ಆದುದರಿಂದ ಸದನವು ಸಂವಿಧಾನ ರಚನಾಸಭೆ ಎಂದು ಸೇರಿದಾಗ ಸಭಾಧ್ಯಕ್ಷರು ಅದರ ಸಭೆ ಅಧ್ಯಕ್ಷತೆ ವಹಿಸಬೇಕು ಮತ್ತು ಅದು ಶಾಸನ ಸಭೆಯಾಗಿ ಸೇರಿದ ಚುನಾಯಿಸಲಾದ ಅಧಿಕಾರಿಗಳು ಅಧ್ಯಕ್ಷತೆ ವಹಿಸಬೇಕು ಮತ್ತು

ನಾವು ಅವರನ್ನು ಸ್ಪೀಕರ್ ಎಂದು ಕರೆಯುತ್ತೇನೆ. ಸ್ಪೀಕರ್ ಎಂಬ ಶಬ್ದ ಸಾಕಷ್ಟು ಅರ್ಥಗರ್ಭಿತವಾಗಿರುವುದರಿಂದ ಅದು ನಾವೆಲ್ಲ ಶಾಸನಸಭೆಯಲ್ಲಿ ಕುಳಿತಿದ್ದೇವೆ. ಸಂವಿಧಾನ ರಚಿಸುವ ಸಭೆಯಲ್ಲಿ ಅಲ್ಲ ಎಂಬ ಅರ್ಥವನ್ನು ರವಾನಿಸುತ್ತದೆ. ನಾನು ಮಾಡಬೇಕೆಂದುಕೊಂಡಿರುವುದು ಇದೊಂದೇ ಬದಲಾವಣೆ. ನಾನು ಮಂಡಿಸಿದಂತೆ ನಿಲುವಳಿಯನ್ನು ಸದನವು ಸ್ವೀಕರಿಸಬಹುದಾಗಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯರೆ, ಕ್ರಮಬದ್ಧವಾಗಿ ಪ್ರಸ್ತಾವವನ್ನು ಓದಲಾಗಿಲ್ಲ ಮತ್ತು ಮಂಡಿಸಲಾಗಿಲ್ಲ.

**ಶ್ರೀ ಕೆ.ಎಮ್. ಮುನ್ಷಿ** : ನಾನು ಖಂಡಿತ ಅದನ್ನು ಓದುತ್ತೇನೆ. ಇದರತ್ತ ಗಮನ ಸೆಳೆದಿದ್ದಕ್ಕೆ ನಾನು ಗೌರವಾನ್ವಿತ ಸದಸ್ಯರಿಗೆ ಆಭಾರಿಯಾಗಿದ್ದೇನೆ ಮತ್ತು ನಾನು ಸರಿಪಡಿಸಿಕೊಳ್ಳುತ್ತೇನೆ. ನನ್ನ ನಿಲುವಳಿ ಕೆಳಗಿನಂತೆ ಇದೆ:

"ಭಾರತ ಸ್ವಾತಂತ್ರ್ಯ ಅಧಿನಿಯಮದಡಿ ಸಂವಿಧಾನ ರಚನಾಸಭೆ ಕೆಲಸಗಳ ಮೇಲಿನ ವರದಿಯ ಪರಿಗಣನೆ ಕುರಿತಂತೆ ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ ಅವರ ಪ್ರಸ್ತಾವವನ್ನು ಕುರಿತು ಹೀಗೆ ನಿರ್ಧರಿಸಲಾಗಿದೆ.

(೧) ಸಂವಿಧಾನ ರಚನಾಸಭೆಯ ಕೆಲಸಗಳು–

(ಎ) ೧೯೪೬ರ ಡಿಸೆಂಬರ್ ೯ರಂದು ಆರಂಭಿಸಿದ ಸಂವಿಧಾನ ಸಿದ್ಧಪಡಿಸುವ ಕೆಲಸವನ್ನು ಮುಂದುವರಿಸಿ ಮುಗಿಸುವುದು.

(ಬಿ) ಹೊಸ ಸಂವಿಧಾನದಡಿ ಒಂದು ಶಾಸನಸಭೆಯು ಬರುವವರೆಗೆ ಪ್ರಭುತ್ವ ಶಾಸನ ಸಭೆಯಾಗಿ ಕೆಲಸ ಮಾಡುವುದು.

(೨) ಸಂವಿಧಾನ ರಚಿಸುವ ಸಂವಿಧಾನ ರಚನಾಸಭೆಯ ಕರ್ತವ್ಯಗಳನ್ನು ಪ್ರಭುತ್ವ ಶಾಸನಸಭೆಯಾಗಿ ಅದರ ದೈನಂದಿನ ವ್ಯವಹಾರದಿಂದ ಸ್ಪಷ್ಟವಾಗಿ ಗುರುತಿಸಿ ಬೇರ್ಪಡಿಸಬೇಕು ಮತ್ತು ಎರಡೂ ವಿಧಿಗಳ ವ್ಯವಹಾರಕ್ಕೆ ಬೇರೆ ಬೇರೆಯ ದಿನಗಳನ್ನು ಅಥವಾ ಒಂದೇ ದಿನ ಬೇರೆ ಬೇರೆ ಕಾಲವನ್ನು ಗೊತ್ತುಮಾಡಬೇಕು.

(೩) ಸಂವಿಧಾನ ರಚನಾಸಭೆಯಲ್ಲಿ ಭಾರತೀಯ ರಾಜ್ಯಗಳ ಪ್ರತಿನಿಧಿಗಳ ಸ್ಥಾನವನ್ನು ಕುರಿತು ವರದಿಯ ಕಂಡಿಕೆ ೬ರಲ್ಲಿನ ಶಿಫಾರಸುಗಳಿಗೆ ಸಮ್ಮತಿಸಬೇಕು."

ನಾನು ವರದಿಯ ಕಂಡಿಕೆ ೬ನ್ನು ಇಲ್ಲಿ ಸೇರಿಸಿರುತ್ತೇನೆ. ಜಾರಿಗೆ ಬರಬೇಕಾದ ಭಾಗ ಕೆಳಗಿನಂತಿದೆ:

"ಭಾರತೀಯ ರಾಜ್ಯಗಳನ್ನು ಪ್ರತಿನಿಧಿಸುವ ಸಂವಿಧಾನ ರಚಿಸುವ ಸಭೆಯ ಸದಸ್ಯರು ಸಭೆಗೆ ನೀಡಲಾಗಿರುವ ನಿಬಂಧನೆಗಳಲ್ಲಿ ಸೂಚಿತವಾದಂತೆ ಸಂವಿಧಾನ ಸಿದ್ಧಪಡಿಸುವ ಕಾರ್ಯಗಳಲ್ಲಿ ಎಲ್ಲ ದಿನಗಳಲ್ಲೂ ಸಂವಿಧಾನ ರಚನಾಸಭೆಯ ನಡವಳಿಗಳಲ್ಲಿ ಪಾಲ್ಗೊಳ್ಳಲು ಅರ್ಹರಿರುತ್ತಾರೆ. ಬಳಿಕ ಅವರು ಸಂವಿಧಾನ ರಚನಾ ಸಭೆಯು ಪ್ರಭುತ್ವ ಶಾಸನಸಭೆಯಾಗಿ ಕಾರ್ಯಮಾಡುವ ದಿನಗಳಲ್ಲಿ ಪ್ರಭುತ್ವಕ್ಕೆ ರಾಜ್ಯಗಳು ಅಂಗೀಕರಿಸಿದ ವಿಷಯಗಳಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಪಾಲ್ಗೊಳ್ಳಲೂ ಹಕ್ಕುಳ್ಳವರಾಗಿರುತ್ತಾರೆ. ರಾಜ್ಯಗಳು ಅಂಗೀಕರಿಸದ ವಿಷಯಗಳಿಗೆ ಸಂಬಂಧಿಸಿದ ವ್ಯವಹಾರದಲ್ಲಿ ಭಾಗವಹಿಸಲು ಸಂವಿಧಾನ ರಚನಾಸಭೆಯು ಅವರ ಪಾಲ್ಗೊಳ್ಳುವಿಕೆಯನ್ನು ತಿರಸ್ಕರಿಸಲು ಅಥವಾ ಮಿತಿಗೊಳಿಸಲು ಸಮರ್ಥವಿದ್ದರೂ ಅಂತಹ ವ್ಯವಹಾರದಲ್ಲಿ ಕೂಡ ಅವರ ಪಾಲ್ಗೊಳ್ಳುವಿಕೆ ಮೇಲೆ ಯಾವುದೇ ನಿಷೇಧ ಅಥವಾ ನಿರ್ಬಂಧವಿರಬಾರದು ಎಂದು ನಾವು ಶಿಫಾರಸು ಮಾಡಬೇಕು."

ನನ್ನ ನಿರ್ಣಯಕ್ಕೆ ಬರುವಲ್ಲಿ.

"(೪) ಸಂವಿಧಾನ ರಚನಾಸಭೆಯು ಪ್ರಭುತ್ವ ಶಾಸನಸಭೆಯಾಗಿ ಕೆಲಸ ಮಾಡುವಾಗ ಚರ್ಚೆಗಳನ್ನು ಕುರಿತಂತೆ ಅಧ್ಯಕ್ಷತೆ ವಹಿಸಲು ಸ್ಪೀಕರ್ ಎಂದು ನಾಮಾಂಕಿತ ಮಾಡಲು ಒಬ್ಬ ಅಧಿಕಾರಿಯ ಚುನಾವಣೆಗೆ ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಸೂಕ್ತ ಅವಕಾಶವನ್ನು ಮಾಡಿಕೊಡಬೇಕು.

(೫) ಪ್ರಭುತ್ವ ಶಾಸನ ಸಭೆಯಾಗಿ ಕೆಲಸ ಮಾಡಲು ಸಭೆಯನ್ನು ಕರೆಯುವುದು ಮತ್ತು ಅದನ್ನು ಮುಂದೂಡುವ ಅಧಿಕಾರ ಸಭಾಧ್ಯಕ್ಷರಲ್ಲಿರತಕ್ಕದ್ದು.

(೬) ಸಂವಿಧಾನ ರಚನಾಸಭೆಯ ಸದಸ್ಯರಲ್ಲದ ಪ್ರಭುತ್ವ ಸರ್ಕಾರದ ಸಚಿವರಿಗೆ ಅವರು ಸಂವಿಧಾನ ರಚನಾಸಭೆಯ ಸದಸ್ಯರಾಗುವವರೆಗೂ ಮತ ಚಲಾಯಿಸಲು ಹಕ್ಕು ಇರುವುದಿಲ್ಲವಾದರೂ ಅವರು ಸಂವಿಧಾನ ಸಿದ್ಧಪಡಿಸುವ ಸಭೆಯ ಕೆಲಸದಲ್ಲಿ ಹಾಜರಿದ್ದು, ಅದರಲ್ಲಿ ಪಾಲ್ಗೊಳ್ಳುವ ಹಕ್ಕನ್ನು ಪಡೆದಿರಬೇಕು.

(೭) ಅಗತ್ಯವಾದ ಮಾರ್ಪಾಡುಗಳು, ಅಳವಡಿಕೆಗಳು ಮತ್ತು ಸೇರ್ಪಡೆಗಳನ್ನು ಮಾಡಬೇಕು–

(ಎ) ಭಾರತೀಯ ಶಾಸನಸಭೆಯ ನಿಯಮಗಳು ಹಾಗೂ ಸ್ಥಾಯೀ ಆದೇಶಗಳು ೧೯೪೭ರ ಭಾರತ ಸರ್ಕಾರದ ಅಧಿನಿಯಮಕ್ಕೆ ಹೊಂದಾಣಿಕೆಯಾಗಿರುವಂತೆ ಮಾಡಲು ಅವುಗಳಿಗೆ ಸೂಕ್ತ ತಿದ್ದುಪಡಿಗಳನ್ನು ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಮಾಡತಕ್ಕದ್ದು.

(ಬಿ) ಹೊಸ ನಿಯಮಗಳಿಗೆ ಹೊಂದಾಣಿಕೆಯಾಗುವಂತೆ ಮಾಡಲು, ಮತ್ತು ೬ನೆಯ ಕಂಡಿಕೆಯ ಉಪಬಂಧಗಳನ್ನು ಜಾರಿಮಾಡಲು ಸಂವಿಧಾನ ರಚನಾಸಭೆಯು ಅಥವಾ ಅದರ ಸಭಾಧ್ಯಕ್ಷರು ಅಗತ್ಯವಾದ ತಿದ್ದುಪಡಿಗಳನ್ನು ಮಾಡತಕ್ಕದ್ದು."

ಈ ಸಂಬಂಧದಲ್ಲಿ ನಾನು ಆರಂಭದಲ್ಲಿ ನಮೂದಿಸದೆ ಬಿಟ್ಟ ಒಂದು ಅಂಶ ನಮೂದಿಸಬಯಸುತ್ತೇನೆ. ನನ್ನಿಂದ ಮಂಡಿಸಲಾದ ನಿರ್ಣಯಕ್ಕನುಗುಣವಾಗಿ ಮತ್ತು ವರದಿಗನುಗುಣವಾಗಿ ಸಭೆ ಕರೆಯುವ ಮತ್ತು ಮುಂದೂಡುವ ಅಧಿಕಾರ ಸಭಾಧ್ಯಕ್ಷರಲ್ಲಿರತಕ್ಕದ್ದು. ಈಗಾಗಲೇ ಹೇಳಿದಂತೆ ಪ್ರಸಕ್ತ ಅದು ಗವರ್ನರ್ ಜನರಲ್ ಅವರಲ್ಲಿದೆ. ಇದರ ಅರ್ಥ ಗವರ್ನರ್ ಜನರಲ್ ಅವರು ಪ್ರಧಾನ ಮಂತ್ರಿಗಳ ಸಲಹೆಯಂತೆ ನಡೆಯುತ್ತಾರೆ. ಆದರೆ ನಮ್ಮ ಶಾಸನಸಭೆಯ ಕೆಲಸ ಸಂವಿಧಾನ ರಚನಾಸಭೆಯ ಒಂದು ಭಾಗ ಮಾತ್ರವಾಗಿರುತ್ತದೆ, ಅದು ಗವರ್ನರ್ ಜನರಲ್‌ರ ಅಧಿಕಾರದಿಂದ ಮುಕ್ತವಾಗಿರಬೇಕು. ಆದುದರಿಂದ ಸಭಾಧ್ಯಕ್ಷರು ಶಾಸನಸಭಾ ಪರಿಷತ್ತನ್ನು ಕರೆಯಲು ಅಥವಾ ಮುಂದೂಡಲು ಸೂಕ್ತ ವ್ಯಕ್ತಿಯಾಗಿರುತ್ತಾರೆ ಎಂದು ಅಭಿಪ್ರಾಯ ಪಡಲಾಗಿದೆ.

ಇವು ನಾನು ಪ್ರಸ್ತುತ ಪಡಿಸಬೇಕಾಗಿದ್ದ ಅಂಶಗಳು ಮತ್ತು ಸದನವು ನಿರ್ಣಯವನ್ನು ಅಂಗೀಕರಿಸುತ್ತದೆ ಎಂದು ಆಶಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ನಾನು ಕೆಲವು ತಿದ್ದುಪಡಿಗಳ ಸೂಚನೆ ಪಡೆದಿರುತ್ತೇನೆ. ನಾನು ಇವುಗಳಲ್ಲಿ ನಾಲ್ಕು ತಿದ್ದುಪಡಿಗಳು ಶ್ರೀ ಮುನ್ಷಿಯವರು ಮಂಡಿಸಿದ ನಿರ್ಣಯಗಳಲ್ಲಿ ಒಳಗೊಂಡಿರುವುದರಿಂದ, ಅವನ್ನು ಮಂಡಿಸಬೇಕಿಲ್ಲ. ಶ್ರೀ ಮುನ್ಷಿಯವರ ನಿರ್ಣಯಗಳಲ್ಲಿ ಒಳಗೊಂಡಿರುವ ಎರಡು ತಿದ್ದುಪಡಿಗಳ ಸೂಚನೆಗಳನ್ನೂ ನಾನು ಪಡೆದಿರುತ್ತೇನೆ. ಒಂದು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರದು ಮತ್ತೊಂದು ಶ್ರೀ ಟಿ.ಟಿ. ಕೃಷ್ಣಮಾಚಾರಿಯವರದಾಗಿದೆ.

(ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ ಇವರು ತಮ್ಮ ತಿದ್ದುಪಡಿ ಮಂಡಿಸಲಿಲ್ಲ.)

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ತಿದ್ದುಪಡಿ ಮಂಡಿಸುತ್ತಿಲ್ಲ ಆದರೆ ಸದನದ ಮುಂದೆ ಈ ನಿಲುವಳಿಯನ್ನು ಕುರಿತು ಕೆಲವು ಮಾತುಗಳು ಹೇಳಲು ಇಷ್ಟಪಡುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಇನ್ನಾವ ತಿದ್ದುಪಡಿಯೂ ಇಲ್ಲ. ನಿರ್ಣಯ ಈಗ ಚರ್ಚೆಗೆ ಮುಕ್ತವಾಗಿದೆ. ತಾವು ಈಗ ಮಾತನಾಡಬಹುದು.

**ಶ್ರೀ ಟಿ.ಟಿ. ಕೃಷ್ಣಮಾಚಾರಿ :** ಮಾನ್ಯ ಸಭಾಧ್ಯಕ್ಷರೆ, ಡಾ. ಅಂಬೇಡ್ಕರ್ ಅವರು ಮಂಡಿಸಿದ ಈ ಪ್ರಸ್ತಾವವನ್ನು ಕುರಿತು ಹಾಗೂ ಶ್ರೀ ಮುನ್ಷಿಯವರ ತಿದ್ದುಪಡಿ ಮೇಲೆ ಮಾತನಾಡಿ ಕೆಲವು ಅಂಶಗಳ ಮೇಲೆ ವಿವರಣೆಯನ್ನು ಪಡೆಯುವುದು. ಏಕೆಂದರೆ ಈ ಪ್ರಸ್ತಾವಗಳ ವಿಷಯದಲ್ಲಿ ಗೊಂದಲಗಳಿರುವಂತೆ ಭಾಸವಾಗುತ್ತದೆ. ನಾನು ಸದನದ ಗಮನ ಸೆಳೆಯುತ್ತಿರುವ ಮೊದಲನೆಯ ಅಂಶ ಶ್ರೀ ಮುನ್ಷಿಯವರ ತಿದ್ದುಪಡಿಯ ಖಂಡ ೧ರ ಉಪಪ್ರಕರಣ (೪)ರ ಬಗೆಗಿದೆ. ಮುಖ್ಯ ಪ್ರಸ್ತಾವವನ್ನು ಮಂಡಿಸುವಲ್ಲಿ ಗೌರವಾನ್ವಿತ ಡಾ. ಅಂಬೇಡ್ಕರ್ ಒಂದು ಅಂಶದ ಬಗ್ಗೆ ಗಮನ ಸೆಳೆದಿದ್ದಾರೆ. ಅದೆಂದರೆ, ವರದಿಯು ಭಾರತ ಸರ್ಕಾರದ ಅಧಿನಿಯಮದ

ಪ್ರಕರಣ ೧೦ ಉಪಪ್ರಕರಣ (೨)ನ್ನು ಗಮನಕ್ಕೆ ತೆಗೆದುಕೊಂಡಿದೆ. ಹಾಗಾಗಿ ಈ ಸಂವಿಧಾನ ರಚನಾಸಭೆಯ ಸದಸ್ಯರಲ್ಲದ ಸರ್ಕಾರದ ಸದಸ್ಯರಿಗೆ ನಡವಳಿಗಳಲ್ಲಿ ಪಾಲ್ಗೊಳ್ಳಲು ಹಕ್ಕನ್ನು ಒದಗಿಸಿದೆ. ಇದನ್ನು ಪುನಃ ನಿರ್ಣಯದಲ್ಲಿ ಒತ್ತಿ ಹೇಳಲಾಗಿದೆ. ಅದನ್ನು ಮುಖ್ಯ ಪ್ರಸ್ತಾವವನ್ನು ಒಂದು ತಿದ್ದುಪಡಿಯಾಗಿ ಮಂಡಿಸಲಾಗಿದೆ. ಮಾನ್ಯರೆ, ಭಾರತ ಸರಕಾರದ ಅಧಿನಿಯಮದ ಪ್ರಕರಣ ೧೦ರ ಉಪಪ್ರಕರಣ (೨)ರಲ್ಲಿರುವ ಮಿತಿ ಎಂದರೆ ಸರ್ಕಾರದ ಆ ಸದಸ್ಯರು ಆ ಸ್ಥಾನದಲ್ಲಿ ಆರು ತಿಂಗಳು ಮಾತ್ರ ಮುಂದುವರಿಯಬಹುದೇ ಹೊರತು ಮತ್ತು ಅದಕ್ಕಿಂತ ಹೆಚ್ಚಿಲ್ಲ. ಆ ಅವಧಿಯಲ್ಲಿ ಅವರು ಸಂವಿಧಾನ ರಚನಾಸಭೆಯ ಸದಸ್ಯರಾಗಿ ಅರ್ಹತೆ ಪಡೆಯಬೇಕು ಎಂಬ ನಿಯಮವು ಪ್ರಸ್ತುತ ಸರ್ಕಾರದ ಸದಸ್ಯರಿಗೆ ಅನ್ವಯಿಸುತ್ತದೆಯೋ ಎಂದು ನಾನು ತಿಳಿಯಬಯಸುತ್ತೇನೆ. ಈ ಒಂದು ಅಂಶವನ್ನು ಡಾ. ಅಂಬೇಡ್ಕರ್ ಅವರಾಗಲೀ ಅಥವಾ ಶ್ರೀ ಮುನ್ಷಿಯವರಾಗಲಿ ಸ್ಪಷ್ಟಪಡಿಸಬೇಕೆಂದು ಇಚ್ಛಿಸುತ್ತೇನೆ.

ನಾನು ನಮೂದಿಸಲು ಇಷ್ಟಪಡುವ ಎರಡನೆಯ ಅಂಶವೆಂದರೆ ಪ್ರಭುತ್ವ ಶಾಸನಸಭೆಯ ಅಧ್ಯಕ್ಷತೆ ವಹಿಸಲು ಸಲಹೆ ಮಾಡಲಾಗಿರುವ ಅಧಿಕಾರಿಯ ಹುದ್ದೆಯ ಹೆಸರನ್ನು ಕುರಿತಾಗಿ ಇದೆ. ಭಾರತ ಸರಕಾರದ ಅಧಿನಿಯಮದ ಅಳವಡಿಕೆ ಮತ್ತು ಶ್ರೀ ಮುನ್ಷಿಯವರ ಹೇಳಿಕೆಗಳ ನಡುವೆ ಸ್ವಲ್ಪ ಗೊಂದಲವಿದೆ ಎಂದು ನನಗೆ ಅನಿಸುತ್ತದೆ. ಭಾರತ ಸರಕಾರದ ಅಧಿನಿಯಮದ ಅಳವಡಿಕೆ ಪ್ರಕರಣ ೨೨ರೊಂದಿಗೆ ತೀಕ್ಷ್ಣವಾಗಿ ವ್ಯವಹರಿಸುತ್ತಿದೆ. ಅದು ೧೯೩೫ರ ಅಧಿನಿಯಮದ ಅಡಿ ಶಾಸನಸಭೆಯ ಅಧ್ಯಕ್ಷತೆ ವಹಿಸುವ ಅಧಿಕಾರಿಗಳನ್ನು ಕುರಿತದ್ದಾಗಿದೆ. ಈ ವಿಭಾಗದ ಉಪಪ್ರಕರಣಗಳು (೧), (೨), (೩) ಮತ್ತು (೫)ನ್ನು ಕೈಬಿಟ್ಟಿದ್ದು ಉಪ ಪ್ರಕರಣ (೪) ತನ್ನ ಮೂಲರೂಪದಲ್ಲಿ ಹೀಗೆ ಇದೆ:

ಒಕ್ಕೂಟ ಶಾಸನ ಸಭೆಯ ಕಾಯಿದೆಯು ನಿರ್ಧರಿಸಿದ ಸಂಬಳಗಳನ್ನು ರಾಜ್ಯಗಳ ಪರಿಷತ್ತಿನ ಅಧ್ಯಕ್ಷ ಮತ್ತು ಉಪಾಧ್ಯಕ್ಷರಿಗೆ ಕೊಡತಕ್ಕದ್ದು ಮತ್ತು ಇಂತಹ ಕಾಯಿದೆಯನ್ನು ಮಾಡುವವರೆಗೆ ಅಂತಹ ವೇತನಗಳನ್ನು ಗವರ್ನರ್ ಜನರಲ್ ನಿರ್ಧರಿಸಬಹುದು. ಇದನ್ನು ಅಳವಡಿಸಿಕೊಳ್ಳುವಾಗ "ರಾಜ್ಯಗಳ ಪರಿಷತ್ತಿನ ಉಪಾಧ್ಯಕ್ಷರು" ಎಂಬುದಕ್ಕೆ ಬದಲಾಗಿ "ಪ್ರಭುತ್ವದ ಶಾಸನಸಭೆಯ" ಎಂಬುದನ್ನು ಆದೇಶಿಸಿಕೊಳ್ಳಬೇಕು ಎಂದು ಮಾತ್ರ ಉಪಪ್ರಕರಣ (೪)ರಲ್ಲಿ ಹೇಳಲಾಗಿದೆ. ಉಪಪ್ರಕರಣ (೪)ರ ಪ್ರಕಾರ, ಶಾಸನಸಭೆಯ ನಾಮಕರಣದ ವಿಷಯವನ್ನು ಹೊರತು ಪಡಿಸಿದರೆ, ಉಪಬಂಧದಲ್ಲಿ ಯಾವ ಹೆಚ್ಚಿನ ಬದಲಾವಣೆಯನ್ನು ಮಾಡಲಾಗಿಲ್ಲ. ಹೀಗೆಮಾಡುವಲ್ಲಿ ಭಾರತ ಸರಕಾರದ ಅಧಿನಿಯಮದ ಪ್ರಕರಣ ೨೨ ರಿಂದ "ಸ್ಪೀಕರ್" ಎಂಬ ಪದವನ್ನು ಕೈ ಬಿಡಲಾಗಿದೆ. ಅಂತಹ ಸಂದರ್ಭದಲ್ಲಿ, ಅದರ ಮುಂದಿನ ಪ್ರಕರಣ ೨೩ರಲ್ಲಿ ಅದೇ ಶಬ್ದವನ್ನು ಸೇರಿಸುವುದು ನ್ಯಾಯಯುತವಾಗಿ ಎಷ್ಟರ ಮಟ್ಟಿಗೆ ಸರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಅದ್ದರಿಂದ ಸ್ಪೀಕರ್ ಎನ್ನುವುದಕ್ಕೆ ಬದಲಾಗಿ ಮುಂದೇ ಅದಕ್ಕೆ ಯಾವುದೇ ಹೆಸರನ್ನು ನೀಡಿದರೂ, ಅಧ್ಯಕ್ಷತೆಯನ್ನು ವಹಿಸಿರುವ ಅಧಿಕಾರಿ, ಎಂಬುದು ಬಹುಶಃ ಸೂಕ್ತವಾಗುತ್ತದೆ.

ಮೂರನೆಯ ಅಂಶವೆಂದರೆ ಖಂಡ ೧ರ ಉಪಖಂಡ (೫)ರ ಬಗ್ಗೆ ಸ್ವಲ್ಪ ವಿವರಣೆಯನ್ನು ನಾನು ಬಯಸುತ್ತೇನೆ. ನಮ್ಮ ದೃಷ್ಟಿಕೋನದಿಂದ ಈ ಉಪಖಂಡದಲ್ಲಿನ ನಮ್ಮ ನಿಲುವು ಸರಿಯಾಗಿದೆ. ಏಕೆಂದರೆ ಇದು ಇದೊಂದು ಸಾರ್ವಭೌಮ ಸಂಸ್ಥೆಯಾಗಿರುವುದರಿಂದ, ಇದು ತನ್ನದೇ ಆದ ಕ್ರಮವನ್ನು ರೂಪಿಸಿ ತನ್ನದೇ ಸ್ವಂತ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಹಕ್ಕನ್ನು ಹೊಂದಿದೆ. ಅರ್ಹವುಳ್ಳ ಸ್ವತಂತ್ರ ಅಂಗವಾಗಿದೆ. ಆದರೆ ನಾವು ಭಾರತ ಸರ್ಕಾರದ ಅಧಿನಿಯಮದಡಿ ಕೆಲಸ ಮಾಡುತ್ತಿರುವವರೆಗೂ ಅಂದರೆ ಯಾವುದನ್ನು ನಾವು ಒಂದು ಶಾಸನ ಸಭೆಯಾಗಿ ಅಳವಡಿಸಿದ್ದೇವೆಯೋ ಅದನ್ನು ತುಸು ಮುಂದೆ ತೆಗೆದುಕೊಂಡು ಅದನ್ನು ಸಭೆ ಕರೆಯುವ ಮುಂದೂಡುವ ಅಧಿಕಾರವು ಗವರ್ನರ್ ಜನರಲ್ ಅವರಲ್ಲಿ ಇರಬಾರದು, ಅದು ಸಭಾಧ್ಯಕ್ಷರ ಹಕ್ಕಾಗಿರಬೇಕು ಎಂದು ಹೇಳುವಂತೆ ಏಕೆ ಮಾಡಬಾರದು? ಈ ವಿಧದ ಅಳವಡಿಕೆ ಮಾಡಲು

ಯಾವುದಾದರೂ ಕಾನೂನು ತಡೆಯುತ್ತದೆ ಎಂದು ನನಗನಿಸುವುದಿಲ್ಲ. ನಾನು ಆರಂಭದಲ್ಲಿ ಹೇಳಿದಂತೆ ನಾನು ತಿದ್ದಿಕೊಳ್ಳುವಿಕೆಗೆ ಮುಕ್ತ; ಆದರೆ ಒಂದು ಪ್ರಸ್ತಾವ ಮತ್ತು ಅದಕ್ಕೊಂದು ತಿದ್ದುಪಡಿಯನ್ನು ಮಂಡಿಸಿ ಅದರೆ ತಿದ್ದುಪಡಿಯ ಮಂಡನೆಕಾರರಿಂದ ಒಂದು ಸಮರ್ಥನೆಯನ್ನು ನೀಡುವ ಬದಲಿಗೆ ಪರಿಸ್ಥಿತಿಯನ್ನು ಸೂಕ್ತವಾದ ಶಾಸನದ ಕ್ರಮದಿಂದ ಸೂಕ್ತವಾಗಿ ಸರಿಪಡಿಸಬಹುದು. ನಾನು ಇಲ್ಲಿ ಶ್ರೀ ಮುನ್ಷಿಯವರನ್ನು ಕುರಿತು ಉಲ್ಲೇಖಿಸುತ್ತಿದ್ದೇನೆ.

ಮಾನ್ಯರೆ, ಇನ್ನೂ ಒಂದು ಅಂಶವನ್ನು ನಾನು ಇಲ್ಲಿ ನಮೂದಿಸಲು ಇಷ್ಟಪಡುತ್ತೇನೆ ಮತ್ತು ನಾನು ಸೂಚನೆ ಕೊಟ್ಟಿರುವ ತಿದ್ದುಪಡಿಗೆ ಇದು ಸಂಬಂಧಿಸಿದೆ. ನಾವು ಹಲವಾರು ಅಸಮಂಜಸತೆಗಳೊಂದಿಗೆ ವ್ಯವಹರಿಸುತ್ತಿದ್ದೇವೆ. ಏಕೆಂದರೆ ನಾವು ಈಗ ಇರುವ ಸ್ಥಿತಿ ನಮ್ಮ ಸ್ವಂತ ಸೃಷ್ಟಿಯಲ್ಲ. ಹಲವಾರು ಅಂಶಗಳು ನಮ್ಮ ದೇಶದ ರಾಜಕೀಯ ಸ್ಥಿತಿಯಲ್ಲಿನ ತೀವ್ರ ಬದಲಾವಣೆಗೆ ಕಾರಣವಾಗಿವೆ. ನಾವು ಸಾಧ್ಯವಾದಷ್ಟು ಉತ್ತಮವಾಗಿ ನಿರ್ವಹಿಸಬೇಕಿದೆ. ಈ ಸಂದರ್ಭಗಳಲ್ಲಿ ವ್ಯಕ್ತಿಗಳ ವಿಷಯಕ್ಕೆ ಹೋಗದೆ ಮಾನ್ಯರೆ, ಸಂವಿಧಾನ ರಚನಾ ಸಭೆಯ ಎರಡು ಕಾರ್ಯಗಳನ್ನು ಕುರಿತಂತೆ ಸಭಾಧ್ಯಕ್ಷತೆ ವಹಿಸುವ ಅಧಿಕಾರಿಗಳ ಕ್ರಿಯಾವಲಯವನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸುವುದು ಉತ್ತಮ ಎಂದು ಭಾವಿಸುತ್ತೇನೆ. ಆದುದರಿಂದಲೇ ನಾನು ಶ್ರೀ ಮುನ್ಷಿಯವರು ಸಮಿತಿಯ ವರದಿಯ ಕಂಡಿಕೆ ೬ರಲ್ಲಿ ಆ ಶಬ್ದಗಳನ್ನು ತಮ್ಮ ತಿದ್ದುಪಡಿಯಲ್ಲಿ ಉಳಿಸಿಕೊಳ್ಳಬೇಕಾಗಿತ್ತು ಎಂದು ಬಯಸುತ್ತೇನೆ ಮತ್ತು ಸಭೆಯು ಎರಡು ವಿಧಗಳ ವ್ಯವಹಾರಗಳನ್ನು ನಡೆಸುವುದಾದರೂ ಸಂವಿಧಾನದ ರಚನಾಸಭೆ ಒಂದೇ ಮತ್ತು ಅದು ಒಬ್ಬರೇ ಸಭಾಧ್ಯಕ್ಷರನ್ನು ಹೊಂದಿರಬೇಕು ಮತ್ತು ಸಭಾಧ್ಯಕ್ಷರು ಅದರ ಪ್ರಮುಖ ಮುಖ್ಯಸ್ಥರಾಗಿ ಆಡಳಿತಾತ್ಮಕ ಕರ್ತವ್ಯ ಹಾಗೂ ಅದರ ಆಗುಹೋಗುಗಳ ಪರಿಶೀಲನೆಯ ಕರ್ತವ್ಯ ಹೀಗೆ ಎರಡೂ ಕರ್ತವ್ಯಗಳನ್ನು ನಿಭಾಯಿಸತಕ್ಕದ್ದು ಎಂದು ಸ್ಪಷ್ಟವಾಗಿ ಹೇಳಲಾಗಿದೆ ಎಂದು ಹೇಳಬಯಸುತ್ತೇನೆ. ಸಭಾಧ್ಯಕ್ಷರ ಈ ಕೆಲಸಗಳ ನಿರ್ದಿಷ್ಟ ಸ್ಪಷ್ಟ ಮತ್ತು ನಿಖರ ಖಚಿತ ನಿರೂಪಣೆ ಮತ್ತು ತತ್ಫಲವಾಗಿ ಸಭಾಧ್ಯಕ್ಷರು ಅಥವಾ ಸದನ ನೇಮಕ ಮಾಡುವ ಯಾವುದೇ ಅಧಿಕಾರಿಯ ಕೆಲಸಗಳ ಇತಿಮಿತಿ ರಹಿತಗೊಳಿಸುವಲ್ಲಿ ಯಾರ ಕೈಲೂ ಹೆಚ್ಚು ಅಧಿಕಾರವನ್ನು ಹಾಕಲು ಪ್ರಯತ್ನಿಸುವುದಾಗಲೀ ಅಥವಾ ಯಾರದೇ ಅಧಿಕಾರವನ್ನು ಕಿತ್ತುಕೊಳ್ಳುವುದಾಗಲೀ ನನ್ನ ಉದ್ದೇಶವಲ್ಲ ಎಂಬುದನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಏನೆಂದರೆ ನಾವು ಯಾವ ನಿಯಂತ್ರಣವೂ ಇಲ್ಲದ ಸಂದರ್ಭಗಳೊಂದಿಗೆ ವ್ಯವಹರಿಸುವಾಗ ನಾವು ಸಾಧ್ಯವಾದಷ್ಟು ಉತ್ತಮವಾಗಿ ನಮ್ಮ ಕರ್ತವ್ಯಗಳನ್ನು ಮುಂದುವರಿಸಲು ಪ್ರಯತ್ನಿಸುತ್ತಿದ್ದೇನೆ. ನಾವು ಇಲ್ಲಿ ಒಂದು ನಿಖರ ವ್ಯಾಖ್ಯೆ ಹೊಂದಿರಬೇಕಾದು ಅತ್ಯವಶ್ಯ. ಏನೇ ಆಗಲಿ ಯಾವುದೇ ಸಂದರ್ಭದಲ್ಲಿ ಅಕಸ್ಮಾತ್ತಾಗಿ ಯಾವುದೇ ಗೊಂದಲವಿದ್ದರೂ ಮುಂದೆ ಯಾರು ಪರಮೋಚ್ಚ ಅಧಿಕಾರ ಉಳ್ಳವರು ಎಂದು ನಿಖರವಾಗಿ ತಿಳಿಯುತ್ತದೆ. ಶ್ರೀ ಮುನ್ಷಿಯವರು ಈ ಕಲ್ಪನೆಯನ್ನು ತಮ್ಮ ತಿದ್ದುಪಡಿಯಲ್ಲಿ ಕೊಟ್ಟಿದ್ದಾರೆ. ಸಮಿತಿಯ ವರದಿಯಲ್ಲಿ ಶಬ್ದವಿನ್ಯಾಸವು ಪರಮೋಚ್ಚವಾಗಿದ್ದು ಅದನ್ನು ಮಂಡಿಸಲಾಗಿರುವ ತಿದ್ದುಪಡಿಯ ನಿರ್ಣಯದಿಂದ ಸಹ ಬದಲಾಯಿಸಲು ಆಗುವುದಿಲ್ಲ ಎಂದು ಮಂಡನೆಕಾರರು ಸ್ವೀಕರಿಸಿದರೆ ನಮ್ಮ ಉದ್ದೇಶಕ್ಕೆ ಅಷ್ಟು ಸಾಕು. ಆ ಭರವಸೆಯ ಉದ್ದೇಶ ಈಡೇರಿಸುತ್ತದೆ ಎಂದು ನಾನು ತಿಳಿದಿದ್ದೇನೆ. ಅದೂ ಅಲ್ಲದೆ ನಮ್ಮ ಮುಂದೆ ಕೇವಲ ಆರು ಅಥವಾ ಎಂಟು ತಿಂಗಳುಗಳು ಉಳಿದಿರಬಹುದು. ಅಲ್ಲಿಂದಾಚೆಗೆ ಈ ಸಂವಿಧಾನ ರಚನಾಸಭೆಯು ಹೊಸ ಸಂವಿಧಾನ ಕಾರ್ಯಾಚರಣೆಗೆ ಬರುವವರೆಗೆ ಪ್ರಭುತ್ವ ಶಾಸನಸಭೆಯಾಗಿ ತತ್ತ್ವಶಃ ಕೆಲಸ ಮಾಡುತ್ತದೆ ಮತ್ತು ಆಗ ಸಭಾಧ್ಯಕ್ಷತೆ ವಹಿಸುವ ಅಧಿಕಾರಿಯ ಸ್ಥಾನಮಾನ ಮತ್ತು ಅಧಿಕಾರಗಳಲ್ಲಿ ಕೂಡ ಇತರ ಬದಲಾವಣೆಗಳು ಇರಬಹುದು. ಆದರೆ ಈ ಸಮಯದಲ್ಲಿ ಅವರ ಚಟುವಟಿಕೆಗಳ ವಲಯದ ನಿಖರ ವ್ಯಾಖ್ಯೆಯನ್ನು ಮಾಡಬೇಕು. ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಸದನದ ಅನುಮತಿಯೊಂದಿಗೆ ಕೆಲವು ಅಧಿಕಾರಗಳನ್ನು ಇನ್ನೊಬ್ಬ ವ್ಯಕ್ತಿಗೆ ಬಿಟ್ಟುಕೊಡಬಹುದು ಎಂಬ ಅಂಶವನ್ನು ಅಲ್ಲಿ ಸೇರಿಸಿದ್ದರೂ

ಸದನದ ಆಡಳಿತಾತ್ಮಕ ಮತ್ತು ಚರ್ಚೆಗಳ ವಿಭಾಗಗಳು ಈ ಎರಡರ ಬಗೆಗೆ ಅವರು ಪರಮೋಚ್ಚ ಮುಖ್ಯಸ್ಥವಾಗಿಯೇ ಉಳಿಯುತ್ತಾರೆ. ಇದು ಸದಸ್ಯರ ಮನಸ್ಸಿನಲ್ಲಿರುವ ಆತಂಕ ಮತ್ತು ಅನುಮಾನಗಳನ್ನು ಹೋಗಲಾಡಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಡಾ. ಅಂಬೇಡ್ಕರ್ ಅಥವಾ ಶ್ರೀ ಮುನ್ಷಿಯವರು ನಾನು ಶ್ರೀ ಮುನ್ಷಿಯವರ ತಿದ್ದುಪಡಿಯ ಖಂಡ ೧ರಲ್ಲಿರುವ (೪) ಮತ್ತು (೬)ರ ವಿಷಯಗಳ ಬಗೆಗೆ ಸ್ಪಷ್ಟನೆಗೆ ನೀಡುವರೆಂದು ಆಶಿಸುತ್ತೇನೆ.

**ಶ್ರೀ ಡಿ.ಎಚ್. ಚಂದ್ರಶೇಖರಯ್ಯ** (ಮೈಸೂರು ರಾಜ್ಯ) : ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ಕ್ರಿಯಾಲೋಪ ಕುರಿತು ಹೇಳುತ್ತೇನೆ. ಅದೇನೆಂದರೆ ಈ ಸದನದ ಮುಂದೆ ಯಾವುದಾದರೂ ಒಂದು ವರದಿಯನ್ನು ಪರಿಗಣನೆಗೆಂದು ಮಂಡಿಸಿದಾಗ ಅದರ ಪ್ರಸ್ತಾವವನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ವರದಿಯನ್ನು ಪರಿಗಣಿಸಿದ ನಂತರ ಸದನದ ನಿರ್ಧಾರವನ್ನು ಪ್ರಸ್ತಾವದ ಮೇಲೆ ತೆಗೆದುಕೊಳ್ಳಲಾಗುತ್ತದೆ ಮತ್ತು ಬಳಿಕ ಖಂಡಗಳನ್ನು ಒಂದರ ಅನಂತರ ಒಂದು ತೆಗೆದುಕೊಳ್ಳಲಾಗುತ್ತದೆ. ಈಗ ಆಗಿರುವುದೆಂದರೆ ಪ್ರಸ್ತಾವ ನಿರ್ಧಾರವಾಗದೆ ಉಳಿದಿದೆ ಮತ್ತು ಸದಸ್ಯರಿಗೆ ತಮ್ಮ ತಿದ್ದುಪಡಿಗಳನ್ನು ಮಂಡಿಸಲು ಅನುಮತಿ ನೀಡಲಾಗಿದೆ ಮತ್ತು ಶ್ರೀ ಕೆ.ಎಮ್. ಮುನ್ಷಿ ಅವರು ಮಂಡಿಸಿದ ತಿದ್ದುಪಡಿಯೂ ಕೂಡ ಸ್ವರೂಪದಲ್ಲಿ ಜಟಿಲವಾಗಿದ್ದು ಎಲ್ಲವನ್ನೂ ಒಟ್ಟಿಗೆ ಚರ್ಚಿಸಲು ಸದಸ್ಯರಿಗೆ ಕಷ್ಟವೇ ಆಗುವಂಥ ಹಲವು ಅಂಶಗಳನ್ನೊಳಗೊಂಡಿರುತ್ತದೆ. ನಾನು ಸಲಹೆ ಮಾಡಲಿರುವುದೆಂದರೆ ಮೊದಲು ಗೌರವಾನ್ವಿತ ಡಾ. ಅಂಬೇಡ್ಕರ್ ಅವರು ಮಂಡಿಸಿದ ಪ್ರಸ್ತಾವದ ಮೇಲೆ ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು ಮತ್ತು ಬಳಿಕ ಶ್ರೀ ಮುನ್ಷಿಯವರ ತಿದ್ದುಪಡಿಯಲ್ಲಿರುವ ಅಂಶಗಳನ್ನು ಒಂದೊಂದಾಗಿ ಪ್ರತ್ಯೇಕವಾಗಿ ಚರ್ಚೆಗೆ ತೆಗೆದುಕೊಂಡು ನಿರ್ಣಯವನ್ನು ತೆಗೆದುಕೊಳ್ಳಬಹುದು. ಇದು ನನ್ನ ಕ್ರಿಯಾಲೋಪ.

**ಮಾನ್ಯ ಸಭಾಧ್ಯಕ್ಷರು :** ಈಗ ಎತ್ತಿ ಹೇಳಲಾದ ಕ್ರಮ ಬದ್ಧತೆಯ ವಿಚಾರವನ್ನು ಆರಂಭದ ಹಂತದಲ್ಲೇ ಎತ್ತಿಕೊಂಡು ಪರಿಶೀಲಿಸಲಾಗಿದೆ ಎಂದು ನನಗನಿಸುತ್ತದೆ ಮತ್ತು ಆ ಸಮಯದಲ್ಲಿ ಅದು ಅನುಪಯುಕ್ತವೆಂಬುದು ಸದನದ ಅಭಿಪ್ರಾಯವಾಗಿತ್ತು. ಆದರೆ ಈ ಎರಡು ಚರ್ಚೆಗಳನ್ನು ಹೊಂದಿರುವುದರಿಂದ ಅಂದರೆ, ವರದಿಯ ಪರಿಗಣನೆಯನ್ನು ಕುರಿತ ಪ್ರಸ್ತಾವವು ಒಂದು ಮತ್ತು ಇನ್ನೊಂದು ವಿವರಗಳೊಂದಿಗೆ ವ್ಯವಹರಿಸುವ ಶ್ರೀ ಮುನ್ಷಿಯವರ ನಿರ್ಣಯ ಮತ್ತು ಆದುದರಿಂದ ನಾನು ಎರಡನ್ನೂ ಒಟ್ಟಿಗೆ ತೆಗೆದುಕೊಳ್ಳಲು ಅವಕಾಶ ಮಾಡಿದೆ. ಎರಡು ಈಗ ಚರ್ಚಿಸಲ್ಪಡುತ್ತಿವೆ ಮತ್ತು ಸದಸ್ಯರು ಮಂಡಿಸಲಾದ ನಿರ್ಣಯದ ಮೇಲೆ ಮಾತನಾಡುವ ಸ್ವಾತಂತ್ರ್ಯವಿದೆ. ಅಲ್ಲಿ ವರದಿಯು ಒಳಗೊಂಡಿರುವ ವಿವರಗಳನ್ನು ನೀಡಲಾಗಿದೆ.

**ಡಾ. ಪಿ.ಎಸ್. ದೇಶ್‌ಮುಖ್ :** ಮಾನ್ಯ ಸಭಾಧ್ಯಕ್ಷರೆ, ನನಗೆ ಮೊದಲು ಮಾತನಾಡಿದ ಶ್ರೀ ಕೃಷ್ಣಮಾಚಾರಿಯವರು ಈಗಾಗಲೇ ವಿವರಿಸಿದ ವರದಿ ಮಂಡನೆಯಿಂದ ಉಂಟಾದ ಪ್ರಸಕ್ತ ಸನ್ನಿವೇಶವನ್ನು ಮತ್ತು ವರದಿಯ ಮೇಲೆ ಪ್ರಸ್ತಾವಿಸಿದ ಪ್ರಸ್ತಾವಗಳನ್ನು ವಿವರಿಸಲು ಹೋಗುವುದಿಲ್ಲ. ಆದರೆ ಮಾನ್ಯರೆ, ನಾನು ಈ ವರದಿಯು ತುಂಬ ತೃಪ್ತಿಕರವಾಗಿದೆ ಎಂದು ಪರಿಗಣಿಸುವುದಿಲ್ಲ ಎಂದು ಹೇಳಲೇಬೇಕಿದೆ. ವರದಿಯ ಒಳಗೇನಿದೆ ಎಂಬುದರ ಬಗ್ಗೆ ನಾವು ವಿಶ್ಲೇಷಿಸಿದರೆ, ಬಹಳಷ್ಟು ಅಲ್ಲದಿದ್ದರೂ ಕೆಲವು ಸದಸ್ಯರಾದರೂ ವರದಿಯು ಯಾವುದು ಹೆಚ್ಚು ಸುಲಭಗ್ರಾಹ್ಯವೋ ಅಥವಾ ಯಾರಿಗೇ ಆಗಲಿ ಕೇವಲ ಸಾಮಾನ್ಯ ಜ್ಞಾನವೆಂದು ತೋರುತ್ತದೆಯೋ ಅಷ್ಟನ್ನು ಮಾತ್ರ ಹೇಳುತ್ತದೆ ಎಂಬ ಅಭಿಪ್ರಾಯದಲ್ಲಿ ನನ್ನೊಂದಿಗೆ ಸಹಮತವನ್ನು ಹೊಂದಿದ್ದಾರೆ. ಎರಡನೆಯದಾಗಿ ವರದಿ ಕೆಲವು ಪರ್ಯಾಯ ಪ್ರಸ್ತಾವಗಳನ್ನು ಒಳಗೊಂಡಿದೆ. ಉದಾಹರಣೆಗೆ ಅದು ನೀವು ಇಚ್ಛಿಸಿದಂತೆ ಒಬ್ಬರು ಅಥವಾ ಇಬ್ಬರು ಸಭಾಧ್ಯಕ್ಷರನ್ನು ಹೊಂದಿರಬಹುದು ಎಂದು ಹೇಳುತ್ತದೆ. ಈ ಪರ್ಯಾಯವನ್ನು ಹೇಳುವುದರಿಂದ ಯಾವ ಉಪಯೋಗವೂ ಇಲ್ಲ ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ನಾವು ಅಂತಹ ಸಮಿತಿಯಿಂದ ಅದು ಮಾಡಬೇಕಾದುದು ಏನೆಂದು ನಿರೀಕ್ಷಿಸುತ್ತೇವೆ ಎಂದರೆ ಅದು ಸೂಕ್ತ

ಮಾರ್ಗದರ್ಶನವನ್ನು ನಮಗೆ ನೀಡಬೇಕು. ಡಾ. ಅಂಬೇಡ್ಕರ್ ಅವರು ಹೇಳಿರುವುದು ಸ್ಪಷ್ಟ. ಅವು ಸದನಕ್ಕೆ ಯಾವುದು ಕಾನೂನುಬದ್ಧ ಮತ್ತು ಸಾಂವಿಧಾನಿಕ ಎಂದು ನಿರ್ದೇಶನ ಕೊಡುವ ಬದಲು ಹೆಚ್ಚು ತಾರ್ಕಿಕತೆ ಮತ್ತು ರಾಜಕೀಯ ದೃಷ್ಟಿಯ ಮೇಲೆ ಅವಲಂಬಿಸಿವೆ. ರಾಜ್ಯಗಳ ಪ್ರತಿನಿಧಿಗಳನ್ನು ಕುರಿತಂತೆ ಇರುವ ಶಿಫಾರಸನ್ನು ಉಲ್ಲೇಖಿಸುತ್ತೇನೆ. ರಾಜ್ಯಗಳ ಪ್ರತಿನಿಧಿಗಳು ಆಡಳಿತಗಾರರ ಪರವಾಗಿಯೋ ಎಂಬುದನ್ನು ಕುರಿತು ಬಂದಿರುವರೊ ಅಥವಾ ಜನರ ಪರವಾಗಿ. ನಾವು ಅವರೊಂದಿಗೆ ಯಾವ ಆಕ್ಷೇಪವನ್ನೂ ಮಾಡುತ್ತಿಲ್ಲ ಎಂಬುದು ನೆನಪಿನಲ್ಲಿರಲಿ. ನಾನು ಅವರನ್ನು ಸ್ವಾಗತಿಸುತ್ತೇನೆ; ನಾನು ಅವರು ತಮ್ಮೊಂದಿಗೆ ಸಂಪೂರ್ಣವಾಗಿ ಅಭಿನ್ನರಾಗಿದ್ದಾರೆ ಎಂದು ಹೇಳಲು ಇಷ್ಟಪಡುತ್ತೇನೆ ಮತ್ತು ಅವರು ಎಲ್ಲ ಸವಲತ್ತುಗಳು ಹೊಂದಿರುತ್ತಾರೆ ಭಾರತದ ಇತರ ಭಾಗಗಳಿಂದ ಬಂದಿರುವ ನಮ್ಮಂತೆಯೇ ಅವರು ಎಲ್ಲ ಹಕ್ಕುಗಳನ್ನು ಹೊಂದಿದ್ದಾರೆ. ಆದರೆ ಅದೇನೇ ಇದ್ದರೂ ರಾಜ್ಯಗಳಿಂದ ಬರುವ ಈ ವ್ಯಕ್ತಿಗಳ ಹಕ್ಕುಗಳನ್ನು ಚಲಾಯಿಸುವ ಹಾಗೂ ಈ ಸದನದಲ್ಲಿ ಕುಳಿತುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಯಾವ ಕಾನೂನು ಸ್ಥಿತಿ ಇತ್ತು ಎಂಬುದನ್ನು ಹೇಳುವುದು ಸಮಿತಿಯ ಕರ್ತವ್ಯ ಎಂದು ನಾನು ನಂಬಿದ್ದೇನೆ. ನಮಗೆ ಯಾವುದು ತಾರ್ಕಿಕ ಮತ್ತು ರಾಜಕೀಯವಾಗಿತ್ತು ಎಂದು ಹೇಳುವ ಆವಶ್ಯಕತೆ ಇಲ್ಲ. ನಾನು ಆ ಯುಕ್ತಾಯುಕ್ತತೆಯನ್ನು ನಾವೇ ಚಲಾಯಿಸಬಹುದು ಮತ್ತು ಚಲಾಯಿಸತಕ್ಕದ್ದು. ನಾವು ವಾಸ್ತವವಾಗಿ ಬಯಸಿದ ನಿರ್ದೇಶನವೆಂದರೆ ಯಾವುದು ಸಾಂವಿಧಾನಿಕ ಮತ್ತು ಯಾವುದು ಕಾನೂನುಬದ್ಧ ಎಂಬುದು. ಕಡೆಯಲ್ಲಿ ಅವರ ಪ್ರಸ್ತಾವದ ಲಕ್ಷಣ ಕುರಿತು ಒಂದೆರಡು ವಾಕ್ಯಗಳು ಇದ್ದಿರಬಹುದು. ಹಾಗೂ ನಾನು ಅದನ್ನು ಸ್ಪಷ್ಟಪಡಿಸಬೇಕು. ಅಂದರೆ ಸಮಿತಿಯು ಯಾವುದೇ ನಿರ್ದಿಷ್ಟ ಸದಸ್ಯನನ್ನು ಅಸಂತುಷ್ಟಿಗೊಳಿಸಬಾರದು ಮತ್ತು ತತ್ರಾಪಿ ಡಾ. ಅಂಬೇಡ್ಕರಿಗೆ ಅಪಮಾನವಾಗಬಾರದು. ಆದರೆ ಈ ಸದನದಲ್ಲಿ ನಾನು ಈ ನಿರ್ದಿಷ್ಟ ವರದಿಯನ್ನು ಟೀಕಿಸಿದ ಹಾಗೆಯೇ ನಮ್ಮ ಸಮಿತಿಗಳಲ್ಲಿ ಹಲವು ಸಮಿತಿಗಳು ಮಾಡಿರುವ ಕೆಲಸವನ್ನು ಟೀಕಿಸಿರುವ ಸದಸ್ಯರು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಈ ಕಾರಣದಿಂದಾಗಿ ಕೆಲವು ಸಮಿತಿಗಳಿಂದ ಕಾಲಕಾಲಕ್ಕೆ ನಾವು ಪಡೆದ ಕೆಲವು ವರದಿಗಳಿಂದ ಅವರು ತೃಪ್ತರಾಗಿಲ್ಲ.

ಹಾಗಿದ್ದೂ ಮಾನ್ಯರೆ, ವರದಿಯನ್ನು ಪರಿಗಣಿಸಲು ನಮಗೆ ತಾವು ಹೆಚ್ಚು ಸಮಯ ಕೊಡುತ್ತೀರೆಂದು ಇಲ್ಲವೇ ಮತ್ತಷ್ಟು ಆಳವಾಗಿ ಪರಿಗಣಿಸಲು ಅದೇ ಸಮಿತಿಗೆ ಈ ವರದಿಯನ್ನು ಹಿಂದಕ್ಕೆ ಕಳುಹಿಸುತ್ತೀರಿ ಎಂದು ನಂಬುವುದು ವ್ಯರ್ಥವೇ ಸರಿ. ಎಂದೂ ಅಂತಹ ನಿರೀಕ್ಷೆ ಅತಿಯಾಗಬಹುದು ಎಂದು ನಾನು ರಾಜಕೀಯದಲ್ಲಿ ಮತ್ತು ಶಾಸನ ಸಭೆಗಳಲ್ಲಿ ತುಂಬ ಕಾಲದಿಂದ ಇರುವ ಕಾರಣದಿಂದ ವಿವೇಕಿಗಳ ಸಲಹೆಗೆ ಬೆಲೆ ಇರುವುದಿಲ್ಲವೆಂಬುದನ್ನು ಬಲ್ಲೆ. ಆದುದರಿಂದ ನಾನು ಸಮಿತಿಯ ವರದಿಯನ್ನು ನಿರಾಕರಿಸಬೇಕು ಇಲ್ಲವೆ ಹಿಂದಕ್ಕೆ ಕಳುಹಿಸಬೇಕು ಎಂದು ಕೇಳಿಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಗಮನಕ್ಕೆ ತರುವ ವಿಷಯವೆಂದರೆ ನಮ್ಮ ಮುಂದೆ ಏನಿದೆಯೋ ಅದು ತೃಪ್ತಿಕರವಲ್ಲ ಎಂಬುದಷ್ಟೆ. ನಮ್ಮನ್ನು ಯಾವ ಮಾರ್ಗಗಳಲ್ಲಿ ನಿರ್ದೇಶಿಸಬೇಕಿತ್ತೊ ಆ ಮಾರ್ಗಗಳಲ್ಲಿ ದಿಗ್ದರ್ಶಿಸಿಲ್ಲ. ಹಾಗಾಗಿ ಇಡೀ ಸನ್ನಿವೇಶ ತುಂಬ ಅತೃಪ್ತಿಕರ. ನಾನು ಕೇವಲ ಒಂದೆರಡು ಅಂಶಗಳನ್ನು ತೆಗೆದುಕೊಳ್ಳುತ್ತೇನೆ. ಶ್ರೀ ಕೃಷ್ಣಮಾಚಾರಿಯವರು ತುಂಬ ಸಮರ್ಪಕವಾದ ಭಾಷಣ ಮಾಡಿದ್ದಾರೆ ಮತ್ತು ಶ್ರೀ ಮುನ್ಷಿಯವರು ಮಂಡಿಸಿದ ನಿರ್ಣಯದಲ್ಲಿನ ಕೆಲವು ಅತ್ಯಂತ ಮುಖ್ಯವಾದ ದೋಷಗಳನ್ನು ಎತ್ತಿ ಹೇಳಿದ್ದಾರೆ ಎಂಬುದಕ್ಕೆ ನಾನು ಹರ್ಷಿಸುತ್ತೇನೆ. ನಮ್ಮ ಪರೋಕ್ಷದಲ್ಲಿ ಮಾಡಿರುವ ಅಳವಡಿಕೆಗಳ ಫಲಿತಾಂಶವೇನೆಂಬುದರ ಬಗ್ಗೆ ಈ ಸದಸ್ಯರು ಕಾಳಜಿ ವಹಿಸಬೇಕಾಗಿದ್ದದ್ದು ಮುಖ್ಯವಾಗಿತ್ತು. ಮಾಡಲಾದ ಕೇವಲ ಒಂದು ಇಲ್ಲವೆ ಎರಡು ಮಾರ್ಪಾಡುಗಳ ಉಲ್ಲೇಖವಿದೆ. ಆದರೆ ಅವೆಲ್ಲವನ್ನೂ ಆಕ್ಷೇಪಿಸಿ ಫಲವಿಲ್ಲ. ಆಗಬೇಕಾದದ್ದು ಆಗಿದೆ. ಭಾರತ ಸರಕಾರದ ಅಧಿನಿಯಮವನ್ನು ನಾವು ಹೊಂದಾಣಿಕೆಗಾಗಿ ಮಾರ್ಪಡಿಸಿದ್ದೇವೆ. ಅಧಿನಿಯಮವನ್ನು ನಾವು ಹೊಂದಿದ್ದೇವೆ. ಯಾರ ಅನುಕೂಲಕ್ಕಾಗಿ ಅಥವಾ ಯಾರ ಬುದ್ಧಿವಂತಿಕೆ ಮತ್ತು ಆದೇಶಕ್ಕನುಗುಣವಾಗಿ ಮಾಡಲಾಯಿತು ಎಂಬುದನ್ನು ದೇವರೇ ಬಲ್ಲ. ಆದರೆ ನಮ್ಮ

ಮುಂದೆ ಕೆಲವು ಸಿದ್ಧ ನಿರ್ಧಾರಗಳಿವೆ ಮತ್ತು ನಾವು ಈ ವರದಿಯ ಮತ್ತು ನಿರ್ಣಯದ ಮೂಲಕ ಕೆಲವು ಜಾಗಗಳಲ್ಲಿ ಭಾರತ ಸರ್ಕಾರದ ಅಧಿನಿಯಮವನ್ನು ದುರಸ್ತಿ ಮಾಡಲು ಯತ್ನಿಸುತ್ತಿದ್ದೇವೆ. ನಮ್ಮ ಬಳಿ ಕಡೇಪಕ್ಷ ಎರಡು ನಿರ್ದಿಷ್ಟ ವಿಷಯಗಳಿವೆ. ನಮಗೆ ಒಂದು ಶಾಸನ ಸಭೆಯ ಅಧಿಕಾರಗಳನ್ನು ಕೊಟ್ಟಿದ್ದರೂ ಮತ್ತು ಪ್ರಭುತ್ವ ಶಾಸನ ಸಭೆ ಎಂದು ಕರೆದಿದ್ದರೂ ೧೯೩೫ರ ಅಧಿನಿಯಮದ ಅಳವಡಿಕೆಕಾರರು ಸ್ಪೀಕರ್ ಚುನಾವಣೆಗೆ ಸಂಬಂಧಿಸಿದ ವಿಭಾಗವನ್ನು ಕೈಬಿಟ್ಟು ಸ್ಪೀಕರ್ ಪದವಿಯನ್ನು ತೆಗೆದಿರುವರು. ಎರಡನೆಯದಾಗಿ ವಿವಿಧ ಪ್ರಾಂತ್ಯಗಳ ಶಾಸಕರು ಶಾಸನಸಭೆ ಮತ್ತು ಸಂವಿಧಾನ ರಚನಾಸಭೆಯ ಪೂರ್ಣಪ್ರಮಾಣದ ಸದಸ್ಯರಾಗಿ ಇಲ್ಲಿ ಕುಳಿತುಕೊಳ್ಳಬೇಕೆ ಅಥವಾ ಬೇಡವೆ ಎಂಬ ಪ್ರಶ್ನೆಯನ್ನು ಕುರಿತು ನಾವೆಲ್ಲ ತಲ್ಲಣಗೊಂಡಿದ್ದೇವೆ. ಪರಿಸ್ಥಿತಿ ಏನೆಂದರೆ, ಒಬ್ಬ ವ್ಯಕ್ತಿಯನ್ನು ಎರಡು ಶಾಸನಸಭೆಗಳ ಸದಸ್ಯನಾಗಿರಲು ತಡೆಯುವುದಾಗಿಯೂ ೧೯೩೫ರ ಭಾರತ ಸರಕಾರದ ಅಧಿನಿಯಮದ ಪ್ರಕರಣ ತೆಗೆದು ಹಾಕಲಾಗಿದೆ ಮತ್ತು ಈ ಸದನದ ಮೇಲೆ ಅದನ್ನು ಹೇರಲಾಗಿದೆ. ಅದರೊಂದಿಗೆ ನಮ್ಮ ಕಲಹವೇನಿಲ್ಲ. ನಾವು ಕೆಲಸ ಮುಂದುವರಿಯುವುದನ್ನು ಬಯಸುತ್ತೇವೆ. ನಾನು ಈ ಅಂಶವನ್ನು ಪರಿಸ್ಥಿತಿಯು ಅತೃಪ್ತಿಕರ ಎಂದು ತೋರಿಸುವುದಕ್ಕಾಗಿಯಷ್ಟೆ ನಮೂದಿಸುತ್ತಿದ್ದೇನೆ. ನಾನು ಪ್ರಕರಣಗಳನ್ನು ಬದಲಾಯಿಸುವ ಅಥವಾ ಮಾರ್ಪಡಿಸುವ ಯಾರ ಹಕ್ಕನ್ನೂ ಪ್ರಶ್ನಿಸುವುದಿಲ್ಲ. ಆದರೆ ಇಡೀ ಸನ್ನಿವೇಶ ಸಾಕಷ್ಟು ಸ್ಪಷ್ಟವಾಗಿಲ್ಲ ಮತ್ತು ಯಾವುದೇ ನಿರ್ದಿಷ್ಟ ವಿಷಯ ಕುರಿತಂತೆ ಸ್ಪಷ್ಟತೆಯನ್ನು ಹೊಂದಲು ಸದಸ್ಯರಿಗೆ ನೆರವಾಗುವ ಅಂತಹ ಸ್ವರೂಪದ್ದೂ ಅಲ್ಲ. ಅಲ್ಲದೆ ವಿಷಯಗಳು ಪ್ರಸ್ತಾವವಾದಾಗ ಮತ್ತು ನಿರ್ಣಯಗಳ ಮಂಡನೆಯಾದಾಗ ಅದು ಯಾವ ಸ್ಥಿತಿಯಲ್ಲೇ ಇರಲಿ ನಾವು ಬೆಂಬಲಿಸಬೇಕು ಮತ್ತು ನಾವು ನಿರ್ಣಯವನ್ನು ತೆಗೆದುಕೊಳ್ಳಲು ಮತ್ತು ಸಂವಿಧಾನ ಸಿದ್ಧಪಡಿಸಲು ಕಾತರರಾಗಿದ್ದೇವೆ. ಅದು ಯಾವ ಕಲಸುಮೇಲೋಗರದ ಅಥವಾ ಅತೃಪ್ತಿಕರ ಸ್ಥಿತಿಯಲ್ಲಿದೆ ಎಂದು ನೋಡಲು ಬಯಸುವುದಿಲ್ಲ. ಅದೇ ಸಮಯಕ್ಕೆ ನಾನಾದರೂ ನನ್ನ ಟೀಕೆಯ ಮೂಲಕ ಸೂಚಿಸಬಯಸಿರುವುದೇನೆಂದರೆ ಒಂದು ಬಹಳ ಸಂತೋಷದ ಸನ್ನಿವೇಶವೇನಲ್ಲ ತಮಗೆ ಅಥವಾ ನಿರ್ಣಯದ ಮಂಡನೆಕಾರರಿಗೆ ಅಥವಾ ತಿದ್ದುಪಡಿಯ ಮಂಡನೆಕಾರರಿಗೆ ಸಾಧ್ಯವಾದರೆ ನಮ್ಮ ಬೇಗುದಿಗಳನ್ನು ಗಮನಿಸಲು ಮತ್ತು ಕಡೆಪಕ್ಷ ಅವುಗಳನ್ನು ಭಾಗಶಃ ಸರಿಪಡಿಸಿ. ನಾನು ಆಭಾರಿಯಾಗಿರುತ್ತೇನೆ ಮತ್ತು ಸದನದ ಹಲವು ಇತರ ಸದಸ್ಯರು ಕೂಡ ಆಭಾರಿಯಾಗಿಸುತ್ತಾರೆ ಎಂದು ನನಗೆ ಭರವಸೆ ಇದೆ.

**ಶ್ರೀ ಬಿಶ್ವನಾಥ್ ದಾಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ಶ್ರೀ ಮುನ್ಷಿಯವರು ಸಮರ್ಥವಾಗಿ ಮಂಡಿಸಿದ ನಿರ್ಣಯವನ್ನು ಕುರಿತು ನನ್ನದು ತುಂಬ ಕಡಿಮೆ ಎನ್ನಬಹುದಾದಷ್ಟು ಆಕ್ಷೇಪವಿದೆ. ಆದರೆ ನಮಗೆ ನೀಡಲಾಗಿರುವ ವರದಿಯೊಂದಿಗೆ ನಾನು ಸಂತೃಪ್ತನಿಲ್ಲ ಎಂದು ಧೈರ್ಯವಾಗಿ ಒಪ್ಪಿಕೊಳ್ಳಬೇಕು. ವರದಿಯು ಈ ಅಳವಡಿಕೆಯ ಪರವಾಗಿದೆ. ಆದರೆ, ಬಹಳಷ್ಟು ಸದಸ್ಯರು ಅದರ ಪರವಾಗಿಲ್ಲ ಎಂದು ನನಗೆ ಅನಿಸುತ್ತದೆ. ವರದಿ ಮತ್ತು ಶ್ರೀ ಮುನ್ಷಿಯವರ ನಿರ್ಣಯ ಎರಡೂ ಹಾಗಾಗಿ ಈ ತಿಂಗಳ ೧೫ರಿಂದ ಪ್ರಭುತ್ವದ ಶಾಸನಸಭೆ ಆಗಿರುವ ಸಂವಿಧಾನ ರಚನಾಸಭೆಯು ಎರಡು ಪೂರ್ಣ ವಿಭಿನ್ನ ಸಾಮರ್ಥ್ಯಗಳಲ್ಲಿ ಅಂದರೆ ಸಂವಿಧಾನ ರಚನಾಸಭೆ ಮತ್ತು ಪ್ರಭುತ್ವ ಶಾಸನ ಸಭೆಯಾಗಿ ಕೆಲಸ ಮಾಡಬೇಕಿದೆಯಾಗಿ ಸಂಪೂರ್ಣ ಪ್ರತ್ಯೇಕತೆ ಎಂಬ ಈ ನಿಲುವನ್ನು ತೆಗೆದುಕೊಂಡ ಮೇಲೆ ಅವು ಆವಶ್ಯಕವಾಗಿ ತಮ್ಮ ಯೋಜನೆಯಲ್ಲಿ ಅದೇ ಮಾರ್ಗಗಳನ್ನು ಅನುಸರಿಸುತ್ತವೆ. ೧೯೪೭ರ ಭಾರತೀಯ ಸ್ವಾತಂತ್ರ್ಯ ಅಧಿನಿಯಮದ ಒಂದು ಓದು ಸಂವಿಧಾನ ರಚನಾಸಭೆಯು ಈ ದೇಶದ ಪರಮೋಚ್ಚ ಶಾಸನಸಭೆ ಎಂಬುದನ್ನು ತೋರಿಸುತ್ತದೆ. ಇದನ್ನು ಸಂವಿಧಾನ ರಚನಾಸಭೆ ಒಪ್ಪಿದೆ ಇಲ್ಲವೆ ಸಂವಿಧಾನ ರಚನಾಸಭೆಯಿಂದಲ್ಲದಿದ್ದರೆ ಕಡೇಪಕ್ಷ ಅದನ್ನು ನಮ್ಮ ನಾಯಕರು ಒಪ್ಪಿದ್ದಾರೆ. ಸಂವಿಧಾನ ರಚನಾಸಭೆಯು ೧೫ನೇ ಆಗಸ್ಟ್‌ನಿಂದ ಸಂವಿಧಾನ ಒಂದು ವ್ಯವಸ್ಥೆಯಾಗಿದೆ. ಈ ಸಂವಿಧಾನ ರಚನಾಸಭೆ ಭಾರತೀಯ ಸ್ವಾತಂತ್ರ್ಯ ಅಧಿನಿಯಮವನ್ನು ಒಪ್ಪಿಕೊಂಡಿದೆ.

ತನ್ನ ನಾಯಕನನ್ನು ಆಯ್ಕೆಮಾಡಿದೆ ಮತ್ತು ನಾಯಕರಿಗೆ ಲಾರ್ಡ್ ಮೌಂಟ್ ಬ್ಯಾಟನ್ ಅವರನ್ನು ಭಾರತದ ಗವರ್ನರ್ ಜನರಲ್ ಆಗಿರಲು ಆಹ್ವಾನ ನೀಡುವ ಅಧಿಕಾರವನ್ನು ನೀಡಿದೆ. ಈ ಪ್ರಶ್ನೆಯ ದೃಷ್ಟಿಯಿಂದ ಸಂವಿಧಾನದ ರಚನಾಸಭೆಯು ೧೯೪೭ರ ಭಾರತೀಯ ಸ್ವಾತಂತ್ರ್ಯ ಅಧಿನಿಯಮ ತನಗೆ ನೀಡಿರುವ ಸ್ಥಾನವನ್ನು ಒಪ್ಪಿಕೊಂಡಿದೆ. ಆದುದರಿಂದ ನಾವು ಎರಡು ವಿಭಿನ್ನ ಅಂಗಗಳಾಗಿ, ನಾವು ವಿಭಿನ್ನವಾಗಿ ಹಾಗೂ ಸಂಪೂರ್ಣವಾಗಿ ವಿಭಿನ್ನ ಉದ್ದೇಶಗಳಿಗಾಗಿ ಕೆಲಸ ಮಾಡುತ್ತೇವೆ ಎಂದು ಈಗ ಹೇಳುವುದರಲ್ಲಿ ಉಪಯೋಗವಿಲ್ಲ. ಉದ್ದೇಶಗಳು ಒಂದೇ ಮತ್ತು ಅದೇ; ಮತ್ತು ಒಂದೆಡೆ ನಾವು ಭವಿಷ್ಯದ ಭಾರತದ ಸಂವಿಧಾನಕ್ಕಾಗಿ ಒಂದು ಮಸೂದೆ ಸಿದ್ಧಪಡಿಸಬೇಕು ಮತ್ತು ಒಂದು ಅಧಿನಿಯಮವಾಗಿ ಅಂಗೀಕರಿಸಬೇಕು ಎಂಬುದಾದರೆ ನಾವು ದೇಶದ ದೈನಂದಿನ ಆಡಳಿತವನ್ನು ನೋಡಬೇಕು ಕೂಡ ಹಾಗೂ ಅವಶ್ಯವಿದ್ದಂತೆ ಅಂತಹ ಇನ್ನೊಂದು ಶಾಸನವನ್ನು ಕೂಡ ರೂಪಿಸಬೇಕು. ಆದುದರಿಂದ ಸಮಿತಿಯು ಎರಡು ಸ್ಥಾನಗಳಿಂದ ಕೆಲಸ ಮಾಡಬೇಕೆಂದಿರುವ ಪ್ರಸ್ತಾವ ಮತ್ತು ಅದಕ್ಕೆ ನನ್ನ ಗೌರವಾನ್ವಿತ ಗೆಳೆಯ ಶ್ರೀ ಮುನ್ಷಿಯವರ ನಿರ್ಣಯ, ಸದನವು ಮೌನ ಸಮ್ಮತಿ ಕೊಡುವುದು–ಇವನ್ನು ನಮಗೆ ಒಪ್ಪಲಾಗುವುದಿಲ್ಲ. ಅಲ್ಲೇ ನನ್ನ ದೂರು ಇರುತ್ತದೆ ಮಾನ್ಯರೆ, ಒಮ್ಮೆ ನಾವು ಈ ನೀತಿಗೆ ಸಮ್ಮತಿಸಿದೆವೆಂದರೆ ಎರಡು ಸಚಿವಾಲಯಗಳು ಇರುತ್ತವೆ ಮತ್ತು ನಾವು ಸಂವಿಧಾನ ರಚನಾಸಭೆಯ ಸಚಿವಾಲಯದಲ್ಲಿ ಪಡೆದ ಅನುಭವವನ್ನೇ ಪಡೆಯುವ ಸಚಿವಾಲಯ ದಕ್ಷವೂ ಅಲ್ಲ ಅಥವಾ ತುಂಬ ವಿನೀತವೂ ಅಲ್ಲ ಮತ್ತು ಅದು ವಿನೀತತೆ ಮತ್ತು ಶಿಷ್ಟ ರೀತಿಗಳ ತರಬೇತಿಯನ್ನು ಪಡೆಯಬೇಕು.

**ಒಬ್ಬ ಗೌರವಾನ್ವಿತ ಸದಸ್ಯರು :** ತಾವು ಅದನ್ನು ಸಾಬೀತು ಮಾಡುವಿರಾ?

**ಶ್ರೀ ವಿಶ್ವನಾಥ್ ದಾಸ್ :** ಹೌದು ಅವಶ್ಯವಿದ್ದರೆ ನಾನು ಉದಾಹರಣೆಗಳನ್ನು ನೀಡುತ್ತೇನೆ. ಸಂವಿಧಾನ ರಚನಾಸಭೆಯ ಸಚಿವಾಲಯ ದಕ್ಷವಲ್ಲ ಎಂದು ನಾನು ಹೇಳಲೇಬೇಕು. ಈ ಸಂದರ್ಭಗಳಲ್ಲಿ ನಾವೇಕೆ ಈ ಎರಡೂ ಕೆಲಸಗಳನ್ನು ಇಬ್ಬಗೆಯ ಕೆಲಸಗಳು ಎಂದು ತೆಗೆದುಕೊಳ್ಳಲಾಗದು ಎಂಬ ವಾದಗಳು ಇವೆ. ಸಂವಿಧಾನ ರಚಿಸುವ ಕೆಲಸ ಮಾಡಲು ನಾವು ಬೇರೆ ಬೇರೆಯ ದಿನಗಳಲ್ಲಿ ಅಧಿವೇಶನ ಸೇರಬೇಕೆಂದರೆ ಆ ಸಲಹೆಯನ್ನು ನಾನು ಪೂರಾ ಒಪ್ಪಿಕೊಳ್ಳುತ್ತೇನೆ. ಅಂದರೆ ಅದು ನಾವು ವಿಭಿನ್ನ ಎಂದು ಅಲ್ಲ. ಆದರೆ ವ್ಯವಹಾರ ನಿರ್ವಹಣೆಯ ಅನುಕೂಲಕ್ಕಾಗಿ ಎಂಬುದೇ ಆಗಿದೆ. ಇನ್ನೊಂದು ಉದಾಹರಣೆ ಉಲ್ಲೇಖಿಸುವುದಾದರೆ ನಾವು ಉಚ್ಚ ನ್ಯಾಯಾಲಯಗಳಲ್ಲಿ ವ್ಯವಹಾರದ ಇತ್ಯರ್ಥ ತೆಗೆದುಕೊಳ್ಳೋಣ. ಅಲ್ಲಿ ಒಂದು ದಿನ ನಾವು ಸಿವಿಲ್ ವಿಷಯಗಳು ಇರುತ್ತವೆ ಮತ್ತು ಇತರ ದಿನಗಳಲ್ಲಿ ಅಪರಾಧಗಳಿಗೆ ಸಂಬಂಧಿಸಿದ ವಿಷಯಗಳು ಇರುತ್ತವೆ. ಅದೇ ರೀತಿಯಲ್ಲಿ ಈ ಸಭೆಯು ಕೆಲವು ನಮೂದಿತ ದಿನಗಳಲ್ಲಿ ಸಂವಿಧಾನ ರಚಿಸುವ ಕೆಲಸವನ್ನೂ ಮತ್ತು ಕೆಲವು ಇತರ ದಿನಗಳಲ್ಲಿ ಸಾಧಾರಣ ಶಾಸನ ಸಭೆಯ ವ್ಯವಹಾರವನ್ನು ನಡೆಸುತ್ತದೆ.

**ಶ್ರೀ ಎಚ್.ವಿ. ಕಾಮತ್ :** ಈ ಧ್ವನಿವರ್ಧಕ ಅಸಮರ್ಥವಾಗಿದೆ.

**ಶ್ರೀ ವಿಶ್ವನಾಥ ದಾಸ್ :** ಇದು ಅಭಿಪ್ರಾಯದಲ್ಲಿರಬಹುದಾದ ಭೇದ. (ನಗು)

**ಕೆಲವು ಗೌರವಾನ್ವಿತ ಸದಸ್ಯರು :** ಧ್ವನಿವರ್ಧಕ ಕೆಲಸ ಮಾಡುತ್ತಿಲ್ಲ.

**ಶ್ರೀ ವಿಶ್ವನಾಥ್ ದಾಸ್ :** ಕ್ಷಮಿಸಿ, ನಾನು ಗಟ್ಟಿಯಾಗಿ ಮಾತನಾಡುತ್ತೇನೆ. ಪರಿಸ್ಥಿತಿ ಇದಾಗಿದ್ದು, ನಾನು ಅವಶ್ಯವಾಗಿ ತುಸು ನೇರ ಮಾತನಾಡುವ ಕಾಲ ಬಂದಿದೆ ಎಂದು ಭಾವಿಸುತ್ತೇನೆ. ನಾವು ಇಲ್ಲಿ ಸಂಪೂರ್ಣವಾಗಿ ಒಂದು ಶಾಸನ ಸಭೆಯಾಗಿ ವಿಭಿನ್ನ ಉದ್ದೇಶಗಳಿಗಲ್ಲದೆ ನಮ್ಮ ವ್ಯವಹಾರದ ನಿರ್ವಹಣೆಯ ಅನುಕೂಲಕ್ಕಾಗಿಯಾಗಿ ಇದಕ್ಕೆ ಸೀಮಿತವಾಗಿ, ಕೆಲಸ ಮಾಡುತ್ತೇವೆ. ನಾನು ಸಮಿತಿಯ ಅಭಿಪ್ರಾಯವನ್ನು ಒಪ್ಪಿಕೊಳ್ಳಲು ಸಿದ್ಧನಿದ್ದೇನೆ. ಅಂದರೆ ನಾವು ಸಂವಿಧಾನ ತಯಾರಿಸಲು ಬೇರೆ ದಿನಗಳನ್ನು ಅಥವಾ ಬೇರೆ ದಿನ ಅಥವಾ ಅದೇ ದಿನ

ಬೇರೆ ವೇಳೆಗಳನ್ನು ಸಾಧಾರಣ ಶಾಸನಕ್ಕಾಗಿ ಇಲ್ಲವೇ ಕಾರ್ಯಾಂಗದ ಇತರ ಕ್ರಮಗಳ ಚರ್ಚೆಗಾಗಿ ಹಂಚಬಹುದಾಗಿದೆ. ಸ್ಥಿತಿ ಅದಾಗಿರುವಾಗ ನಾನು ಕೆಲಸಗಳ ಇಬ್ಬಗೆ ನಿಲ್ಲಬೇಕು ಎಂದು ಸಲಹೆ ನೀಡುತ್ತೇವೆ.

**ಮಾನ್ಯ ಸಭಾಧ್ಯಕ್ಷರು :** ವಿದ್ಯುತ್ ವೈಫಲ್ಯವಾಗಿದೆ ಮತ್ತು ಹಾಗಾಗಿ ಧ್ವನಿವರ್ಧಕ ಕೆಲಸ ಮಾಡುತ್ತಿಲ್ಲ. ನಾನು ಸದಸ್ಯರನ್ನು ಇತರ ಸದಸ್ಯರಿಗೆ ಕೇಳುವ ಹಾಗೆ ಎತ್ತರ ಧ್ವನಿಯಲ್ಲಿ ಮಾತನಾಡಬೇಕೆಂದು ಕೋರುತ್ತೇನೆ.

**ಶ್ರೀ ವಿಶ್ವನಾಥ ದಾಸ್ :** ಆಗಲಿ ಮಾನ್ಯರೆ, ಅದಾದ ಅನಂತರ ನಾನು ಎರಡನೆಯ ಪ್ರಶ್ನೆಗೆ ಬರುತ್ತೇನೆ. ಅದನ್ನು ಕುರಿತು ಈ ಸದನದ ಗೌರವಾನ್ವಿತ ಸದಸ್ಯರನ್ನು ಉದ್ದೇಶಿಸಿ ಹಾಗೆ ಹೇಳಬಯಸುತ್ತೇನೆ. ಅದು ಅಳವಡಿಕೆಗಳ ಪ್ರಶ್ನೆ. ಮಾನ್ಯರೆ, ಈ ಸದನದ ಗೌರವಾನ್ವಿತ ಸದಸ್ಯರಲ್ಲಿ ಸಮಾಲೋಚಿಸಿಯೇ ಅಳವಡಿಕೆಗಳನ್ನು ಎತ್ತಿಕೊಳ್ಳಲಾಗಿದೆ ಮತ್ತು ಮುಖ್ಯ ಅಳವಡಿಕೆಗಳನ್ನು ಮಾಡಲಾಗಿದೆ. ಅವುಗಳಿಗೆ ನಾನು ಪ್ರತಿಭಟನೆಯ ಒಂದು ಟಿಪ್ಪಣಿ ದಾಖಲಿಸಬೇಕಿದೆ. ನಾನು ನನ್ನ ಅಂಶವನ್ನು ಉದಾಹರಿಸುತ್ತೇನೆ. ನಾವು ಇಲ್ಲಿ ಸಂವಿಧಾನ ರಚನಾಸಭೆಯ ಒಂದು ಪ್ರತ್ಯೇಕ ಅಧಿವೇಶನದಲ್ಲಿ ಸೇರಿದ್ದೇವೆ. ನಾವು ಇದೊಂದರ ಹೊರತು ಬೇರೆ ಅಧಿವೇಶನ ಹೊಂದಿಲ್ಲ. ಇದನ್ನು ನಾವು ಕರೆಯುತ್ತೇವೆ ಮತ್ತು ನಾವು ನಿರ್ಧರಿಸಿದಾಗ ಮುಂದೂಡುತ್ತೇವೆ. ನಮ್ಮ ನಿಯಮಗಳು ತುಂಬ ಸ್ಪಷ್ಟ ಇವೆ. ನಾವು ಕಾಲಕಾಲಕ್ಕೆ ಮುಂದೂಡುತ್ತಿದ್ದರೆ ಅದು ನಮ್ಮ ಸ್ವಂತ ಅನುಕೂಲ ಹಾಗೂ ನಮ್ಮ ವ್ಯವಹಾರ ನಿರ್ವಹಣೆಗಾಗಿ ಆಗಿದೆ. ಆದರೆ ಸಂವಿಧಾನ ರಚನಾಸಭೆಯು ನಮ್ಮ ಸಂವಿಧಾನ ಸಿದ್ಧಪಡಿಸಿ ಅಂಗೀಕರಿಸುವವರೆಗೆ ಒಂದು ಪ್ರತ್ಯೇಕ ಘಟಕವಾಗಿ ಕೆಲಸಮಾಡುತ್ತಿರುತ್ತದೆ. ಮಾನ್ಯರೆ, ಆ ನಿಯಮಗಳನ್ನು ಅನುಸರಿಸಿ ಸಂಸದೀಯ ಅಧಿನಿಯಮ ರೂಪಿಸಲಾಗಿದೆ. ಅಂದರೆ ಅದನ್ನು ಒಪ್ಪಲಾಗಿದೆ. ಆದುದರಿಂದ ಸಂವಿಧಾನ ರಚನೆಗೆ ಒಂದು ವರ್ಷವೇ ಆಗಬಹುದು ಅಥವಾ ಎರಡು ವರ್ಷಗಳು ಇಲ್ಲವೇ ಆರು ತಿಂಗಳುಗಳಾಗಬಹುದು. ಇವೆಲ್ಲ ಒಂದು ಅಧಿವೇಶನ. ಪರಿಸ್ಥಿತಿ ಹೀಗಿರುವಾಗ, ಗವರ್ನರ್ ಜನರಲ್ ಅವರು ಇದರ ಅಧಿವೇಶನವನ್ನು ಕರೆಯುವ, ನಮ್ಮನ್ನು ಇಲ್ಲಿ ನೆರೆಯುವಂತೆ ಮಾಡಿ ಸಂವಿಧಾನದ ಕೆಲಸವನ್ನು ಮಾಡುವಂತೆ ಮಾಡುವ ಹಕ್ಕನ್ನು ಹೊಂದಿರುವುದು ಅಪೇಕ್ಷಣೀಯವಲ್ಲ. ಇದು ಅವರ ಕೆಲಸವಲ್ಲ. ನಾವು ಸಂವಿಧಾನ ರಚನಾಸಭೆ ಸದಸ್ಯರು ಮತ್ತು ಸಂವಿಧಾನ ರಚನಾಸಭೆಯು ತನ್ನ ಇಷ್ಟದ ಪ್ರಕಾರ ಸೇರುತ್ತದೆ ಮತ್ತು ಮುಂದೂಡುತ್ತದೆ. ನಾವು ಗವರ್ನರ್ ಜನರಲ್‌ನಲ್ಲಿ ನಾವೆಷ್ಟು ಒಲವನ್ನು ಇಟ್ಟುಕೊಂಡಿದ್ದರೂ, ಅವರನ್ನು ಎಷ್ಟು ಗೌರವಿಸಿದರೂ ಅವರಿಗೆ ಈ ಅಧಿಕಾರವನ್ನು ನೀಡಬಯಸುವುದಿಲ್ಲ. ಇಲ್ಲವೇ ಈ ಮುಖ್ಯಕೆಲಸವನ್ನು ಗೌರವಾನ್ವಿತ ಸಭಾಧ್ಯಕ್ಷರಿಗೆ ನಾವು ಅವರನ್ನು ಪ್ರೀತಿಸಿದರೂ ಇಷ್ಟಪಟ್ಟರೂ ಅವರಲ್ಲಿ ಗೌರವ ತೋರಿದರೂ ಅವರಿಗೆ ನೀಡಬಯಸುವುದಿಲ್ಲ. ಮಾನ್ಯರೆ, ಈ ಅಳವಡಿಕೆ ತುಂಬ ದುರದೃಷ್ಟಕರ ಮತ್ತು ನಾವು ನಮ್ಮ ಪ್ರತಿಭಟನೆಯನ್ನು ದಾಖಲಿಸಬೇಕಾಗಿರುವುದು ನ್ಯಾಯಯುತವಾಗಿದೆ ಎಂದು ನಾನು ಹೇಳುತ್ತೇನೆ.

ಎರಡನೆಯದಾಗಿ ನಾನು ಸಭೆಯ ಮುಂದೂಡಿಕೆಯ ವಿಷಯಕ್ಕೆ ಬರುತ್ತೇನೆ. ನಾವು ಇಲ್ಲಿ ಸೇರಿದ್ದೇವೆ ಮತ್ತು ಸಭೆಯನ್ನು ನಾವೇ ಮುಂದೂಡತಕ್ಕದ್ದು. ಭೂಮಿಯ ಮೇಲೆ ಯಾವ ಪ್ರಾಧಿಕಾರವೂ ಯಾವ ಅಧಿಕಾರವೂ ಈ ಸಭೆಯನ್ನು ಮೂಂದೂಡುವಂತೆ ಮಾಡುವಂತಿಲ್ಲ. ಹಾಗೂ ನಾವು ಈ ಕೆಲಸವನ್ನು ಸಂವಿಧಾನ ರಚನಾಸಭೆಗಲ್ಲದೆ ಇತರ ಯಾವುದೇ ಪ್ರಾಧಿಕಾರಕ್ಕೂ ನೀಡುವ ಹಾಗಿಲ್ಲ. ಈ ದೃಷ್ಟಿಯಿಂದ ನಾನು ಅಳವಡಿಕೆಯನ್ನು ಒಪ್ಪಲು ಸಿದ್ಧನಿಲ್ಲ. ನಾವು ಕೆಲವು ಅಂಶಗಳನ್ನು ಮಾತ್ರ ಎತ್ತಿಕೊಂಡಿದ್ದೇನೆ. ಅಳವಡಿಕೆ ಆವಶ್ಯಕತೆ ಇಲ್ಲದವು ಸಾಕಷ್ಟಿವೆ ಅವು ನಮಗೆ ಸಮ್ಮತವೂ ಅಲ್ಲ.

ನಾನೀಗ ಮೂರನೆಯ ಪ್ರಶ್ನೆಗೆ ಬರುತ್ತೇನೆ. ರಾಜ್ಯಗಳ ಪಾಲ್ಗೊಳ್ಳುವಿಕೆ. ನನ್ನ ಗೌರವಾನ್ವಿತ ಗೆಳೆಯರೆ, ಈ ಸಮಿತಿಯ ಸದಸ್ಯರು ರಾಜ್ಯದ ಪ್ರತಿನಿಧಿಗಳು ನಮ್ಮೊಂದಿಗಿರಬೇಕು ಎಂದು ಶಿಫಾರಸು ಮಾಡಿದ್ದಾರೆ. ನಾವು ಅವರನ್ನು ಇಲ್ಲಿ ಹೊಂದುವುದಕ್ಕೆ ಸಿದ್ಧರಿದ್ದೇವೆ, ಆದರೆ ಅವರು ನಮ್ಮ ಆಲೋಚನೆಗಳಲ್ಲಿ ಮತ್ತು

ಚರ್ಚೆಗಳಲ್ಲಿ ಭಾಗವಹಿಸುವುದಷ್ಟೇ ಅಲ್ಲದೆ ಮತ ಚಲಾಯಿಸುವ ವಿಷಯದಲ್ಲೂ ಕೂಡ ಪಾಲ್ಗೊಳ್ಳಬೇಕು ಎಂಬುದು ಅವರ ಪ್ರಸ್ತಾವವೆ? ನಮಗೆ ಪ್ರಶ್ನೆಯನ್ನು ಕುರಿತಂತೆ ಆಲೋಚಿಸಲು ಈಗ ನೀಡಿರುವುದಕ್ಕಿಂತ ಹೆಚ್ಚಿನ ಸಮಯವನ್ನು ನೀಡಬೇಕು ಎಂಬ ಅಭಿಪ್ರಾಯವನ್ನು ನಾನು ಧೈರ್ಯವಾಗಿ ಒಪ್ಪಬೇಕು. ರಾಜ್ಯಗಳ ಪ್ರತಿನಿಧಿಗಳನ್ನು ಸಂಬಂಧಿಸಿ ಹಾಗೆ ಹೇಳಬೇಕು. ಅವರು ಸುಮಾರು ೬೨ ಮಂದಿ ಇದ್ದಾರೆ. ಈ ಸಭೆಯ ಸಂಖ್ಯೆಯಲ್ಲಿ ಅದು ಒಂದು ಉತ್ತಮ ಪಾಲು. ಆಳವಾಗಿ ಈ ವಿಷಯದಲ್ಲಿ ಪರ್ಯಾಲೋಚಿಸದೆ, ಈ ೬೨ ಮಂದಿ ಸದಸ್ಯರಿಗೆ, ಅವರಿಗೆ ಯಾವ ಹೊಣೆಯೂ ಇಲ್ಲದ ವಿಷಯಗಳನ್ನು ಕುರಿತು ನಮ್ಮ ಜೊತೆ ಕುಳಿತು ಚರ್ಚಿಸಲು, ಮತಹಾಕಲು ಅವಕಾಶವನ್ನು ನೀಡುವ ತೀರ್ಮಾನವನ್ನು ತೆಗೆದುಕೊಳ್ಳುವುದು ಕಷ್ಟಕರವಾಗುತ್ತದೆ.

ಮುಗಿಸುವ ಮೊದಲು, ಕೆಲಸ ಮಾಡಲು ಒಳ್ಳೆ ತರಬೇತಿ ಪಡೆದ ದಕ್ಷ ಮತ್ತು ಸದಾ ಸಿದ್ಧವಿರುವ ಶಾಸನ ಸಚಿವಾಲಯವನ್ನು ನಾವು ಹೊಂದಿದ್ದೇವೆ. ಹೀಗಿರುವಾಗ ಅತಿಯಾದ ವೆಚ್ಚವನ್ನು ಬೇಡುವ, ಅದಕ್ಷವಾಗಿರಬಹುದಾದ ಇನ್ನೊಂದು ಸಚಿವಾಲಯವನ್ನು ಏಕೆ ಹೊಂದಬೇಕು? ಈ ಸಂದರ್ಭದಲ್ಲಿ ನಾನು ಹಣಕಾಸು ಮತ್ತು ದಕ್ಷತೆಯ ದೃಷ್ಟಿಕೋನದಿಂದ ಈ ಪ್ರಶ್ನೆಯನ್ನು ಪರಿಗಣಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಶ್ರೀ ಹುಸೇನ್ ಇಮಾಮ್ :** ಮಾನ್ಯ ಸಭಾಧ್ಯಕ್ಷರೆ, ಸಮಿತಿಯ ಕೆಲಸ ಕುರಿತಂತೆ ನಮ್ಮ ಸಹೋದ್ಯೋಗಿಗಳು ಆಕ್ಷೇಪಣೆ ಮತ್ತು ವಿರೋಧ ತೆಗೆದಿರುವುದು ಕಂಡು ನನಗೆ ಖೇದವಾಗಿದೆ. ಸಮಿತಿಯ ಒಬ್ಬ ಸದಸ್ಯನಾಗಿ ನಾವು ಯಾವ ಸ್ಥಿತಿಯಲ್ಲಿ ಕೆಲಸ ಮಾಡಿದೆವು ಎಂದು ವಿವರಿಸಲು ನಾನು ನಿಂತಿದ್ದೇನೆ. ಈಗ ವಿವೇಕವನ್ನು ಬೋಧಿಸುತ್ತಿರುವ ಸದಸ್ಯರು ಹಿಂದೆ ಯಾವುದೇ ಮಾರ್ಪಾಡುಗಳ ಸಲಹೆಯನ್ನು ಮಾಡಿಲ್ಲ. ಆದರೆ ಈಗ ನಮಗೆ ವಹಿಸಿದ್ದ ನಿಬಂಧನೆಯಡಿ ಕೆಲಸ ಮಾಡಿದ ಬಳಿಕ ಎರಡು ಪರಿಗಣನೆಗಳನ್ನು ಕುರಿತು ನಮ್ಮನ್ನು ಟೀಕಿಸಲಾಗುತ್ತಿದೆ. ಅವುಗಳಲ್ಲಿ ಮೊದಲನೆಯದಾಗಿ ನಾವು ನಮ್ಮ ಮಿತಿಗಳನ್ನು ಮೀರಿದ್ದೇವೆ ಮತ್ತು ಇನ್ನೊಂದು ನಾವು ಸಾಕಷ್ಟು ಕೆಲಸವನ್ನು ಮಾಡಿಯೇ ಇಲ್ಲ. ಈ ಎರಡು ಸ್ವಯಂ ನಿರಾಕರಣ ಆರೋಪಗಳಾಗಿವೆ. ಈಗ ಸಮಿತಿಯ ಸ್ಥಿತಿ ಹೇಗಿತ್ತು? ಒಂದು ಸಮಿತಿಯು ಅದನ್ನು ಸೃಷ್ಟಿಸಿದ ಮಾತೃ ಸಂಸ್ಥೆಗಿಂತ ಎಂದೂ ಪರಮೋಚ್ಚವೇನಲ್ಲ. ಮಾತೃ ಸಂಸ್ಥೆ ಯಾವಾಗಲೂ ಪರಮೋಚ್ಚ ಮತ್ತು ಅದು ಸಮಿತಿಯ ಸಲಹೆಗಳನ್ನು ಮಾರ್ಪಡಿಸಲು ಮತ್ತು ಬದಲಾಯಿಸಲು ಹಕ್ಕುಳ್ಳದ್ದಾಗಿರುತ್ತದೆ. ಸಮಿತಿಯು ತನ್ನ ಇಚ್ಛೆಯನ್ನು ಮಾತೃ ಸಂಸ್ಥೆಯ ಮೇಲೆ ಹೇರುವಂತಿಲ್ಲ. ಮಾಡಬಹುದಾಗಿರುವುದೆಂದರೆ ತಮ್ಮ ಮುಂದೆ ವ್ಯವಹಾರದ ಒಂದು ನಿರ್ದಿಷ್ಟ ಪಥದ ಸಾಧಕ ಬಾಧಕಗಳನ್ನು ಮೂರ್ತರೂಪದಲ್ಲಿ ತರುವುದಾಗಿದೆ. ಈಗ ಸಂವಿಧಾನ ರಚನಾ ಸಭೆಯು ಎರಡು ಕೆಲಸಗಳನ್ನು ಹೊಂದಿದೆ ಎಂಬುದು ಸ್ಪಷ್ಟ. ಒರಿಸ್ಸಾದ ಮಾಜಿ ಪ್ರಧಾನಿಗಳು ಅದು ಎರಡು ಕೆಲಸಗಳನ್ನು ನಿರ್ವಹಿಸಬಾರದು ಎಂಬ ಆಕ್ಷೇಪಣೆಯನ್ನು ತರುತ್ತಿದ್ದಾರೆ. ಈಗ ಒಬ್ಬ ಗೌರವಾನ್ವಿತ ಸದಸ್ಯರು ಪರಿಗಣಿಸಿರುವುದು ಸರಿ ಎಂದರೆ ಇನ್ನೋರ್ವ ಗೌರವಾನ್ವಿತ ಸದಸ್ಯರು ತಪ್ಪು ಎನ್ನುತ್ತಾರೆ. ಆದರೆ ಪರಿಸ್ಥಿತಿ ಏನು? ದಯವಿಟ್ಟು ನೆನಪಿಡಿ, ಭಾರತೀಯ ಸ್ವಾತಂತ್ರ್ಯ ಅಧಿನಿಯಮದನಂತರ, ಇಂದಿಗೆ ಮತ್ತು ಬರುವ ದಿನಗಳಿಗೆ ಸಂವಿಧಾನ ರಚಿಸುವ ಇಡೀ ಅಧಿಕಾರ ತಮ್ಮಲ್ಲೇ ಇದೆ; ಇಂದಿನ ಇಡೀ ಆಡಳಿತ ಮತ್ತು ಹೊಸ ಸಂವಿಧಾನ ಜಾರಿಗೆ ಬರುವತನಕ ಆಡಳಿತ ಅಧಿಕಾರ ನಿಮ್ಮ ಕೈಯಲ್ಲಿ ಇದೆ. ಸದನ ಆ ಸ್ಥಿತಿಯಲ್ಲಿದ್ದು ಎರಡು ಕೆಲಸಗಳಲ್ಲಿ ಯಾವುದನ್ನೂ ಉಪೇಕ್ಷಿಸುವಂತಿಲ್ಲ ಮತ್ತು ಉಪೇಕ್ಷಿಸಲೂಬಾರದು. ಪ್ರಸಕ್ತ ಸಮಯದಲ್ಲಿ ಆದ ಚರ್ಚೆಯಂತೆ ನಾವು ಕಾರ್ಯನಿರ್ವಾಹಕ ಸರ್ಕಾರವನ್ನು ಪ್ರಸ್ತುತ ಸಂದರ್ಭಗಳಲ್ಲಿ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ಕುರಿತು ಪ್ರಶ್ನಿಸಲು ಯಾವುದಾದರೂ ವೇದಿಕೆಯನ್ನು ನಾವು ಹೊಂದಿರಬೇಕು ಎಂದಿದೆ. ಪಂಡಿತ್ ಜವಾಹರಲಾಲ್ ನೆಹರು ಹಾಜರಿದ್ದರು. ಬಹಳಷ್ಟು ಭಾಷಣಗಳ ಅನಂತರ ಅವರು ಯಾವುದಾದರೂ ಸಮಿತಿಯು ಕುಳಿತು ಎಲ್ಲ ಗೋಜುಗಳನ್ನು ಪರೀಕ್ಷಿಸಿ ಮಾರ್ಗೋಪಾಯಗಳ ಸಲಹೆ ಮಾಡುವುದು ಉತ್ತಮ ಎಂದು ಹೇಳಿದರು. ಏಕಕಾಲಕ್ಕೆ ಮಾಡಬೇಕಾದ ಎರಡು ಕೆಲಸಗಳಿಗೆ ಏರ್ಪಾಡುಗಳನ್ನು ಮಾಡುವ ನಿಟ್ಟಿನಲ್ಲಿ

ನಾವು ಕೆಲಸ ಮಾಡುತ್ತಿದ್ದೆವು. ಎರಡೂ ಕೆಲಸಗಳೂ ಎಷ್ಟು ಪ್ರತ್ಯೇಕವಾಗಿದ್ದವೆಂದರೆ ಅವುಗಳನ್ನು ಜಲಾಭೇದ್ಯ ಕೋಣೆಗಳಲ್ಲಿರಿಸಬಹುದಿತ್ತು. ನಾವು ಆಗಸ್ಟ್‌ನಲ್ಲಿ ಸಂವಿಧಾನ ರಚನಾಸಭೆಯಾಗಿ ಮತ್ತು ಸೆಪ್ಟೆಂಬರ್‌ನಲ್ಲಿ ಶಾಸನಸಭೆಯಾಗಿ ಸಮಾವೇಶಗೊಳ್ಳಬಹುದಿತ್ತು. ಅದು ನಮಗೆ ಮುಕ್ತವಾಗಿದ್ದ ಪಥಗಳಲ್ಲಿ ಒಂದು. ನಮಗೆ ಮುಕ್ತವಾದ ಇನ್ನೊಂದು ಪಥ ಅದೇ ಅಧಿವೇಶನದಲ್ಲಿ ಪ್ರತ್ಯೇಕ ದಿನಗಳಲ್ಲಿ ಸೇರುವುದು. ಮೂರನೆಯ ಪಥ ನಮಗೆ ಮುಕ್ತವಾದುದು ಒಂದೇ ದಿನದಲ್ಲಿ ಬೇರೆ ಬೇರೆ ವೇಳೆಗಳಲ್ಲಿ ಸೇರುವುದು. ಈ ಎಲ್ಲ ಐಚ್ಛಿಕತೆಗಳನ್ನು ನಮಗೆ ನೀಡಲಾಗಿತ್ತು ಮತ್ತು ಆತ್ಮಸಾಕ್ಷಿಯುಳ್ಳ ಜನರಾಗಿ ಈ ಮೂರೂ ಪಥಗಳಲ್ಲಿ ಯಾವುದೇ ಒಂದಕ್ಕೆ ನಾವು ಆದ್ಯತೆಯನ್ನು ನೀಡಲಿಲ್ಲ. ನಾವು ನಿಮಗೆ ಮುಕ್ತವಾದ ಎಲ್ಲ ಮೂರು ಪಥಗಳನ್ನು ಎತ್ತಿ ಹೇಳಿದ್ದೇವೆ. ನೀವು ಒಂದೇ ದಿನ ಬೇರೆ ವೇಳೆಗಳು ಹೊಂದಿರಬಹುದು ಅಥವಾ ಪ್ರತ್ಯೇಕ ದಿನಗಳೆಂದು ಅಧಿವೇಶನಗಳನ್ನು ಹೊಂದಿಬಹುದು. ಆದರೆ ನಾವು ವಿವಿಧ ವೇಳೆಗಳ ಬದಲಿಗೆ ನಾವು ಬೇರೆ ಬೇರೆಯ ದಿನಗಳೆಂದು ಸಮಾವೇಶಗೊಳ್ಳುವುದನ್ನು ಆರಿಸಿಕೊಳ್ಳುತ್ತೇವೆ. ಒಂದು ಉದ್ದೇಶಕ್ಕೆ ತಾವು ಬೆಳಗ್ಗೆ ಸೇರಬಹುದು ಮತ್ತು ಇನ್ನೊಂದು ಉದ್ದೇಶಕ್ಕೆ ಮಧ್ಯಾಹ್ನ ಸೇರಬಹುದು. ಅದಷ್ಟೇ ನಾವು ಮಾಡಿರುವುದು. ನಾವು ಪೂರಾ ವಿವೇಚನೆಯನ್ನು ನಿಮಗೆ ಬಿಟ್ಟಿದ್ದೇವೆ ಮತ್ತು ಇರುವುದರಲ್ಲಿ ಉತ್ತಮ ಮಾರ್ಗವೆಂದರೆ ಕಾರ್ಯನಿರ್ವಾಹಕ ಸರ್ಕಾರಕ್ಕಿದ್ದ ವಿವೇಚನೆಗೆ ಈ ಪ್ರಶ್ನೆಯನ್ನು ಬಿಟ್ಟು, ಶಾಸನಸಭೆಯ ಕರ್ತವ್ಯಗಳನ್ನು ನಿರ್ವಹಿಸಲು ನಮಗೆ ಸಮಯಾವಕಾಶವನ್ನು ನೀಡುವಂತೆ ಕೇಳಿಕೊಳ್ಳುವುದು. ಏಕೆಂದರೆ ಕಾರ್ಯನಿರ್ವಾಹಕ ಸರ್ಕಾರವು ಈ ಸದನಕ್ಕೆ ಹೊಣೆಗಾರನಾಗಿದೆ. ನಾವು ಹೀಗೆಯೇ ಸಂವಿಧಾನ ರಚನಾಸಭೆ ಮತ್ತು ಶಾಸನಸಭೆಗಳನ್ನು ಪ್ರತ್ಯೇಕವಾಗಿ ಬೇರೆ ಬೇರೆ ದಿನಗಳಲ್ಲಿ ನಡೆಸಬಹುದು. ದಿನಕಳೆದಂತೆ ಸಂವಿಧಾನ ರಚನಾಸಭೆಯ ಕರ್ತವ್ಯಗಳು ಕಡಿಮೆಯಾಗುತ್ತಾ ಹೋಗುತ್ತವೆ ಮತ್ತು ಅದಕ್ಕೆ ವಾರದಲ್ಲಿ ಒಂದು ದಿನದ ಕಾಲಾವಕಾಶ ಸಾಕಾಗಬಹುದು. ಆಗ ಶಾಸನಸಭಾ ವ್ಯವಹಾರಗಳಿಗೆ ನಾಲ್ಕು ದಿನಗಳನ್ನು ಅಥವಾ ನೀವು ಇನ್ನೊಂದು ರೀತಿಯ ವ್ಯವಸ್ಥೆಯನ್ನು ಮಾಡಬಹುದು. ನನ್ನ ಅಭಿಪ್ರಾಯವೆಂದರೆ, ವಾರದಲ್ಲಿ ನಾಲ್ಕು ದಿನಗಳು ಸಂವಿಧಾನ ರಚನಾಸಭೆ ಕೆಲಸ ಮಾಡಬಹುದು ಮತ್ತು ಒಂದು ದಿನ ಮಾತ್ರ ಶಾಸನಸಭೆ ಕೆಲಸಕ್ಕೆ ವ್ಯಯಿಸಬಹುದು.

ಈಗ ಉದ್ಭವಿಸುವ ಪ್ರಶ್ನೆ ಎರಡನ್ನೂ ನಿಯಂತ್ರಿಸುವುದು. ನಾವು ಸಭಾಧ್ಯಕ್ಷರು ಶಾಸನಸಭೆ ಮತ್ತು ಸಂವಿಧಾನ ರಚನಾಸಭೆ ಎರಡಕ್ಕೂ ಮುಖ್ಯಸ್ಥರು ಎಂದು ಉದ್ದುದ್ದ ಭಾಷಣ ಮಾಡಿದ್ದೇವೆ. ಸದನವು ಸಚಿವಾಲಯದ ಕರ್ತವ್ಯಗಳನ್ನು ನಿರ್ವಹಿಸಲು ಒಂದು ರೀತಿಯ ಕಾರ್ಯಾಂಗವನ್ನು ಬಯಸಿದರೆ, ಅದಕ್ಕೆ ಹಾಗೆ ಕಾನೂನನ್ನು ಮಾಡುವ ಅಧಿಕಾರವಿದೆ. ಸಂವಿಧಾನ ರಚನಾಸಭೆಗೆ ಮತ್ತು ಶಾಸನಸಭೆಗೆ ಬೇರೆ ಬೇರೆ ಸಚಿವಾಲಯಗಳು ಬೇಕೆಂದರೆ, ಅಥವಾ ಎರಡರ ಕಾರ್ಯಗಳನ್ನೂ ನಿರ್ವಹಿಸಲು ಒಂದೇ ಸಚಿವಾಲಯ ಸಾಕೆಂದರೆ, ತನ್ನ ಇಚ್ಛೆಗೆ ಅನುಸಾರವಾಗಿ ನಡೆಯುವ ಸ್ವಾತಂತ್ರ್ಯವನ್ನು ಅದು ಹೊಂದಿದೆ. ವಹಿಸಿರುವ ಕರ್ತವ್ಯಗಳ ಪ್ರಕಾರ ಇಲ್ಲದಿದ್ದರೆ ಸಮಿತಿಯು ಆ ಹೊರೆಯನ್ನು ಹೊರಲು ಏಕೆ ಬಯಸಬೇಕು? ಅದೊಂದು ರೀತಿ ಬಲವಂತದ ಹೇರಿಕೆ. ನಾವು ವಾಸ್ತವದಲ್ಲಿ ನಮ್ಮ ಇಚ್ಛೆಯನ್ನು ನಿಮ್ಮ ಮೇಲೆ ಹೇರುತ್ತಿಲ್ಲ. ಆದರೆ ಯಾವೆಲ್ಲ ಪಥಗಳು ನಿಮಗೆ ಇವೆ ಮತ್ತು ಅವುಗಳಿಂದ ಉಂಟಾಗಬಹುದಾದ ತೊಡಕುಗಳೇನು ಎಂದು ಎತ್ತಿ ತೋರಿಸಲಷ್ಟೆ ಹೀಗೆ ಹೇಳಿದ್ದೇನೆ. ಹಾಗೆ ನೋಡಿದರೆ ವಿಷಯಗಳಿಗೆ ಅವು ಅಗತ್ಯವಾಗಿದ್ದವು, ಎಂದು ಹೇಳಲಾಗಿದೆ. ಎರಡು ಸಂದರ್ಭಗಳಲ್ಲಿ ಅದು ಆವಶ್ಯಕವಿತ್ತು. ಏಕೆಂದರೆ ನಾವು ಕೆಲವು ವಿಷಯಗಳ ವಿರುದ್ಧ ಇದ್ದೆವು. ಆ ವಿಷಯಗಳು ನಮಗೆ ವಹಿಸಿದ ಕರ್ತವ್ಯಗಳಲ್ಲಿ ಇಲ್ಲದೆ ಹೋದರೂ ನಮ್ಮ ವಿಷಯಗಳಿಗೆ ಅವು ಅಗತ್ಯವಾಗಿದ್ದವು. ನಾವು ಅದನ್ನು ಉಪೇಕ್ಷಿಸುವಂತಿರಲಿಲ್ಲ. ಆದುದರಿಂದ ನಾವು ಆ ವಿಷಯಗಳನ್ನು ಕುರಿತು ನಮ್ಮ ಕೆಲವು ಅನಿಸಿಕೆಗಳನ್ನು ಸಲ್ಲಿಸಿದ್ದೇವೆ. ಆದರೆ ನಾವು ನಮ್ಮ ಇಚ್ಛೆಯನ್ನು ನಿಮ್ಮ ಮೇಲೆ ಯಾವುದೇ ರೀತಿಯಲ್ಲಿಯೂ ಹೇರದಂತೆ ಎಚ್ಚರ ವಹಿಸಿದ್ದೇವೆ.

ಭಾರತ ಸರಕಾರದ ಅಧಿನಿಯಮದ ಪ್ರಕರಣ ೧೦(೨)ನ್ನು ಕುರಿತು ಹಾಕಿದ ಪ್ರಶ್ನೆ ಎಂದರೆ ಸರ್ಕಾರದ ಒಬ್ಬ ಸದಸ್ಯ ಆರು ತಿಂಗಳಲ್ಲಿ ಶಾಸನ ಸಭೆಯ ಸದಸ್ಯನಾಗಬೇಕು ಅಥವಾ ರಾಜೀನಾಮೆಯನ್ನು ನೀಡಬೇಕು ಎಂದು ಹೇಳುವ ಪ್ರಕರಣಗಳನ್ನು ಕೂಡ ನೀವು ಬದಲಾಯಿಸಬಹುದಾದ ವಿಭಾಗಗಳಲ್ಲಿದೆ. ಕಾರ್ಯ ನಿರ್ವಾಹಕ ಸರ್ಕಾರವು ಒಂದು ವೇಳೆ ಬದಲಾವಣೆ ಆವಶ್ಯಕ ಎಂದು ಭಾವಿಸಿದರೆ ಅದು ಆ ಬದಲಾವಣೆ ಮಾಡಬಹುದು; ಅಥವಾ ಆ ಸದಸ್ಯನನ್ನು ಸಂವಿಧಾನ ರಚನಾಸಭೆಯೊಳಕ್ಕೆ ತರಬೇಕಾದುದು ಆವಶ್ಯಕ ಎಂದು ಭಾವಿಸಿದರೆ ಆತನನ್ನು ಒಳಗೆ ತರಲು ಸಾಕಷ್ಟು ಅವಕಾಶಗಳಿವೆ. ಆದುದರಿಂದ ವಾಸ್ತವವಾಗಿ ಅದು ಕಡ್ಡಿಯನ್ನು ಗುಡ್ಡ ಮಾಡಿದಂತೆ. ಅದು ಯಾವುದೇ ಖಂಡಗಳ ಅಳವಡಿಕೆಯ ಕೆಲಸದ ಹಾದಿಯಲ್ಲಿ ಅಡ್ಡ ನಿಲ್ಲುವಂತೆ ಮಾಡುವ ಸಲಹೆಯಾಗುತ್ತದೆ. ಅದು ತುಸು ಕಷ್ಟ ಮತ್ತು ಅಳವಡಿಕೆಗಳನ್ನು ಮಾಡುವುದಕ್ಕೆ ಕಾಲಾವಕಾಶ ಬೇಕೆಂದು ತಿಳಿದು ನಾವು ಸಂವಿಧಾನ ರಚನಾಸಭೆಯು ಒಂದು ಸ್ವತಂತ್ರ ಸಂಸ್ಥೆಯಾಗಿದ್ದು ಮತ್ತು ತಾನು ಬಯಸಿದಂತೆ ಈ ನಿಯಮಗಳು ರೂಪಿಸಲು ಹಕ್ಕುಳ್ಳದ್ದಾಗಿದೆ ಎಂದು ಸೂಚಿಸಿದ್ದೇವೆ. ಅದು ಅತ್ಯಗತ್ಯವೆಂದು ತೋರಿದಾಗ ಸೂಕ್ತ ನಿಯಮಗಳನ್ನು ಮಾಡಬಹುದು. ಉದಾಹರಣೆಗೆ ಶಾಸನಸಭೆ ಕರೆಯುವ ಪ್ರಶ್ನೆ. ಖಂಡವನ್ನು ಬದಲಾಯಿಸಬೇಕು ಮತ್ತು ಗವರ್ನರ್ ಜನರಲ್ ಅವರಿಗಿಂತ ಇಂತಹ ಸಂದರ್ಭದಲ್ಲಿ ಅಧಿಕಾರವು ಬೇರೆಯ ಅಧಿಕಾರಿಯಲ್ಲಿ ಉಳಿಯಬೇಕು ಎಂದು ಸಲಹೆ ಮಾಡುವ ಬದಲು ನಾವು ಸಭಾಧ್ಯಕ್ಷರು ಆ ಅಧಿಕಾರ ಹೊಂದಿರಬೇಕು ಮತ್ತು ಸಂವಿಧಾನ ರಚನಾಸಭೆಯು ಸ್ವಂತ ನಿಯಮಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿರುತ್ತೇವೆ. ಆದರೆ ಸಭಾಧ್ಯಕ್ಷರೂ ದಿನಾಂಕ ನಿರ್ಧರಿಸುವ ಅಧಿಕಾರವನ್ನು ಹೊಂದಿರಬಾರದು ಎಂದು ಮತ್ತು ಸದನವು ಯಾರಿಗೇ ಆಗಲಿ ಆ ಹಕ್ಕನ್ನು ಬಿಟ್ಟುಕೊಡಬಾರದು ಎಂದು ಹೇಳುವುದು ನನ್ನಲ್ಲಿ ಬಹಳ ಅನುಮಾನವನ್ನು ಹುಟ್ಟಿಸುತ್ತದೆ. ನಾವು ಸದ್ಯದಲ್ಲಿ ಇರುವ ಪರಿಸ್ಥಿತಿಯಲ್ಲಿ ಸೂಕ್ಷ್ಮ ನಿರ್ವಹಣೆಗಾಗಿ ನಮ್ಮ ಅಧಿಕಾರಿಗಳು ಮೇಲೆ, ಸಭಾಧ್ಯಕ್ಷರ ಮೇಲೆ ಭರವಸೆ ಇಡಬೇಕು. ಸಭಾಧ್ಯಕ್ಷರು ಯಾವಾಗಲೂ ಸದನಕ್ಕೆ ಬದ್ಧರು. ಅವರು ಪರಮೋಚ್ಚ ಮುಖ್ಯಸ್ಥರಾಗಿದ್ದರೂ, ಪ್ರಜಾಪ್ರಭುತ್ವ ಸಿದ್ಧಾಂತದಡಿ, ಅವರು ಕೂಡ ಸದನದ ಮತಕ್ಕೆ ಬದ್ಧರು. ಆದುದರಿಂದ ಅವರು ತಪ್ಪು ಮಾಡಿದರೆ ನೀವು ಯಾವಾಗಲೂ ಅವರನ್ನು ತಿದ್ದಬಹುದು. ಆದರೆ ಕಾರ್ಯನಿರ್ವಾಹಕ ಕೆಲಸಗಳಿಗೆ ನೀವು ಒಬ್ಬ ಕಾರ್ಯನಿರ್ವಾಹಕ ಮುಖ್ಯಸ್ಥನನ್ನು ಹೊಂದಿರಬೇಕು. ಪ್ರಜಾಪ್ರಭುತ್ವವು ಕಾರ್ಯಾಂಗಕ್ಕೂ ಕೆಲವು ವಿಷಯಗಳನ್ನು ವಹಿಸುತ್ತದೆ. ಮತ್ತು ಆ ಕೆಲಸಗಳಲ್ಲಿ ಒಂದು ಇದು ಅಂದರೆ ಶಾಸನಸಭೆಯನ್ನು ಕರೆಯುವುದು. ಅದನ್ನು ಸಭಾಧ್ಯಕ್ಷರಿಗೆ ಕೊಡಬೇಕೆಂದು ಆಶಿಸಲಾಗಿದೆ. ಕಾರ್ಯಾಂಗ ಅದನ್ನು ನಡೆಸುತ್ತದೆ. ಉದಾಹರಣೆಗೆ ಕಳೆದ ಅಧಿವೇಶನಕ್ಕೆ ನಿಶ್ಚಿತ ದಿನಾಂಕಗಳನ್ನು ನಿರ್ಧರಿಸಲಾಗಿರಲಿಲ್ಲ. ಕಳೆದ ಅಧಿವೇಶನವನ್ನು ಸಭಾಧ್ಯಕ್ಷರು ಸೂಕ್ತ ಎಂದು ಕಂಡುಕೊಂಡಿದ್ದ ದಿನ ಕರೆಯಲಾಯಿತು. ಅದಕ್ಕೆ ಯಾರೂ ಆಕ್ಷೇಪಣೆ ಎತ್ತಲಿಲ್ಲ. ಇದುವರೆಗೂ ಸಭಾಧ್ಯಕ್ಷರು ತಮ್ಮ ವಿವೇಚನೆಯನ್ನು ತಪ್ಪು ರೀತಿಯಲ್ಲಿ ಉಪಯೋಗಿಸಿಲ್ಲ.

ನಾವೆಲ್ಲರೂ ಮನುಷ್ಯರೇ. ನಾವು ನಿಯಮಗಳಿಗೆ ಮತ್ತು ನಿಬಂಧನೆಗಳಿಗೆ ಅಥವಾ ಸಿದ್ಧಾಂತಗಳಿಗೆ ಕಟ್ಟುಬಿದ್ದ ಪ್ರಾಣಿಗಳಾಗಬಾರದು. ನಾವು ಮಾನವರಾಗಿ ಉಳಿಯೋಣ ಮತ್ತು ಆ ದೃಷ್ಟಿಕೋನದಿಂದ ವಿಷಯಗಳನ್ನು ಪರಿಗಣಿಸೋಣ ಮತ್ತು ವಿಶ್ವಾಸ ಎಲ್ಲಿ ಆವಶ್ಯಕವೋ ಅಲ್ಲಿ ವಿಶ್ವಾಸವಿಡೋಣ. ಮತ್ತು ಅವಿಶ್ವಾಸ ತೋರುವಲ್ಲಿ ಅವಿಶ್ವಾಸವನ್ನು ತೋರೋಣ. ಇಲ್ಲದಿದ್ದರೆ ಕೆಲಸ ಮುಂದುವರಿಯದು. ಆದುದರಿಂದ ನಾನು ಶ್ರೀ ಮುನ್ಷಿಯವರ ನಿರ್ಣಯವನ್ನು ಸ್ವೀಕರಿಸಬಹುದು ಎಂದು ಸಲಹೆ ಮಾಡುತ್ತೇನೆ.

**ಶ್ರೀ ಆರ್.ವಿ. ಧುಲೇಕರ್** (ಸಂಯುಕ್ತ ಪ್ರಾಂತಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ನಾನು ಸದನದ ಮುಂದೆ ಇರಿಸಲಾಗಿರುವ ವರದಿಯನ್ನು ಬೆಂಬಲಿಸಲು ನಿಂತಿದ್ದೇನೆ. ಅವುಗಳಲ್ಲಿನ ನೀತಿಗಳಿಗೆ ಸಂಬಂಧಿಸಿದ ಹಾಗೆ ಹೇಳಬೇಕೆಂದರೆ, ಅವು ತುಂಬ ಸೂಕ್ತವಾಗಿವೆ ಮತ್ತು ಅವುಗಳ ವಿರುದ್ಧ ಯಾರೂ

ಯಾವುದೇ ಆಕ್ಷೇಪ ಎತ್ತುವಂತಿಲ್ಲ. ಈ ಸಂಬಂಧವಾಗಿ ನಾನು ಈ ಕೆಳಕಂಡ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ.

ಮೊದಲನೆಯದಾಗಿ ಪ್ರಕರಣ ೧ರಲ್ಲಿ ಹೇಳಿರುವುದಕ್ಕೆ ಯಾರೊಬ್ಬರೂ ಯಾವುದೇ ಆಕ್ಷೇಪ ಎತ್ತುವಂತಿಲ್ಲ. ಅದೇಂದರೆ ನಮ್ಮ ಸಂವಿಧಾನ ರಚನಾಸಭೆಯು ಸಂವಿಧಾನವನ್ನು ಪೂರ್ಣಗೊಳಿಸುವವರೆಗೂ ಮತ್ತು ಅದರ ಅನಂತರವೂ ಹೊಸ ಕೆಳ ಹಾಗೂ ಮೇಲ್ಮನೆಗಳು ಅಸ್ತಿತ್ವಕ್ಕೆ ಬರುವವರೆಗೂ ತನ್ನ ಕೆಲಸ ಮಾಡಲು ಮುಂದುವರಿಯಬೇಕು. ಈ ಸಂಬಂಧವಾಗಿ ನಾನು ಕೇವಲ ಒಂದು ವಿಷಯ ಹೇಳಬಯಸುತ್ತೇನೆ. ನಾವು ಪದೇ ಪದೇ ಉಪಯೋಗಿಸುವ ಪ್ರಭುತ್ವ ಶಾಸನಸಭೆ ಎಂಬ ಶಬ್ದಗಳು ಉಪಯೋಗಿಸುವುಗನ್ನು ಭಾರತೀಯ ಸ್ವಾತಂತ್ರ್ಯ ಅಧಿನಿಯಮಕ್ಕೆ ನಾವು ಸೀಮಿತಗೊಳಿಸಿದರೆ ಸೂಕ್ತವಾಗುತ್ತದೆ. ಕಾರಣ ಏನೆಂದರೆ ಪ್ರಭುತ್ವ ಶಬ್ದ ಹೇಗೇ ಇದ್ದರೂ ಉತ್ತಮವಾಗಿ ಧ್ವನಿಸುವುದಿಲ್ಲ. ೧೯೨೯ರಲ್ಲಿ ಪ್ರಭುತ್ವ ಸ್ಥಾನಮಾನ ಕುರಿತು ತುಂಬ ಚರ್ಚೆ ಆಯಿತು ಮತ್ತು ಅದರ ವಿರುದ್ಧವೂ ಮತ್ತು ಸಂಪೂರ್ಣ ಸ್ವಾತಂತ್ರ್ಯದ ಪರವಾಗಿಯೂ ನಿರ್ಣಯಗಳನ್ನು ಅಂಗೀಕರಿಸಿದ್ದೆವು. ಪ್ರಭುತ್ವದ ಸ್ಥಾನಮಾನ ಹಲವರಿಗೆ ಆಕರ್ಷಣೀಯವಾಗಿ ತೋರಿದರೂ, ಅದನ್ನು ಹಿಂದಿಗೆ ಭಾಷಾಂತರಿಸಿದರೆ, ಅದರ ಅರ್ಥ ಗುಲಾಮಗಿರಿ ಎಂದಾಗುತ್ತದೆ ಮತ್ತು ಪರ್ಷಿಯನ್ ಅಥವಾ ಉರ್ದುವಿಗೆ ಭಾಷಾಂತರಿಸಿದರೆ ಆಗ ಕೂಡ ಅದು ಅದೇ ಅರ್ಥಹೊಂದಿರುತ್ತದೆ. ಆದುದರಿಂದ ನಾವು ಯಾವುದಾದರೂ ಸೂಕ್ತ ಸಂದರ್ಭದಲ್ಲಿ ಕರಡು ರಚನಾ ಸಮಿತಿ ಅಥವಾ ನಮ್ಮ ಸಂವಿಧಾನ ರಚನಾಸಭೆ ಅಥವಾ ಸಭಾಧ್ಯಕ್ಷರು ಅದಕ್ಕೆ ಭಾರತೀಯ ಸಂಸತ್ತು ಅಥವಾ ಭಾರತದ ಸಂಸತ್ತು ಎಂಬಂತಹ ಹೆಸರನ್ನು ಕೊಡುವುದಾದಲ್ಲಿ ಅದು ಬಹಳ ಸೂಕ್ತವಾಗುತ್ತದೆ.

ಅಲ್ಲದೆ ಹಲವು ಜನರಲ್ಲಿ ಅಪಾರ್ಥವನ್ನು ಉಂಟುಮಾಡುವ ಇನ್ನು ಒಂದು ಪ್ರಶ್ನೆ ಇದೆ ಮತ್ತು ಅದು ರಾಜ್ಯಗಳಿಂದ ಬಂದ ಪ್ರತಿನಿಧಿಗಳಿಗೆ ಹಕ್ಕುಗಳು ಏನಿರಬೇಕು ಎಂಬುದು. ಈ ಪ್ರತಿನಿಧಿಗಳು ನಮ್ಮ ಸಮಸ್ಯೆಗಳನ್ನು ಚರ್ಚಿಸಲು ಸಮರ್ಥರಿದ್ದು ಮತ್ತು ಮತದಾನದಲ್ಲಿ ಪಾಲ್ಗೊಳ್ಳಬೇಕು ಎಂದು ನಾನು ತಿಳಿದಿದ್ದೇನೆ. ಯಾರು ಯಾವುದೇ ಸಂಶಯ ಉಳ್ಳವರಿಗೆ ಅವರ ಭಯ ಗಾಬರಿಗಳು ಸಕಾರಣವಲ್ಲ ಎಂದು ಹೇಳಬಯಸುತ್ತೇನೆ. ನಾವೀಗ ಇಡೀ ಭಾರತವನ್ನು ಒಂದು ಪ್ರತ್ಯೇಕ ಘಟಕವಾಗಿ ಪರಿಗಣಿಸಬೇಕು ಮತ್ತು ಪ್ರತಿವ್ಯಕ್ತಿಯೂ, ಮತ್ತು ಇಲ್ಲಿನ ಪ್ರತಿಸದಸ್ಯನೂ ಒಂದು ಗೌರವದ ಸ್ಥಾನವನ್ನು ಪಡೆಯಬೇಕು. ಅವರಿಗೆ ಮಾತನಾಡಲು ಸಾಕಷ್ಟು ವೇಳೆಯನ್ನು ನೀಡದಿರುವುದು ಅಥವಾ ಒಂದು ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸುವ ಸಂದರ್ಭ ಉದ್ಭವಿಸಿದಾಗ (ಅದು ಬೆಂಬಲ ಅಥವಾ ವಿರೋಧ ಬಂದಾಗ ಕೈಗಳೆತ್ತುವ ಸಂದರ್ಭ ಬಂದಾಗ ಬರುತ್ತದೆ) ನಾವು ಅವರಿಗೆ ಮತಹಾಕಲು ಅಥವಾ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಹಕ್ಕಿಲ್ಲ ಎನ್ನುವುದೂ ಸೂಕ್ತವಲ್ಲ ಎಂದು ನಾನು ಭಾವಿಸುತ್ತೇನೆ.

ಇನ್ನೊಂದು ವಿಷಯ ನಾನು ಹೇಳಬಯಸುವುದೆಂದರೆ ರಾಜರಿಂದ ನಾಮಕರಣಗೊಂಡಿರುವ ಪ್ರತಿನಿಧಿಗಳಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಪೂರ್ಣ ಸ್ವಾತಂತ್ರ್ಯವಿರಬಾರದು, ಏಕೆಂದರೆ ಅವರ ರಾಜ್ಯಗಳು ಹಿಂದುಳಿದಿವೆ. ಕೆಲವು ಪ್ರಾಂತಗಳು ತುಂಬ ಪ್ರಗತಿ ಕಂಡಿರುವುದನ್ನು ಮತ್ತು ಕೆಲವು ಹಿಂದುಳಿದಿರುವುದನ್ನು ಕಾಣುತ್ತೇವೆ. ಕೆಲವು ಪ್ರಾಂತಗಳಲ್ಲಿ ನಿಯಮ ನಿಬಂಧನೆಗಳನ್ನು ಪ್ರಜಾಪ್ರಭುತ್ವದ ನೀತಿಗಳ ಮೇಲೆ ಜನಪ್ರಿಯವಾಗಿರುವಂತೆ ರೂಪಿಸಲಾಗಿದೆ. ಕಾರ್ಮಿಕರ ಮತ್ತು ರೈತರ ಹಿತರಕ್ಷಣೆಗಾಗಿ ಹಲವು ಉತ್ತಮ ಕಾನೂನುಗಳನ್ನು ಮಾಡಲಾಗಿದೆ. ನಮ್ಮ ಸಂಯುಕ್ತ ಪ್ರಾಂತಗಳಲ್ಲಿ ವಿಧಾಯಕ ಸಭೆಯು "ಗಾವೋಂ ಹುಕುಮತ" ಮಸೂದೆ ಮತ್ತು "ಪ್ರಜಾತಂತ್ರರಾಜ್ಯ" ಮಸೂದೆಗಳನ್ನು ಅಂಗೀಕರಿಸಿದೆ ಮತ್ತು ಈಗ ಅವುಗಳನ್ನು ಮೇಲ್ಮನೆಗೆ ಅಂಗೀಕಾರಕ್ಕಾಗಿ ಕಳುಹಿಸಲಾಗಿದೆ. ಅಂತಹ ಮಸೂದೆಯನ್ನು ಇತರ ಯಾವುದೇ ಪ್ರಾಂತ್ಯವೂ ಅಂಗೀಕರಿಸಲ್ಲ. ಆದುದರಿಂದ ರಾಜ್ಯ ಪ್ರತಿನಿಧಿಗಳು ಇಲ್ಲಿ ಸ್ಥಾನ ಹೊಂದಿಲ್ಲ ಎಂದು ಹೇಳುವುದು

ಸೂಕ್ತವಲ್ಲ. ಏಕೆಂದರೆ ರಾಜ್ಯಗಳು ಹಿಂದುಳಿದಿವೆ. ಜನರಿಂದ ಚುನಾಯಿತರಾದ ಪ್ರತಿನಿಧಿಗಳಿಗೆ ಮಾತನಾಡಲು ಅವಕಾಶ ಕೊಡಬೇಕು. ಆದರೆ ಆಡಳಿತಗಾರರಿಂದ ನಾಮಕರಣವಾದವರಿಗೆ ಅಂತಹ ಸೌಲಭ್ಯ ನಿರಾಕರಿಸಬೇಕು ಎಂದು ಕೆಲವರು ಸಲಹೆ ಮಾಡಿರುವರು. ನಾನು ಅವರಿಗೂ ಪೂರಾ ಸೌಲಭ್ಯಗಳನ್ನು ಕೊಡಬೇಕು ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ಹಾಗಾಗಿ ಅವರು ತಮ್ಮ ನ್ಯಾಯೋಚಿತ ಸ್ಥಾನವನ್ನು ಪಡೆದುಕೊಳ್ಳಲು ಸಮರ್ಥರಾಗಬಹುದು. ಪ್ರಜಾಪ್ರಭುತ್ವ ಎಂದರೇನು ಎಂದು ಹಾಗೂ ಶಾಸನಸಭೆಯ ನಡವಳಿಗಳು ಹೇಗೆ ಜರುಗುತ್ತವೆ ಎಂಬುದನ್ನು ಸ್ಪಷ್ಟವಾಗಿ ನೋಡಲು ಹಾಗೂ, ಸಾಮೂಹಿಕ ವಿವೇಕ ಹೇಗೆ ಕೆಲಸಮಾಡುತ್ತವೆ ಎಂಬುದನ್ನು ತಿಳಿಯಲು ಅವರಿಗೆ ಅವಕಾಶ ಸಿಕ್ಕಿದರೆ, ಅವರು ಅಲ್ಲಿ ಪ್ರಜಾಪ್ರಭುತ್ವ ವಿಸ್ತರಿಸಲು ಪ್ರಯತ್ನ ಪಡುವರು ಎಂದು ನಾನು ತಿಳಿಯುತ್ತೇನೆ. ಈ ಕಾರಣಕ್ಕಾಗಿಯೇ ನಾನು ರಾಜ್ಯಗಳು ನಾಮಕರಣ ಪ್ರತಿನಿಧಿಗಳಿಗೆ ಪೂರ್ಣ ಹಕ್ಕುಗಳನ್ನು ಹೊಂದಿರಲು ಅಧಿಕಾರ ಕೊಡುವುದು ಸೂಕ್ತವಲ್ಲ ಎಂದು ಅವಮಾನಿಸುವುದು ಸರಿಯಲ್ಲ ಎಂದು ನಾನು ನಂಬುತ್ತೇನೆ. ನನ್ನ ಅಭಿಪ್ರಾಯದಲ್ಲಿ ಪ್ರಜಾಪ್ರಭುತ್ವವನ್ನು ಇನ್ನೊಂದು ಹೆಜ್ಜೆ ಮುಂದೆ ತೆಗೆದುಕೊಂಡು ಹೋಗುವುದು ತುಂಬ ದೊಡ್ಡ ಕೆಲಸ ಮತ್ತು ಈ ಕೆಲಸವನ್ನು ನಮ್ಮ ಡಾ. ಅಂಬೇಡ್ಕರ್ ಮತ್ತು ಅವರ ಸಹೋದ್ಯೋಗಿಗಳು ಮಾಡಿರುತ್ತಾರೆ. ನಾನು ಹೃತ್ಪೂರ್ವಕವಾಗಿ ಅವರನ್ನು ಅಭಿನಂದಿಸಬಯಸುತ್ತೇನೆ.

ಇನ್ನೂ ಒಂದು ಪ್ರಶ್ನೆ ಇದೆ. ಅದೆಂದರೆ ಜನಪ್ರಿಯವಾಗಿ ಚುನಾಯಿತವಾದ ಕಾನೂನು ಮಾಡುವ ಸಂಸ್ಥೆ ಶಾಸನಸಭೆಗೆ ನಾವು ಒಬ್ಬ ಸ್ಪೀಕರನ್ನು ನೇಮಕ ಮಾಡಲಿದ್ದೇವೆ. ಇದು ಒಂದು ಬಹು ಒಳ್ಳೆ ಸಲಹೆ. ಗವರ್ನರ್ ಜನರಲ್ ಅವರಿಗೆ ಅಧಿಕಾರ ಕೊಡುವುದನ್ನು ಎರಡು ಕಾರಣಗಳಿಗಾಗಿ ನಾನು ಒಪ್ಪುವುದಿಲ್ಲ. ಮೊದಲನೆಯದಾಗಿ ಅವರು ಒಬ್ಬ ವಿದೇಶಿ. ಎರಡನೆಯದಾಗಿ ಗವರ್ನರ್ ಜನರಲ್ ಎಂಬ ಶಬ್ದ ನಮ್ಮ ಕಿವಿಗಳಲ್ಲಿ ಚೆನ್ನಾಗಿ ಧ್ವನಿಸುವುದಿಲ್ಲ. ಆದುದರಿಂದ ಅವರು ವಿಧಾಯಕ ಸಭೆಯನ್ನು ಕರೆಯುವುದಕ್ಕೆ ಅಥವಾ ಮುಂದೂಡುವುದಕ್ಕೆ ಅಧಿಕಾರ ಹೊಂದಿರಬಾರದು. ಈಗ ಇತ್ಯರ್ಥವಾಗಬೇಕಾಗಿ ಉಳಿದಿರುವ ಅಂಶವೆಂದರೆ ಯಾರು ವಿಧಾಯಕ ಸಭೆ ಕರೆಯುವ ಮತ್ತು ಮುಂದೂಡುವ ಅಧಿಕಾರ ಹಕ್ಕು ಹೊಂದಿರಬೇಕು ಎಂಬುದು. ಅದು ಸಭಾಧ್ಯಕ್ಷರದೋ ಅಥವಾ ಸ್ಪೀಕರ್ ಅವರದೋ. ಗೌರವಾನ್ವಿತ ಸಭಾಧ್ಯಕ್ಷರು ಸ್ಪೀಕರ್ ಇರಬಾರದು ಎಂದು ಹೇಳಿದಾಗ ಅವರು ಒಬ್ಬ ಸಚಿವರಾಗಿರುವುದರಿಂದ ನನ್ನ ಅಭಿಪ್ರಾಯದಲ್ಲಿ ನಾವು ಒಬ್ಬ ಸ್ಪೀಕರ್‌ರನ್ನು ನೇಮಕ ಮಾಡಿದಾಗ. ಅವರಿಗೆ ವಿಧಾಯಕಸಭೆ ಕರೆಯುವ ಅಥವಾ ಮುಂದೂಡುವ ಹಕ್ಕನ್ನು ಕೊಡಬೇಕು. ಮೊದಲ ಅಂಶಕ್ಕೆ ಈ ವಾದವು ಅನ್ವಯವಾಗುವಂತೆ ಎರಡನೆಯ ಅಂಶಕ್ಕೂ ಅನ್ವಯವಾಗುತ್ತದೆ. ಒಬ್ಬ ಸಚಿವರು ನಮ್ಮ ಸಭಾಧ್ಯಕ್ಷರಾಗಿ ಶಾಸನಸಭೆಯಲ್ಲಿ ಕುಳಿತುಕೊಳ್ಳುವ ಹಕ್ಕು ಹೊಂದಿರಬಾರದು ಎಂಬುದಾದರೆ ಆಗ ಈ ವಾದ ಅಲ್ಲಿಯೇ ಚೆನ್ನಾಗಿ ಅನ್ವಯವಾಗಬಹುದು. ಆದರೆ, ಸಾಂವಿಧಾನಿಕ ವಿಷಯಗಳು ಮತ್ತು ಅವುಗಳ ಉಪಬಂಧಗಳಲ್ಲಿ ನಾವು ನುಸುಳಬಾರದು ಎಂಬ ನಮ್ಮ ಕೆಲವು ಸದಸ್ಯರ ಹೇಳಿಕೆಯನ್ನು ಒಪ್ಪುವುದರಲ್ಲಿ ಯಾವ ಹಾನಿಯೂ ಇಲ್ಲ ಎಂಬುದನ್ನು ಒಪ್ಪುತ್ತೇನೆ.

ಈಗ ದ್ವಿಸದಸ್ಯತ್ವದ ಪ್ರಶ್ನೆ ಉಳಿಯುತ್ತದೆ. ಕೆಲವು ಸದಸ್ಯರು ಬಹುಶಃ ಪ್ರಾಂತೀಯ ವಿಧಾಯಕ ಸಭೆಗಳ ಹಲವು ಪ್ರತಿನಿಧಿಗಳು ಇಲ್ಲಿರುವ ಕಾರಣ ಅವರ ಕೆಲಸ ಬಿಗಿಯಿಲ್ಲದ್ದಾಗುವ ಸಾಧ್ಯತೆ ಇದೆ ಮತ್ತು ಹಾಗಾಗಿ ಅವರ ದ್ವಿಸದಸ್ಯತ್ವ ರದ್ದುಮಾಡಬೇಕು ಎಂದು ಕೆಲವರು ಸಲಹೆ ಮಾಡುತ್ತಾರೆ. ಸಂವಿಧಾನ ರಚನಾಸಭೆಯು ದ್ವಿಸದಸ್ಯತ್ವವನ್ನು ಉಳಿಸಿಕೊಳ್ಳಬೇಕೇ ಬೇಡವೆ ಎಂಬುದನ್ನು ಪರಿಗಣಿಸಬೇಕು. ನನ್ನ ನಮ್ರ ನಿವೇದನೆ ಎಂದರೆ, ಈ ಪ್ರಶ್ನೆಯೊಂದಿಗೆ ಸಂವಿಧಾನ ರಚನಾಸಭೆ ಮಾಡುವುದೇನೂ ಇಲ್ಲ. ಪ್ರಾಂತೀಯ ಶಾಸನ ಸಭೆಗಳು ತಮ್ಮ ಚುನಾಯಿತ ಪ್ರತಿನಿಧಿಗಳನ್ನು ಸಂವಿಧಾನ ರಚನಾಸಭೆಗೆ ಕಳುಹಿಸಿಕೊಡುವ ಹಕ್ಕನ್ನು ಹೊಂದಿವೆ; ಮತ್ತು ಪ್ರಾಂತೀಯ ಶಾಸನ ಸಭೆಗಳು ಅವು ಪೂರ್ಣ ವಿಶ್ವಾಸಹೊಂದಿದ್ದ ಜನರನ್ನು ಕಳುಹಿಸಿಕೊಟ್ಟಿವೆ.

ಆ ಜನ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನ ಅಭಿಪ್ರಾಯವೆಂದರೆ ಆರಂಭದಿಂದಲೂ ಸಂವಿಧಾನ ರಚನಾಸಭೆಯಲ್ಲಿ ನಾವು ಕೆಲಸ ಮಾಡಿರುವಾಗ ಈ ಹಂತದಲ್ಲಿ ನಮ್ಮ ಆದರ್ಶವು ಸಂವಿಧಾನ ರಚನಾಸಭೆಯಲ್ಲಿ ಯಾವ ಬದಲಾವಣೆಯನ್ನು ಮಾಡಬಾರದು ಎಂಬುದೇ ಆಗಿದೆ. ಏಕೆಂದರೆ ನಮ್ಮ ಅನಂತರ ಬರುವವರಿಗೆ ನಾವೀಗಾಗಲೇ ಪೂರೈಸಿರುವ ಕೆಲಸವನ್ನು ಅರ್ಥ ಮಾಡಿಕೊಳ್ಳಲು ಕಷ್ಟವಾಗಬಹುದು. ಎಲ್ಲ ಪ್ರಾಂತ್ಯಗಳ ಬಹುತೇಕ ಪ್ರಮುಖ ಜನರು ಇಲ್ಲಿದ್ದಾರೆ ಎಂಬುದನ್ನು ನಾನು ಒಪ್ಪುತ್ತೇನೆ ಮತ್ತು ಆ ಪ್ರಮಾಣ ಕುರಿತಂತೆ ಕೆಲವು ಪ್ರಾಂತ್ಯಗಳು ತಮ್ಮ ಪ್ರತಿನಿಧಿಗಳ ಪ್ರಮಾಣ ಕಡಿಮೆ ಎಂದು ಹೇಳಬಹುದು. ಆದರೆ ನನ್ನ ನಿವೇದನೆ ಎಂದರೆ ಪ್ರಾಂತ್ಯಗಳಿಂದ ಬಂದಿರುವ ಗಣ್ಯವ್ಯಕ್ತಿಗಳು ಅವರವರ ಪ್ರಾಂತ್ಯಗಳಲ್ಲಿ ಗಣ್ಯರೆಂದು ಪರಿಗಣಿಸಲ್ಪಟ್ಟಿರುವ ಕಾರಣಗಳಿಂದಲೆ, ಈ ಸಭೆಗೆ ಆಯ್ಕೆಯಾಗಿದ್ದಾರೆ. ಆದುದರಿಂದ ಹೊಸ ಚುನಾವಣೆಗಳ ಆಧಾರದ ಮೇರೆಗೆ ಹೊಸ ಶಾಸನಸಭೆ ಸಜ್ಜುಗೊಳ್ಳುವವರೆಗೂ ಅವರ ದ್ವಿಸದಸ್ಯತ್ವವನ್ನು ಉಳಿಸಿಕೊಳ್ಳಬೇಕು ಎಂಬ ವಾದಕ್ಕೆ ಭಾರಿ ಬೆಂಬಲವಿದೆ. ಈ ಪ್ರಶ್ನೆಗೆ ಹೆಚ್ಚು ಒತ್ತು ಕೊಡಬಾರದು ಎಂದು ನಾನು ನಮ್ರವಾಗಿ ನಿವೇದಿಸಿಕೊಳ್ಳುತ್ತಿದ್ದೇನೆ.

ನಮ್ಮ ಹಾಲಿ ಸಂವಿಧಾನದಲ್ಲಿ ಇನ್ನೂ ನಮ್ಮ ಸಂವಿಧಾನ ರಚನಾಸಭೆಯು ಪರಿಗಣಿಸದ ಹಲವು ವಿಷಯಗಳಿವೆ ಎಂದು ಹೇಳಿ, ನಾನು ಮುಕ್ತಾಯಕ್ಕೆ ಬರುತ್ತೇನೆ ಮತ್ತು ನಾನು ಸಂವಿಧಾನ ರಚನಾ ಸಭೆಯನ್ನು ಶಾಸನಸಭೆ ಸೇರುವ ಮುನ್ನ ಒಮ್ಮೆಯಾದರೂ ಕರೆಯಬೇಕು ಎಂದು ಸಲಹೆ ಮಾಡುತ್ತೇನೆ. ಅದರಲ್ಲಿ ನಾವು ಇಡೀ ಕಾನೂನು ಪರಿಸ್ಥಿತಿಯನ್ನು ಪರಿಶೀಲಿಸುತ್ತೇವೆ. ಪ್ರಭುತ್ವ ಶಾಸಕಾಂಗವಾಗಿ ಸೇರುವ ಮೊದಲು ಈ ಸಂವಿಧಾನ ರಚನಾಸಭೆಯ ಒಂದು ಅಧಿವೇಶನವು ನಡೆಯಬೇಕು ಮತ್ತು ಅದರಲ್ಲಿ ಎಲ್ಲ ಉಳಿದ ವಿಷಯಗಳನ್ನು ಪರಿಗಣಿಸಬಹುದು ಮತ್ತು ಸಂವಿಧಾನ ಕರಡು ರಚಿಸುವ ಸಮಿತಿ ಎಲ್ಲ ವಿಷಯಗಳ ಮೇಲೆ ನಮ್ಮ ಸಾಮೂಹಿಕ ಅಭಿಪ್ರಾಯವನ್ನು ಸಂಗ್ರಹಿಸಿಕೊಳ್ಳಬಹುದು. ಅದು ಒಂದು ಒಳ್ಳೆ ಸಂವಿಧಾನವನ್ನು ರಚಿಸಲು ಸಮಿತಿಗೆ ಸಹಾಯವನ್ನು ಮಾಡುತ್ತದೆ. ಈ ಟೀಕೆಗಳೊಂದಿಗೆ ನಾನು ನನ್ನ ಭಾಷಣ ಮುಗಿಸುತ್ತೇನೆ.]*

**ಮಾನ್ಯ ಸಭಾಧ್ಯಕ್ಷರು** : ಈಗ ಶ್ರೀ ತಾಜಮಲ್ ಹುಸೇನ್ ಮಾತನಾಡಬಹುದು. ನಾನು ಅವರು ಸಂಕ್ಷಿಪ್ತವಾಗಿ ಮಾತನಾಡಲಿ ಎಂದು ನಾನು ಕೇಳಿಕೊಳ್ಳುತ್ತೇನೆ. ನಾನು ಚರ್ಚೆಯನ್ನು ಒಂದು ಗಂಟೆಯ ಹೊತ್ತಿಗೆ ಮುಗಿಸಲು ಬಯಸುತ್ತೇನೆ.

**ಶ್ರೀ ತಾಜಮಲ್ ಹುಸೇನ್** : ಮಾನ್ಯರೆ, ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಮಾನ್ಯರೆ, ನಮ್ಮ ಮುಂದಿರುವ ಪ್ರಶ್ನೆ ಈ ಸಂವಿಧಾನ ರಚನಾಸಭೆಯನ್ನು ಹೇಗೆ ರಚಿಸಲಾಯಿತು ಎಂಬುದೇ ಆಗಿದೆ. ಇದನ್ನು ಸಂಸತ್ತಿನ ಯಾವುದೇ ಅಧಿನಿಯಮದಿಂದ ರಚಿಸಲಾಗಿದೆಯೇ? ಮಾನ್ಯರೆ, ಇದನ್ನು ಯಾವುದೇ ಶಾಸನ ಅಥವಾ ಯಾವುದೇ ಕಾನೂನಿಂದ ರಚಿಸಲಾಗಿಲ್ಲ. ಇದು ಏಪ್ರಿಲ್ ೧೬ರ ಒಂದು ಹೇಳಿಕೆಯಿಂದಾಗಿ ಅಸ್ತಿತ್ವಕ್ಕೆ ಬಂದಿದೆ. ತದನಂತರ ಅದು ಅಧಿಕಾರ ಗ್ರಹಿಸಿ ಇಡೀ ಭಾರತದ ಒಂದು ಸ್ವತಂತ್ರ ಸಂಸ್ಥೆಯಾಯಿತು. ಹಾಗೆಯೇ ಅದು ಈಗಲೂ ಅಸ್ತಿತ್ವದಲ್ಲಿದೆ ಮತ್ತು ಮುಂದುವರಿಯುತ್ತಿದೆ. ಸಂವಿಧಾನ ರಚನಾಸಭೆ ಮತ್ತು ಸಂವಿಧಾನ ಮಾಡುವ ಸಂಸ್ಥೆ ಇವುಗಳ ನಡುವೆ ಯಾವ ವ್ಯತ್ಯಾಸವೂ ಇಲ್ಲ ಎಂದು ನಾವು ಬಲ್ಲೆವು. ಎರಡೂ ಸಂಪೂರ್ಣವಾಗಿ ಒಂದೇ. ಯಾವ ವ್ಯತ್ಯಾಸವೂ ಇಲ್ಲ. ಸಂವಿಧಾನ ರಚನಾಸಭೆಯ ಅಧಿವೇಶನವನ್ನು ಕರೆಯಲಾಗಿದೆ. ಗವರ್ನರ್ ಜನರಲ್ ತಮ್ಮ ಅಧಿಕಾರವನ್ನು ಮೀರಿ ನಮ್ಮನ್ನು ಪುನಃ ಕರೆಯಬೇಕು ಎಂದು ಸಲಹೆ ಮಾಡುವುದು ಅರ್ಥವಿಲ್ಲದ್ದು. ತಾವು ಇಲ್ಲಿ ಸಭಾಧ್ಯಕ್ಷರಾಗಿ ನನ್ನ ನಮ್ರ ಅಭಿಪ್ರಾಯದಲ್ಲಿ ಭಾರತಕ್ಕೆ ಒಂದು ಸಂವಿಧಾನವನ್ನು ರೂಪಿಸಲು ಅಥವಾ ದೇಶದ ದೈನಂದಿನ ಆಡಳಿತಕ್ಕಾಗಿ ಕಾನೂನುಗಳನ್ನು ಮಾಡಲು ಸಂವಿಧಾನ ರಚನಾ ಸಭೆ ಸದಸ್ಯರಾದ ಅಧಿವೇಶನವನ್ನು ಕರೆಯಬಹುದು.

ಮಾನ್ಯರೆ, ನಾವು ಒಂದು ಶಾಸನಸಭೆ ಅಂಗವಾಗಿ ಕುಳಿತಾಗ ಅಲ್ಲಿ ಇನ್ನೊಬ್ಬ ಸಭಾಧ್ಯಕ್ಷ ಮತ್ತು ಇನ್ನೊಬ್ಬ ಸ್ಪೀಕರ್ ಇರಬೇಕು ಎಂಬ ಅಂಶವೂ ಈಗ ಉದ್ಭವಿಸಿದೆ. ಸ್ವಾಮಿ, ಸಂವಿಧಾನ ರಚನಾಸಭೆಯ

ಸಭಾಧ್ಯಕ್ಷರು ಶಾಸನಸಭೆಯ ಸಭಾಧ್ಯಕ್ಷರಾಗಿ ಅಥವಾ ಸ್ಪೀಕರಾಗಿ ಮುಂದುವರಿಯಬಹುದು ಎಂದು ನಾನು ತಿಳಿಯುತ್ತೇನೆ. ಆದರೆ ಒಂದೇ ಕಷ್ಟವೆಂದರೆ ತಾವು ದುರದೃಷ್ಟಕರವೋ ಅಥವಾ ಅದೃಷ್ಟವಶವೋ ಸರ್ಕಾರದ ಒಬ್ಬ ಸದಸ್ಯರೂ ಆಗಿದ್ದೀರಿ. ಆದುದರಿಂದ ಅಲ್ಲಿ ತಾವು ಕುಳಿತುಕೊಳ್ಳುವುದು ಸರಿಯಲ್ಲ ಅಥವಾ ಸೂಕ್ತವೂ ಅಲ್ಲ ಎಂಬ ಸಲಹೆಯನ್ನು ಮಾಡಲಾಗಿದೆ. ಏಕೆಂದರೆ ನಿಮ್ಮ ಪ್ರಭಾರದಲ್ಲಿ ಇಲಾಖೆಗಳ ಬಗ್ಗೆ ಹಲವು ಪ್ರಶ್ನೆಗಳನ್ನು ಕೇಳಲಾಗುತ್ತದೆ. ಸರ್ಕಾರದ ಸದಸ್ಯರಾಗಿ ಅಥವಾ ಸ್ಪೀಕರ್ ಆಗಿ ನೀವು ಉತ್ತರ ಕೊಡುವುದು ಕಷ್ಟವಾಗಿರುತ್ತದೆ. ನಾವು ಕೊಟ್ಟಿರುವ ಅಧಿಕಾರವನ್ನು ನಿಮಗೆ ಕೊಟ್ಟಿದ್ದು ನಿಮಗಿಷ್ಟಬಂದು ಯಾರಿಗೇ ಆದರೂ ನೀವು ನಿಮ್ಮ ಅಧಿಕಾರ ನೀಡಬಹುದು. ನೀವು ನಿಮ್ಮ ಕೆಲಸ ನಿರ್ವಹಿಸಲು ಒಬ್ಬ ಡೆಪ್ಯೂಟಿ ಸ್ಪೀಕರ್ ಅನ್ನು ನೇಮಕ ಮಾಡಿಕೊಳ್ಳಬಹುದು ಅಥವಾ ನಮ್ಮಲ್ಲಿ ಯಾರೊಬ್ಬರನ್ನಾದರೂ ನಿಮ್ಮ ಕರ್ತವ್ಯಗಳನ್ನು ನಡೆಸಲು ನೇಮಿಸಬಹುದು. ನಾನೀಗ ಪೂರ್ವನಿದರ್ಶನವಾಗಿ ಒಂದು ಉದಾಹರಣೆ ಕೊಡುತ್ತೇನೆ. ಬಿಹಾರದಲ್ಲಿ ಡಾ. ಸಚ್ಚಿದಾನಂದ ಸಿನ್ಹ ರವರು (ಇವರು ಈಗ ಶಾಸನ ಸಭೆಯ ಸದಸ್ಯರಾಗಿದ್ದಾರೆ) ಪರಿಷತ್ತಿನ ಅಧ್ಯಕ್ಷರೂ ಅದೇ ಸಮಯಕ್ಕೆ ಸರ್ಕಾರದ ಕಾರ್ಯನಿರ್ವಾಹಕ ಪರಿಷತ್ತಿನ ಒಬ್ಬ ಸದಸ್ಯರೂ ಆಗಿದ್ದರು. ಒಂದೇ ಕಾಲಕ್ಕೆ ಎರಡೂ ಸ್ಥಾನಗಳಲ್ಲಿ ಕೆಲಸ ಮಾಡಿದರು. ಬ್ರಿಟಿಷ್ ಆಡಳಿತದಡಿ ಅಂತಹ ಒಂದು ಕೆಲಸ ಮಾಡಬಹುದೆಂದರೆ ನಮ್ಮದೇ ಸ್ವಂತ ಆಡಳಿತದಡಿ ಏಕೆ ಅದನ್ನು ಮಾಡಲಾಗುವುದಿಲ್ಲ? ಆದುದರಿಂದ ನಾನು ವಿಭಿನ್ನ ಸಾಮರ್ಥ್ಯಗಳಲ್ಲಿ ಗವರ್ನರ್ ಜನರಲ್‌ರವರು ಪುನಃ ನಮ್ಮನ್ನು ಕರೆಯುವ ಆವಶ್ಯಕತೆ ಸಂಪೂರ್ಣವಾಗಿ ಇಲ್ಲ ಎಂದು ನಿವೇದಿಸಿಕೊಳ್ಳುತ್ತಿದ್ದೇನೆ. ನಾವೀಗಾಗಲೇ ಅಸ್ತಿತ್ವದಲ್ಲಿದ್ದೇವೆ. ನೀವು ಬಯಸಿದ ಯಾವುದೇ ಸಮಯಕ್ಕೆ ಸಭೆಯನ್ನು ಕರೆಯಬಹುದು ನಿಮಗೆ ಆವಶ್ಯಕತೆ ಇದ್ದಾಗ ನೀವು ನಿಮ್ಮ ಸ್ಥಾನ ಬಿಟ್ಟು ಕೊಡುವುದು ಮತ್ತು ನಿಮ್ಮ ಸ್ಥಾನದಲ್ಲಿ ನಿಮ್ಮ ಕರ್ತವ್ಯಗಳನ್ನು ನಡೆಸಲು ಒಬ್ಬ ಡೆಪ್ಯೂಟಿ ಸ್ಪೀಕರನ್ನು ನೇಮಕ ಮಾಡಬಹುದು ಸೂಕ್ತ.

**ಪಂಡಿತ ಹೀರಾಲಾಲ್ ಶಾಸ್ತ್ರಿ :** (ಜೈಪುರ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ನನ್ನ ಗೆಳೆಯರಾದ ಡಾ. ದೇಶ್‌ಮುಖ್ ಮತ್ತು ಶ್ರೀ ಧುಲೇಕರ್ ಅವರು ತಮ್ಮ ಮುಂದೆ ನನ್ನ ನಮ್ರ ನಿವೇದನೆ ಮಾಡಿಕೊಳ್ಳಲು ನನ್ನನ್ನು ಕೇಳಿಕೊಂಡಿದ್ದಾರೆ. ಕೆಲವರು ಸಾಂವಿಧಾನಿಕ ಮತ್ತು ಕಾನೂನು ದೃಷ್ಟಿಯಿಂದ ಭಾರತೀಯ ರಾಜ್ಯಗಳ ಪ್ರತಿನಿಧಿಗಳಿಗೆ ಇಲ್ಲಿ ಸಮಾನ ಹಕ್ಕುಗಳನ್ನು ಕೊಡಬಾರದು ಎಂಬ ಅಭಿಪ್ರಾಯ ತಳೆದಿರುವರು; ಇತರರು ರಾಜ್ಯಗಳು ಹಿಂದುಳಿದಿದ್ದರೂ ಅವರು ಪೂರಾಪಾಲ್ಗೊಳ್ಳಲು ಅವಕಾಶ ಕೊಡಬೇಕು ಎಂದು ಸಲಹೆ ಮಾಡಿರುವರು. ನಾನು ಈ ಸಂವಿಧಾನ ರಚನಾಸಭೆಯನ್ನು ಗೌರವದಿಂದ ನೋಡುತ್ತೇನೆ ಮತ್ತು ಅದರ ಸದಸ್ಯನಾಗಿ ಚುನಾಯಿತನಾಗಿರುವುದು ಒಂದು ಗೌರವ ಎಂದು ಪರಿಗಣಿಸುತ್ತೇನೆ. ಆದರೆ ವಿಶೇಷ ಸಂದರ್ಭಗಳಡಿ ಈ ಸಭೆಯನ್ನು ಕರೆಯಲಾಗಿದ್ದು ವಿಭಿನ್ನ ಅಭಿಪ್ರಾಯಗಳುಳ್ಳ ಹಲವಾರು ವ್ಯಕ್ತಿಗಳನ್ನು ಅದರಲ್ಲಿ ಸೇರಿಸಲಾಗಿದೆ ಎಂದು ಹೇಳುವಲ್ಲಿ ನಾನು ಅಸಹಾಯಕ. ಇಲ್ಲಿ ಪ್ರಾಂತೀಯ ಶಾಸನ ಸಭೆಗಳಿಂದ ಬಂದ ಹಲವರು ಇದ್ದಾರೆ ಮತ್ತು ಹಲವರು ಭಾರತೀಯ ರಾಜ್ಯಗಳಿಂದ ಬಂದಿದ್ದಾರೆ. ರಾಜ್ಯಗಳಿಂದ ಬಂದವರ ಪೈಕಿ ವಿವಿಧ ಪ್ರವರ್ಗಗಳವರಿದ್ದಾರೆ. ಆಡಳಿತಗಾರರಿಂದ ನಾಮನಿರ್ದೇಶನ ಹೊಂದಿದ ಕೆಲವರಿದ್ದಾರೆ, ಕೆಲವರು ಸ್ವಯಂ ನಾಮನಿರ್ದೇಶನದ ಮೂಲಕ ಬಂದವರಾಗಿದ್ದಾರೆ. ಕೆಲವು ಜನ ಚುನಾಯಿತ ಪ್ರತಿನಿಧಿಗಳೆಂದು ಕರೆಯಲಾಗಿರುವವರು. ಅವರನ್ನು ಚುನಾಯಿತರಾದವರು ಎಂದು ಕರೆಯುವುದಕ್ಕೆ ಸಹಜ ಆಕ್ಷೇಪವಿದೆ. ಇನ್ನೂ ಕೆಲವರು ಸಣ್ಣ ಪ್ರಮಾಣದಲ್ಲಾದರೂ ತಾವೇ ಆಳುವ ಮುಖ್ಯಸ್ಥರಾಗಿದ್ದಾರೆ. ಆ ವರ್ಗದಲ್ಲಿ ರಾಜರು ಅಥವಾ ಅವರ ವಂಶಸ್ಥರು ವಂಶೀಯರು. ಈ ವಿಧದಲ್ಲಿ ಹಲವು ವಿಭಿನ್ನ ವರ್ಗಗಳ ಜನರು ಇಲ್ಲಿ ಬಂದಿದ್ದಾರೆ. ಸಂದರ್ಭಗಳ ಒತ್ತಡ ಹಾಗಿದ್ದವು; ನಮ್ಮನ್ನು ಹಿಂಜರಿಕೆಯಿಂದಲೇ ಆಹ್ವಾನಿಸಲಾಗಿದೆ ಮತ್ತು ನಾವು ಹಲವು ತೊಡಕುಗಳನ್ನು ದಾಟಿ ಇಲ್ಲಿಗೆ ತಲುಪಿದ್ದೇವೆ. ಈ ವಿಷಯಗಳನ್ನು ನಾನು ಮತ್ತೆ ಹೇಳುವುದಿಲ್ಲ;

ನೀವೆಲ್ಲ ಅವನ್ನು ಚೆನ್ನಾಗಿ ಬಲ್ಲಿರಿ. ಆದರೆ ಇಂದು ನಾವು ಇಲ್ಲಿ ಪ್ರಾಂತ್ಯಗಳ ಪ್ರತಿನಿಧಿಗಳಂತೆ ಕುಳಿತಿದ್ದೇವೆ. ನಾವು ಇಲ್ಲಿಗೆ ಭಿಕ್ಷುಕರಾಗಿ ಬಂದಿದ್ದೇವೆ ಎಂದು ನೀವು ಭಾವಿಸುವುದಿಲ್ಲ ಎಂದು ಆಶಿಸುತ್ತೇನೆ. ದೇಶದ ಸ್ವಾತಂತ್ರ್ಯಕ್ಕಾಗಿ ಇಲ್ಲಿ ಹೋರಾಟ ಮಾಡುತ್ತಿದ್ದ ಸಮಯವೊಂದಿತ್ತು. ಆ ಹೋರಾಟದಲ್ಲಿ ಭಾರತೀಯ ರಾಜ್ಯಗಳ ಜನ ಯಾವುದೇ ಆಹ್ವಾನವಿಲ್ಲದೆ ಪಾಲ್ಗೊಂಡರು ಮತ್ತು ತಮ್ಮೊಂದಿಗೆ ಭುಜಕ್ಕೆ ಭುಜಕೊಟ್ಟು ಹೋರಾಡಿದರು. ಅವರಿಗೆ ಯಾವ ಆಹ್ವಾನದ ಅಗತ್ಯವಿರಲಿಲ್ಲ. ಆದರೆ ಇಂದು ನಾವು ಆಹ್ವಾನಿತರಾಗದೆ ಬಂದಿಲ್ಲ. ನಾವು ಇಲ್ಲಿ ಯಾವುದೇ ಒಂದು ಅಥವಾ ಇನ್ನೊಂದು ವಿಧದ ಆಹ್ವಾನದಿಂದ ಇಲ್ಲಿಗೆ ಬಂದಿದ್ದೇವೆ ಮತ್ತು ಈ ಸಮೂಹದಲ್ಲಿ ನಾವಿದ್ದೇವೆ. ಈಗ ಬಂದಮೇಲೆ ವಿಭಿನ್ನ ವಿಧಗಳ ಉದ್ದೇಶಗಳನ್ನು ನೆರವೇರಿಸಬೇಕಾಗಿದೆ. ನಮಗೆ "ಮಿತ್ರ, ನೋಡಿಲ್ಲಿ ನೀನು ಮೂರು ವಿಷಯಗಳನ್ನು ಕುರಿತು ವ್ಯವಹರಿಸಬಹುದು. ಆದರೆ ನೀನು ಉಳಿದುದನ್ನು ಮುಟ್ಟುವಂತಿಲ್ಲ. ಏಕೆಂದರೆ ಅದು ನಿನ್ನ ಹಿತಾಸಕ್ತಿಗೆ ವಿರುದ್ಧ" ಎಂದು ನಮಗೆ ಹೇಳಬಹುದು. ಇದನ್ನು ಹೇಳಬಹುದು. ಆದರೆ ನೀವು ಅದನ್ನು ಹೇಳಬಾರದು. ನಾವು ನಾವಾಗಿಯೇ ನಮಗೆ ಚರ್ಚಿಸಲು ಸೂಕ್ತವಲ್ಲದುದರಿಂದ ದೂರನಿಲ್ಲುತ್ತೇವೆಂದು ನೀವು ನಮ್ಮ ಮೇಲೆ ಭರವಸೆಯನ್ನು ಇಡಬಹುದು. ನಾವು ನಾವಾಗಿಯೇ ಆ ವಿಷಯಗಳಲ್ಲಿ ತಲೆಹಾಕದಿರಬಹುದು. ಆದರೆ ಅದೇ ನಿರ್ಧಾರವಾದರೆ ಆಗ ನಾನು ತಮ್ಮಿಂದ ಕೇಳುವುದು ಏನೂ ಇರುವುದಿಲ್ಲ. ನಮ್ಮ ಹಕ್ಕುಗಳನ್ನು ಪೂರಾ ಗುರುತಿಸಲಾಗಿಲ್ಲ ಎಂಬುದು ನಮ್ಮ ದುರದೃಷ್ಟ. ಆದರೆ ನಾವು ಇಲ್ಲಿ ಹಕ್ಕಿನಿಂದ ಇರುವುದಾದರೆ, ಅವರು ಆಡಳಿತಗಾರರಾದರೇನು ಅಥವಾ ರಾಜರಾದರೇನು ಅಥವಾ ರಾಜವಂಶಸ್ಥರಾದರೇನು, (ಈ ಆಡಳಿತಗಾರರಿಂದ) ನಾಮನಿರ್ದೇಶನಗೊಂಡವರಾಗಿ ಬಂದವರಾದರೇನು ಅಥವಾ ಸ್ವಯಂ ನಾಮನಿರ್ದೇಶನದಿಂದ ಬಂದವರಾದರೇನು ಅಥವಾ ಅವರು ಪ್ರಧಾನಮಂತ್ರಿಗಳಾದರೇನು, ಎಲ್ಲರೂ ಸಮ. ಅವರು ಯಾವ ವಿಧದಲ್ಲಿಯೂ ಹಿಂದುಳಿದವರಲ್ಲ. ಪ್ರಗತಿಪರ ಮತ್ತು ಕ್ರಿಯಾಶೀಲ ಮನುಷ್ಯರಾಗಿದ್ದಾರೆ. ಎಲ್ಲರೂ ಇಲ್ಲಿಗೆ ಯಾವುದೇ ಜಾತಿ ಅಥವಾ ಮತದ ಮನ್ನಣೆಯಿಲ್ಲದೆ ಬಂದವರಾಗಿದ್ದಾರೆ ಮತ್ತು ಎಲ್ಲರ ಹಕ್ಕುಗಳು ಸಮನಾಗಿರಬೇಕು. ಅದು ನನ್ನ ಅಭಿಪ್ರಾಯ]*

**ಮಾನ್ಯ ಸಭಾಧ್ಯಕ್ಷರು :** ಇದರ ಕುರಿತಾಗಿ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ನಾನು ಈಗ ಡಾ. ಅಂಬೇಡ್ಕರ್‌ರನ್ನು ಉತ್ತರಿಸಲು ಕೇಳಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ :** ಮಾನ್ಯ ಸಭಾಧ್ಯಕ್ಷರೆ, ಸಮಿತಿಯು ಮಾಡಿರುವ ವರದಿಗೆ ಮಿಶ್ರ ಪ್ರತಿಕ್ರಿಯೆಯು ಬಂದಿರುವುದು ಸ್ಪಷ್ಟ. ಸದನದ ಕೆಲವು ಸದಸ್ಯರು ಅದನ್ನು ಗೊಂದಲದ ದಾಖಲೆ ಎಂದು ವಿವರಿಸಿದ್ದಾರೆ. ಆ ರೀತಿಯಲ್ಲಿ ವರದಿಯನ್ನು ವಿವರಿಸುವವರಿಗೆ ಯಾವುದೇ ಉತ್ತರ ಕೊಡಲು ನಾನು ಪ್ರಯತ್ನಿಸುವುದಿಲ್ಲ. ಏಕೆಂದರೆ ವೈಯಕ್ತಿಕವಾಗಿ ನಾನು ಅವರು ಮಾಡಿರುವ ವಾದಗಳು ಪರಿಗಣನೆಗೆ ಅರ್ಹವಲ್ಲ. ನಾನು ನನ್ನ ಗೆಳೆಯರಾದ ಡಾ. ದೇಶ್‌ಮುಖ್ ಮತ್ತು ಶ್ರೀ ವಿಶ್ವನಾಥ್ ದಾಸ್ ಅವರು ಎತ್ತಿದ ಕೆಲವು ತಾಂತ್ರಿಕ ಅಂಶಗಳಿಗೆ ಉತ್ತರಿಸುತ್ತೇನೆ. ಡಾ. ದೇಶ್‌ಮುಖ್ ಅವರು ಸಮಿತಿಯು ಮಾಡಿರುವ ಎರಡು ಶಿಫಾರಸುಗಳನ್ನು ಉಲ್ಲೇಖಿಸಿರುವರು. ಒಂದು, ಸಮಿತಿಯ ಎಲ್ಲ ಚರ್ಚೆಗಳಲ್ಲಿ ಪಾಲ್ಗೊಳ್ಳಲು ರಾಜ್ಯಗಳನ್ನು ಪ್ರತಿನಿಧಿಸುವ ಸದಸ್ಯರಿಗೆ ಕೊಡಬೇಕಾದ ಅನುಮತಿಯನ್ನು ಕುರಿತು ಇದೆ. ಎರಡನೆಯ ಶಿಫಾರಸು ಅವರು ಉಲ್ಲೇಖಿಸಿರುವುದು ರಾಜ್ಯ ಸಚಿವರುಗಳನ್ನು ಕುರಿತು ಇದೆ. ಇವರಿಗೆ ಸಮಿತಿಯು ಸಂವಿಧಾನ ರಚನಾಸಭೆಯ ನಡವಳಿಗಳಲ್ಲಿ ಕೂಡ ಪಾಲ್ಗೊಳ್ಳಲು ಅನುಮತಿಸುವುದು ಅಪೇಕ್ಷಣೀಯವಲ್ಲದಿರಬಹುದು. ಡಾ. ದೇಶ್‌ಮುಖ್ ಅವರು ಕೇವಲ ತಾರ್ಕಿಕತೆಗೆ ಹಾಗೂ ಅನುಕೂಲಗಳಿಗೆ ತಕ್ಕಂತೆ ವರದಿಯನ್ನು ನೀಡಿದೆ. ಸಮಿತಿಯು ಇದು ಸಾಂವಿಧಾನಿಕವೇ ಎಂಬುದನ್ನು ಹೇಳಿಲ್ಲ. ಈ ಪ್ರಶ್ನೆಯಿಂದ ನನಗೆ ಆಶ್ಚರ್ಯವಾಗಿದೆ. ಏಕೆಂದರೆ ಡಾ. ದೇಶ್‌ಮುಖ್ ಅವರು ಸ್ವತಃ ಒಬ್ಬ ವಕೀಲರು. ಹಾಗೆ ನೋಡಿದರೆ ನಾವು ವಾಸ್ತವಿಕವಾಗಿ ಸಂವಿಧಾನ

ಹೊಂದಿಲ್ಲ ಎಂಬುದನ್ನು ಅವರು ಮನಗಾಣಬೇಕು. ಸಂವಿಧಾನ ರಚನಾಸಭೆ ಒಂದು ಸಂವಿಧಾನವನ್ನು ಸಿದ್ಧಪಡಿಸುತ್ತಿದೆ. ಮತ್ತು ಸಂವಿಧಾನ ರಚನಾ ಸಭೆ ಏನನ್ನೆ ಮಾಡಿದರೂ ಅದು ಸಾಂವಿಧಾನಿಕವೆ (ಕೇಳಿ, ಕೇಳಿ). ಸಂವಿಧಾನ ರಚನಾಸಭೆಯು ರಾಜ್ಯ ಪ್ರತಿನಿಧಿಗಳು ಪರಿಪೂರ್ಣವಾಗಿ ಸಾಂವಿಧಾನಿಕವಾದುದರಲ್ಲಿ ಪಾಲ್ಗೊಳ್ಳಬಾರದು ಎಂದು ಹೇಳಿದರೆ, ಅದು ಸಂಪೂರ್ಣವಾಗಿ ಸಂವಿಧಾನದ ಪ್ರಕಾರವೇ ಇರುತ್ತದೆ. ಆದುದರಿಂದ ಈ ಬಗೆಯ ಟೀಕೆ ತಪ್ಪು ಗ್ರಹಿಕೆಯಿಂದ ಕೂಡಿದೆ ಎಂದು ನನಗೆನಿಸಿದೆ. ನನ್ನ ಮಿತ್ರ ವಿಶ್ವನಾಥ ದಾಸ್‌ರವರು ಎತ್ತಿದ ಅಂಶವನ್ನು ಕುರಿತಂತೆ ಹೇಳುವುದಾದರೆ, ಅವರು ತಾವು ಮಾಡಿರುವ ಟೀಕೆಗಳು ಸೂಕ್ತವೇ ಎಂದು ಅವರೇ ಯೋಚಿಸದೆ ಇರುವುದು ನನಗೆ ಆಶ್ಚರ್ಯವನ್ನು ತಂದಿದೆ. ನಾನು ಅವರು ಹೇಳಿದ್ದನ್ನು ಸರಿಯಾಗಿ ನೆನಪಿಟ್ಟಿದ್ದೆ ಆದಲ್ಲಿ ಅವರ ಟೀಕೆಗಳು ಎರಡು ಅಂಶಗಳಿಗೆ ಸಂಬಂಧಿಸಿವೆ. ಅವರು ಸಮಿತಿಯು ಅವಿಭಾಜ್ಯ ಸಂಸ್ಥೆಯಾಗಿದ್ದು, ಸಮಗ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂವಿಧಾನ ರಚನಾಸಭೆಯನ್ನು ಎರಡು ಭಾಗಗಳಾಗಿ ವಿಭಾಗಿಸುತ್ತಿತ್ತು ಎಂದು ಹೇಳಿದ್ದಾರೆ. ಒಳ್ಳೆಯದು, ಅವರು ಒಂದು ಸಂವಿಧಾನದ ಕಾರ್ಯ ಒಂದು ಸಾಧಾರಣ ಕಾನೂನು ಮಾಡುವುದಕ್ಕಿಂತ ತುಸು ಭಿನ್ನ ಎಂದು ಮೆಚ್ಚುವ ಸ್ಥಿತಿಯಲ್ಲಿ ಇದ್ದಾರೆಯೋ ಎಂಬುದು ನನಗೆ ಗೊತ್ತಿಲ್ಲ. ವ್ಯತ್ಯಾಸವನ್ನು ಅಡಕವಾಗಿ ಹೇಳಬೇಕೆಂದರೆ, ಸಂವಿಧಾನ ರಚನಾಸಭೆಯು ಸಂವಿಧಾನಕ್ಕೆ ಬದ್ಧವಾಗಿಲ್ಲ. ಆದರೆ ಒಂದು ಶಾಸನಸಭೆ ಸಂವಿಧಾನಕ್ಕೆ ಬದ್ಧವಾದುದಾಗಿದೆ. ಸಂವಿಧಾನ ರಚನಾಸಭೆಯು ಒಂದು ಶಾಸನ ಸಭೆಯಾಗಿ ಕಾರ್ಯನಿರ್ವಹಿಸುವಾಗ ಅದು ಸ್ವಾತಂತ್ರ್ಯ ಅಧಿನಿಯಮದ ಅಡಿ ಅಳವಡಿಸಿದಂತೆ ಭಾರತ ಸರಕಾರದ ಕಾಯಿದೆಗೆ ಬದ್ಧವಾಗಿರುತ್ತವೆ. ಯಾರೇ ಆಗಲಿ ಒಂದು ಕ್ರಮಬದ್ಧತೆಯ ಬಗ್ಗೆ ಪ್ರಶ್ನೆಯನ್ನು ಎತ್ತಬಹುದಾಗಿದೆ. ಯಾರೇ ಆಗಲಿ, ಒಂದು ನಿರ್ದಿಷ್ಟ ಪ್ರಸ್ತಾವವು ಅಧಿಕಾರಕ್ಕೆ ಮೀರಿದ್ದೊ ಅಥವಾ ಒಳಪಡುವಂತಹುದೊ ಎಂದು ಹೇಳುವ ಸ್ಥಿತಿಯಲ್ಲಿರುತ್ತಾರೆ. ಆದರೆ ಅಂತಹ ಒಂದು ಪ್ರಶ್ನೆಯು ಸಂವಿಧಾನ ರಚನಾಸಭೆಯು ಸಂವಿಧಾನ ರೂಪಿಸುವಾಗ ಖಂಡಿತಾ ಉದ್ಭವಿಸುವುದಿಲ್ಲ. ಮತ್ತು ಅದು ಈ ಎರಡು ಕಾರ್ಯಗಳೂ ವಿಭಿನ್ನ, ಅವುಗಳ ಉದ್ದೇಶಗಳೂ ವಿಭಿನ್ನವಾಗಿದ್ದವು ಎಂದು ತಿಳಿದುಕೊಂಡಿದ್ದರೆ ಸಾಕಾಗಿತ್ತು ಎಂದು ನನಗೆನಿಸುತ್ತದೆ. ನಾವು ಗೊಂದಲ ತಪ್ಪಿಸಲು ಉದ್ದೇಶಿಸಿದರೆ ಮಾಡಬಹುದಾದ ವಾಸ್ತವ ವಿಧಾನವೆಂದರೆ, ಸಂವಿಧಾನ ರಚನಾ ಸಭೆಯು ಶಾಸನಸಭೆಗಿಂತ ಪ್ರತ್ಯೇಕವಾಗಿ ಅಧಿವೇಶನ ಸೇರುವಂತೆ ಮಾಡುವುದೇ ಆಗಿದೆ. ಅವರು ಅಳವಡಿಕೆಗಳ ವಿರುದ್ಧ ದೂರಿದರು ಕೂಡ, ಈಗ ನಾನು ಧೈರ್ಯವಾಗಿ ೧೯೩೫ರ ಭಾರತ ಸರಕಾರದ ಅಧಿನಿಯಮದಲ್ಲಿನ ಅಳವಡಿಕೆಗಳಿಗೆ ಇಲ್ಲಿ ಯಾರೂ ಜವಾಬ್ದಾರರಲ್ಲ ಎಂದು ಹೇಳಲೇಬೇಕು.

ಅವರು ಭಾರತದ ಸ್ವಾತಂತ್ರ್ಯದ ಅಧಿನಿಯಮ ಪ್ರಕರಣ ೮, ಉಪ–ಪ್ರಕರಣ ೧ನ್ನು ನೋಡಿದರೆ ಈ ಪ್ರಕರಣ ಅಡಿಯಲ್ಲಿ, ಈಗ ಸಂವಿಧಾನ ರಚನಾಸಭೆಗೆ ವಹಿಸಲಾಗಿರುವ ೧೯೩೫ರ ಭಾರತದ ಅಧಿನಿಯಮವನ್ನು ನಮ್ಮ ಈಗಿನ ಅನುಕೂಲಕ್ಕಾಗಿ ಮಾರ್ಪಡಿಸುವ ಅಧಿಕಾರವು ಸಂಪೂರ್ಣವಾಗಿ ಗವರ್ನರ್ ಜನರಲ್ ಅವರ ಕೈಯಲ್ಲಿ ಇದ್ದಿತೆಂಬುದು ತಿಳಿದುಬರುತ್ತದೆ. ಗವರ್ನರ್ ಜನರಲ್ ಯಾವ ಮಾರ್ಪಾಟುಗಳನ್ನು ಮಾಡಬೇಕೆಂಬುದನ್ನು ನಿರ್ಧರಿಸಲು ಯಾವುದಾದರೂ ಮೂಲದಿಂದ ಸಲಹೆ ತೆಗೆದುಕೊಳ್ಳಬೇಕು. ಆದುದರಿಂದ ಪ್ರಸಕ್ತ ಸಮಯದಲ್ಲಿ ಯಾರೂ ಅದಕ್ಕೆ ಜವಾಬ್ದಾರರಲ್ಲ. ಸಂವಿಧಾನ ರಚನಾಸಭೆಯು ಭಾರತ ಸರಕಾರದ ಅಧಿನಿಯಮವನ್ನು ಉಪಕ್ರಮಿಸಲಾದ ಅಳವಡಿಕೆಗಳೊಂದಿಗೆ ತೃಪ್ತವಾಗಿಲ್ಲದಿದ್ದಲ್ಲಿ ಅದೇ ಪ್ರಕರಣ ೮ ಉಪಖಂಡ (೧) ಸಂವಿಧಾನ ರಚನಾಸಭೆಯು ಅಳವಡಿಕೆಗಳನ್ನು ಬದಲಾಯಿಸಲು ತನ್ನ ಅಧಿಕಾರವನ್ನು ಹೊಂದಿದೆ ಎಂದೂ ಹಾಗೂ ಅದು ತನಗೆ ಅಗತ್ಯವೆಂದು ತೋರಿದ ಇತರೆ ಬದಲಾವಣೆಯನ್ನು ಮಾಡಬಹುದು ಎಂದು ಹೇಳುತ್ತದೆ. ಆದುದರಿಂದ ಮಾನ್ಯರೆ, ನಾನು ಸಮಿತಿಯ ಟೀಕೆಗಳಲ್ಲಿ ಯಾವ ಹುರುಳು ಇಲ್ಲವೆಂದು ನಿವೇದಿಸಿಕೊಳ್ಳುತ್ತಿದ್ದೇನೆ.

ನನ್ನ ಗೆಳೆಯರಾದ ಶ್ರೀ ಕೃಷ್ಣಮಾಚಾರಿಯವರು ಉಲ್ಲೇಖಿಸಿದ ಇನ್ನೊಂದು ಅಂಶ; ಅವರು ಶ್ರೀ ಮುನ್ಷಿಯವರ ನಿರ್ಣಯವು ವರದಿಯ ಎರಡನೆಯ ಭಾಗವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಕೈ ಬಿಟ್ಟಿದೆ ಎಂದು ಹೇಳುತ್ತಾರೆ. ಅದು ಸಭಾಧ್ಯಕ್ಷರು ಪರಮಾಧಿಕಾರ ಉಳ್ಳವರು ಎಂಬ ಪ್ರಶ್ನೆ ಕುರಿತದ್ದಾಗಿದೆ. ಅವರು, ಶ್ರೀ ಮುನ್ಷಿಯವರು ರೂಪಿಸಿ ನಮಗೆ ಸಲ್ಲಿಸಿದ ನಿರ್ಣಯವು ವಾಸ್ತವವಾಗಿ ಸಮಿತಿಯ ಎಲ್ಲ ಪ್ರಸ್ತಾವಗಳನ್ನು ಅಂಗೀಕರಿಸಿದ್ದು ಈ ನಿರ್ದಿಷ್ಟ ಷರತ್ತನ್ನು ಏಕೆ ಒಳಗೊಂಡಿಲ್ಲ ಎಂದು ಪ್ರಶ್ನಿಸಿದ್ದಾರೆ. ಶ್ರೀ ಕೃಷ್ಣಮಾಚಾರಿಯವರು ಜಾಗರೂಕತೆಯಿಂದ ವರದಿಯನ್ನು ಓದಿದಲ್ಲಿ ಅವರು ವರದಿಯ ನಿರ್ದಿಷ್ಟ ಭಾಗವು ಸಮಿತಿಯ ಟೀಕೆ ಮಾತ್ರ ಮತ್ತು ಅದು ಒಂದು ಶಿಫಾರಸು ಅಲ್ಲ ಎಂಬುದನ್ನು ಕಂಡುಕೊಳ್ಳುತ್ತಾರೆ ಎಂದು ನಾನು ಹೇಳಬಯಸುತ್ತೇನೆ. ಆದುದರಿಂದ ನಾನು ನನ್ನ ಮಿತ್ರ ಶ್ರೀ ಮುನ್ಷಿಯವರು ಅದನ್ನು ಉಲ್ಲೇಖಿಸದಿರುವುದು ನ್ಯಾಯೋಚಿತವಾಗಿಯೇ ಇದೆ ಎಂದು ನಿವೇದಿಸಿಕೊಳ್ಳುತ್ತಿದ್ದೇನೆ.

**ಪಂಡಿತ್ ಲಕ್ಷ್ಮಿಕಾಂತ ಮೈತ್ರ :** ಮಾನ್ಯರೆ, ನಾನು ಡಾ. ಅಂಬೇಡ್ಕರ್ ಅವರನ್ನು ಕೆಲವು ಮಾಹಿತಿ ಕೇಳಬಯಸುತ್ತೇನೆ. ಮೊದಲನೆಯದಾಗಿ ಅವರು ಮರು ಅಳವಡಿಕೆ ಆವಶ್ಯಕತೆ ಇದೆಯೇ ಅಥವಾ ಇಲ್ಲವೇ ಎಂಬುದು. ಅವರಿಗೆ ಮನದಟ್ಟಾಗಿದೆಯೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ. ಹಾಗಿದ್ದಲ್ಲಿ ಅವರ ಆಲೋಚನೆಯಲ್ಲಿ ಸಂವಿಧಾನ ರಚನಾಸಭೆಯು ಮುಂದಿನ ಅಧಿವೇಶನದಲ್ಲಿ ಅಥವಾ ಶೀಘ್ರವಾಗಿ ಕೆಲವು ವಿಷಯಗಳ ವಿಷಯದಲ್ಲಿ ಯಾವುದೇ ಹೊಸ ಅಳವಡಿಕೆಯನ್ನು ತರಲು ಉದಾಹರಣೆಗೆ ಭಾರತ ಸರಕಾರದ ಅಧಿನಿಯಮದಲ್ಲಿ ಸ್ಪೀಕರ್ ಹುದ್ದೆಯ ರದ್ದು ಮತ್ತು ಅದನ್ನು ಇಲ್ಲಿ ಜಾರಿಗೆ ತರುವುದು. ಇನ್ನು ಕೆಲವು ವಿಷಯಗಳಿವೆ ಕೂಡ. ಉದಾಹರಣೆಗೆ ಸಂವಿಧಾನ ರಚನಾಸಭೆಯ ಸದಸ್ಯರಾಗಿರದ ಸಚಿವರು ಸದಸ್ಯರಾಗಬೇಕು ಎಂಬುದು. ಅಂತಹ ಭಾಗಗಳ ವಿಷಯವಾಗಿ ಮರು ಅಳವಡಿಕೆಗೆ ಯಾವುದೇ ಇತರ ಕ್ರಮವನ್ನು ತರಲು ಆಲೋಚಿಸಲಾಗಿದೆಯೆ?

ಎರಡನೆಯದಾಗಿ, ಅವರು ತಮ್ಮ ಭಾಷಣದಲ್ಲಿ ಸಜ್ಜಾಗಲಿರುವ ಇಲಾಖೆಯ ಆಡಳಿತಾತ್ಮಕ ನಿಯಂತ್ರಣದ ಪ್ರಶ್ನೆಗೆ ತಾವು ಹೋಗುವುದಿಲ್ಲ ಎಂಬ ಅಂಶ ಉಲ್ಲೇಖಿಸಿರುವ ಮತ್ತು ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರೆ ಅದು ಉಲ್ಲೇಖದ ನಿಬಂಧನೆಗಳಾಚೆಯೇ ಇದೆ ಎಂದು ಅವರು ಹೇಳಿದರು. ಈ ಸಂಸ್ಥೆಗೆ ಅದು ಶಾಸನಸಭೆಯಾಗಿ ಕೆಲಸ ಮಾಡಬೇಕಾದಾಗ ಸಜ್ಜು ಮಾಡುತ್ತಲಿರುವ ಇನ್ನೊಂದು ಸ್ವತಂತ್ರ ಆಡಳಿತ ವ್ಯವಸ್ಥೆಯ ಸಂದರ್ಭದಲ್ಲಿ ಗೊಂದಲವೇರ್ಪಡಬಹುದಾದ ಸ್ಥಿತಿ ಇರುತ್ತದೆಂಬುದರ ಬಗ್ಗೆ ನಮ್ಮ ಮನಸ್ಸುಗಳಲ್ಲಿ ತುಸು ಆತಂಕವಿದೆ.

ನನ್ನ ಮೂರನೆಯ ಪ್ರಶ್ನೆಯೆಂದರೆ, ಶ್ರೀ ಮುನ್ಷಿಯವರು ಮಂಡಿಸಿದ ನಿರ್ಣಯದಲ್ಲಿನ ಪ್ರಸ್ತಾವವು ತಾತ್ಕಾಲಿಕ ಪರಿಣಾಮವನ್ನುಳ್ಳದ್ದಾಗಿದ್ದು ನಾವು ಸಂವಿಧಾನ ರಚನೆ ಹಾಗೂ ಶಾಸನಸಭೆ – ಇವೆರಡೂ ಕರ್ತವ್ಯಗಳನ್ನು ನಿಭಾಯಿಸುತ್ತಿರುವವರೆಗೆ ಮಾತ್ರ ಜಾರಿಯಲ್ಲಿರುವಂತಹುದೋ?

**ಒಬ್ಬ ಗೌರವಾನ್ವಿತ ಸದಸ್ಯರು :** ಇದೇನು ಭಾಷಣವೋ ಅಥವಾ ಒಂದು ಪ್ರಶ್ನೆಯೋ?

**ಮಾನ್ಯ ಸಭಾಧ್ಯಕ್ಷರು :** ನಾನು ಪಂಡಿತ್ ಮೈತ್ರಾ ಅವರಿಗೆ ಅವರು ಭಾಷಣ ಮಾಡುವಂತಿಲ್ಲ ಎಂದು ನೆನಪಿಸುತ್ತೇನೆ. ಅವರು ಒಂದು ಪ್ರಶ್ನೆ ಇರಿಸಿದ್ದಾರೆ ಮತ್ತು ಡಾ. ಅಂಬೇಡ್ಕರ್ ರವರು ತಮಗೆ ಅಗತ್ಯವೆನಿಸಿದರೆ, ಅದಕ್ಕೆ ಉತ್ತರಿಸುತ್ತಾರೆ.

**ಒಬ್ಬ ಗೌರವಾನ್ವಿತ ಸದಸ್ಯರು :** ಪ್ರಶ್ನೆ ಕೂಡ ಕ್ರಮಬದ್ಧವಾಗಿಲ್ಲ.

**ಪಂಡಿತ್ ಲಕ್ಷ್ಮಿಕಾಂತ ಮೈತ್ರ :** ಏಕೆ ಅನುಮತಿಸಬಾರದು? ಗೌರವಾನ್ವಿತ ಸದಸ್ಯರು ಚರ್ಚೆಗೆ ಉತ್ತರಿಸುವಾಗ ಮತ್ತೊಬ್ಬ ಗೌರವಾನ್ವಿತ ಸದಸ್ಯರು ಅದನ್ನು ಅರ್ಥ ಮಾಡಿಕೊಳ್ಳದಿದ್ದರೆ ಅವರು ಸ್ಪಷ್ಟನೆಗಾಗಿ ಪ್ರಶ್ನೆಗಳನ್ನು ಹಾಕಲು ಸಂಪೂರ್ಣವಾದ ಹಕ್ಕುಳ್ಳವರಾಗಿರುತ್ತಾರೆ.

**ಮಾನ್ಯ ಸಭಾಧ್ಯಕ್ಷರು** : ತಾವು ಪ್ರಶ್ನೆ ಹಾಕಿದ್ದೀರಿ. ಡಾ. ಅಂಬೇಡ್ಕರ್ ಉತ್ತರಿಸುತ್ತಾರೆ.

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ನಾನು ಸಂಕ್ಷಿಪ್ತವಾಗಿ ಹೇಳುತ್ತೇನೆ. ಮೊದಲನೆಯ ಪ್ರಶ್ನೆ ಭಾರತ ಸರಕಾರದ ಅಧಿನಿಯಮದ ಅಳವಡಿಕೆಗಳಲ್ಲಿ ನಾವು ಏನಾದರೂ ಬದಲಾವಣೆ ಆಲೋಚಿಸುತ್ತೇವೆಯೇ ಎಂಬುದು. ನನ್ನ ಉತ್ತರ ಸದನ ಯಾವ ಬದಲಾವಣೆಗಳನ್ನು ಬಯಸುತ್ತದೆ ಎಂಬುದನ್ನು ನಿರ್ಧರಿಸುವುದು ಸದನಕ್ಕೆ ಸಂಬಂಧಪಟ್ಟ ವಿಷಯ. ಆದರೆ ನಾನು ನನ್ನ ಗೆಳೆಯರಿಗೆ ಇಲ್ಲಿ ಭರವಸೆ ನೀಡಬಯಸುವುದೆಂದರೆ ನಾವು ಬದಲಾವಣೆಯನ್ನು ಮಾಡಿಕೊಳ್ಳುವ ಅಧಿಕಾರ ಹೊಂದಿದ್ದೇವೆ ಎಂಬುದು. ಹಾಗೆ ಬದಲಾಯಿಸಲಾದ ಭಾರತ ಸರಕಾರದ ಅಧಿನಿಯಮದಿಂದ ನಾವು ಬದ್ಧರಾಗಿರಬೇಕಿಲ್ಲ. ಸದನವು ವಿಷಯ ಪುನಃ ಪರಿಗಣಿಸುವಲ್ಲಿ ಕೆಲವು ಬದಲಾವಣೆಯನ್ನು ಮಾಡಿಕೊಳ್ಳಬೇಕೆಂದರೆ ಅದು ಆ ಅವಕಾಶವನ್ನು ಉಪಯೋಗಿಸಿಕೊಳ್ಳುವುದು ಸಾಧ್ಯ.

ನನಗೆ ಗೌರವಾನ್ವಿತ ಗೆಳೆಯ ಶ್ರೀ ಮೈತ್ರಾ ಅವರು ಹಾಕಿರುವ ಆಡಳಿತದ ಏಕತೆಯು ಬಾಧಿತವಾಗುವುದಿದೆಯೇ, ಸಭಾಧ್ಯಕ್ಷರು ಸಂವಿಧಾನ ರಚನಾಸಭೆ ಅಧ್ಯಕ್ಷತೆ ವಹಿಸುವುದು ಮತ್ತು ಶಾಸನಸಭೆಯ ಅಧ್ಯಕ್ಷತೆಯನ್ನು ಸ್ಪೀಕರ್ ವಹಿಸುವುದು ಹೀಗೆ ಇವೆರಡರ ನಡುವೆ ಗೊಂದಲವಾಗಬಹುದೆ ಎಂಬ ಎರಡನೆಯ ಪ್ರಶ್ನೆ. ಸಮಿತಿಯು ತಾತ್ತ್ವಿಕವಾಗಿ ಗೊಂದಲ ಉಂಟಾಗುವ ಸಾಧ್ಯತೆ ಇರುತ್ತದೆ ಎಂದು ಹೇಳಿದೆ. ಆದರೆ ಅಲ್ಲಿ ಗೊಂದಲವೇರ್ಪಡುವ ಆವಶ್ಯಕತೆ ಇರಬೇಕಿಲ್ಲ ಎಂದು ನಾನು ತಿಳಿಯುತ್ತೇನೆ. ರೂಢಿಯಲ್ಲಿ ಎರಡು ಕಚೇರಿಗಳನ್ನು ಹೊಂದಿರುವುದು ಎರಡು ಕಚೇರಿಗಳಿದ್ದರೂ ಸಭಾಧ್ಯಕ್ಷರು ಮತ್ತು ವಿಧಾಯಕ ಸಭೆಯ ಸ್ಪೀಕರ್ ಒಟ್ಟಿಗೆ ಕೆಲಸ ಮಾಡುವುದು ಸಾಧ್ಯ. ಮತ್ತು ಆದುದರಿಂದ ನಾವು ಎರಡು ಪ್ರತ್ಯೇಕ ಕಚೇರಿಗಳನ್ನು ಹೊಂದಿದ್ದೇವೆ ಎಂಬ ಕಾರಣಕ್ಕಾಗಿ ಗೊಂದಲಕ್ಕೆ ಈಡಾಗುತ್ತೇವೆ ಎಂದು ಆತಂಕಗೊಳ್ಳಬೇಕಾಗಿಲ್ಲ.

ಸ್ಪಷ್ಟವಾಗಿ ಸಂವಿಧಾನ ರಚನಾಸಭೆಯನ್ನು ಶಾಸನ ಸಭೆಯನ್ನಾಗಿ ಪರಿವರ್ತಿಸುವ ಉದ್ದೇಶಕ್ಕೆ ನಾವು ಈಗ ಮಾಡುತ್ತಿರುವ ಏರ್ಪಾಟು, ನಿಸ್ಸಂಶಯವಾಗಿಯೂ ತಾತ್ಕಾಲಿಕ. ನಮ್ಮ ಸಂವಿಧಾನ ರಚಿಸುವ ಕೆಲಸ ಪೂರೈಸುವವರೆಗೂ ಅದು ಇರುತ್ತದೆ. ಒಮ್ಮೆ ಸಂವಿಧಾನ ರಚಿಸುವ ಕಾರ್ಯ ಪೂರ್ಣವಾಯಿತೆಂದರೆ ನಾವು ಒಂದು ಶಾಸನಸಭೆಯಾಗಿ ಮಾತ್ರ ನಮ್ಮ ಕಾರ್ಯವನ್ನು ಮುಂದುವರಿಸುತ್ತೇವೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಇನ್ನೊಂದು ಪ್ರಶ್ನೆ. ಗೌರವಾನ್ವಿತ ಸದಸ್ಯರು ಪುನರಳವಡಿಕೆಯನ್ನು ಸದನ ಮಾಡಬಹುದು ಎಂದು ಹೇಳಿದ್ದಾರೆ. ಮತ್ತೆ ಅಳವಡಿಕೆಗಳನ್ನು ಮಾಡಲು ಗರ್ವನರ್ ಜನರಲ್ ಅವರಿಗೆ ಮಾಡಲು ಸಾಧ್ಯವೇ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಅದು ಕಾನೂನಿನ ಒಂದು ಪ್ರಶ್ನೆ. ಈ ಸದನವು ಅಳವಡಿಕೆಯನ್ನು ಬದಲಾಯಿಸುವ ಅಧಿಕಾರವನ್ನು ಹೊಂದಿದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ನಾನು ಅದನ್ನು ನಿರಾಕರಿಸುವುದಿಲ್ಲ. ನನ್ನ ಪ್ರಶ್ನೆ ಎಂದರೆ ಗೌರವಾನ್ವಿತ ಸದಸ್ಯರ ಅಭಿಪ್ರಾಯದಲ್ಲಿ ಗವರ್ನರ್ ಜನರಲ್ ಅವರ ಅಧಿಕಾರ ಈ ನಿಟ್ಟಿನಲ್ಲಿ ಮುಂದುವರಿಯುವುದೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ಅವರು ಹಾಗೆ ಮಾಡಲಾರರು, ಏಕೆಂದರೆ ಅವರು ತಮ್ಮ ಸಚಿವರ ಸಲಹೆಯ ಮೇಲೆ ವರ್ತಿಸಬೇಕಾಗುತ್ತದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಅವರು ತಮ್ಮ ಸಚಿವರ ಸಲಹೆಯ ಮೇಲೆ ಹಾಗೆ ಮಾಡಬಹುದೆ?

**ಒಬ್ಬ ಗೌರವಾನ್ವಿತ ಸದಸ್ಯರು** : ಇದೇನು ನ್ಯಾಯಾಲಯವೇ? ಅಥವಾ ಒಂದು ಪಾಟೀ ಸವಾಲೆ?

**ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್** : ನನಗೆ ವಿಷಯವು ಖಚಿತವಿಲ್ಲ ಮತ್ತು ನಾನು ಆಲೋಚನೆ ಮಾಡದೆಯೇ ಉತ್ತರ ಕೊಡಲಿಷ್ಟಪಡುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಸಲಹೆ ಮಾಡಿದಂತೆ ನಾವು ಪ್ರಸ್ತಾವದ ಖಂಡಗಳನ್ನು ಒಂದೊಂದಾಗಿ ಚರ್ಚೆಗೆ ಹಾಕಬೇಕೆಂದು ತಿಳಿಯುತ್ತೇನೆ. ಖಂಡ ೧.

"(೧) ಶಾಸನ ಸಭೆಯ ಕೆಲಸಗಳು ಯಾವುವೆಂದರೆ,

(ಎ) ೧೯೪೬ರ ಡಿಸೆಂಬರ್ ೯ರಂದು ಆರಂಭವಾದ ಸಂವಿಧಾನ ರಚನಾಕಾರ್ಯವನ್ನು ಮುಂದುವರಿಸುವುದು ಮತ್ತು ಪೂರ್ಣಗೊಳಿಸುವುದು ಮತ್ತು

(ಬಿ) ಹೊಸ ಸಂವಿಧಾನದಡಿ ಒಂದು ಶಾಸನಸಭೆಯು ಅಸ್ತಿತ್ವಕ್ಕೆ ಬರುವವರೆಗೂ ಪ್ರಭುತ್ವ ಶಾಸನ ಸಭೆಯಾಗಿ ಕೆಲಸ ಮಾಡುವುದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು:**

"(೨) ಸಂವಿಧಾನ ರಚಿಸುವ ಅಂಗವಾಗಿ ರಚನಾಸಭೆಯ ವ್ಯವಹಾರವನ್ನು ಪ್ರಭುತ್ವ ಶಾಸನಸಭೆಯಿಂದ ಬೇರ್ಪಡಿಸಬೇಕು ಅದರ ಸ್ವಾಭಾವಿಕ ವ್ಯವಹಾರದಿಂದ ಸ್ಪಷ್ಟವಾಗಿ ಬೇರೆ ಬೇರೆಯ ಮತ್ತು ಎರಡು ವಿಧಗಳ ವ್ಯವಹಾರಗಳಿಗೆ ಬೇರೆ ದಿನಗಳನ್ನು ಅಥವಾ ಒಂದೇ ದಿನ ಪ್ರತ್ಯೇಕ ವೇಳೆಗಳಲ್ಲಿ ಸಮಾವೇಶಗೊಳ್ಳಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :**

"(೩) ಶಾಸನ ಸಭೆಯಲ್ಲಿ ಭಾರತೀಯ ರಾಜ್ಯಗಳ ಪ್ರತಿನಿಧಿಗಳ ಸ್ಥಾನವನ್ನು ಕುರಿತಂತೆ ವರದಿಯ ಕಂಡಿಕೆ ೭ರಲ್ಲಿ ಇರುವ ಶಿಫಾರಸುಗಳನ್ನು ಅಂಗೀಕರಿಸಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :**

"(೪) ಪ್ರಭುತ್ವ ಶಾಸನಸಭೆಯಾಗಿ ಕಾರ್ಯ ನಿರ್ವಹಿಸುವಾಗ ಶಾಸನ ಸಭೆಯ ಚರ್ಚೆಗಳಲ್ಲಿ ಅಧ್ಯಕ್ಷತೆ ವಹಿಸಲು ಸ್ಪೀಕರ್ ಆಗಿರಲು ಒಬ್ಬ ಅಧಿಕಾರಿಯ ಚುನಾವಣೆಗೆ ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಸೂಕ್ತ ಅವಕಾಶಗಳನ್ನು ಮಾಡಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :**

"(೫) ಪ್ರಭುತ್ವ ಶಾಸನಸಭೆಯಾಗಿ ಕಾರ್ಯನಿರ್ವಹಿಸಲು ಸಭೆ ಕರೆಯುವ ಮತ್ತು ಅದನ್ನು ಮುಂದೂಡುವ ಅಧಿಕಾರ ಸಭಾಧ್ಯಕ್ಷರಿಗಿರತಕ್ಕದ್ದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :**

"೬) ಸಂವಿಧಾನ ರಚನಾಸಭೆಯ ಸದಸ್ಯರಾಗಿರದ ಪ್ರಭುತ್ವ ಸರ್ಕಾರದ ಸಚಿವರಿಗೆ ಅವರು ಸಂವಿಧಾನ ರಚನಾಸಭೆಯ ಸದಸ್ಯರಾಗುವವರೆಗೆ ಮತ ಚಲಾಯಿಸಲು ಯಾವುದೇ ಹಕ್ಕಿರಬಾರದಾದರೂ ಸಂವಿಧಾನ ರಚಿಸುವ ಕೆಲಸದಲ್ಲಿ ಭಾಗವಹಿಸುವ ಹಕ್ಕನ್ನು ಪಡೆದಿರಬೇಕು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :**

"(೭) ಅಗತ್ಯವಾದ ಮಾರ್ಪಾಡುಗಳು, ಅಳವಡಿಕೆಗಳು ಮತ್ತು ಸೇರ್ಪಡೆಗಳನ್ನು ಮಾಡಬೇಕು–

(ಎ) ಭಾರತೀಯ ಶಾಸನಸಭೆಯ ನಿಯಮಗಳು ಮತ್ತು ಸ್ಥಾಯೀ ಆದೇಶಗಳು ೧೯೪೭ರ ಭಾರತ ಸರ್ಕಾರದ ಅಧಿನಿಯಮಕ್ಕೆ ಹೊಂದಾಣಿಕೆಯಾಗಿರುವಂತೆ ಮಾಡಲು ಅವುಗಳಿಗೆ ಸೂಕ್ತ ತಿದ್ದುಪಡಿಗಳನ್ನು ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಮಾಡತಕ್ಕದ್ದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :**

"(ಬಿ) ಹೊಸ ನಿಯಮಗಳಿಗೆ ಹೊಂದಾಣಿಕೆಯಾಗಿರುವಂತೆ ಮಾಡಲು ಅವುಗಳಿಗೆ ಸೂಕ್ತ ತಿದ್ದುಪಡಿಗಳನ್ನು ಸಂವಿಧಾನ ರಚನಾಸಭೆಯು ಅಥವಾ ಅದರ ಸಭಾಧ್ಯಕ್ಷರು ಅಗತ್ಯವಾದ ತಿದ್ದುಪಡಿಗಳನ್ನು ಮಾಡತಕ್ಕದ್ದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

ಈ ಪ್ರಸ್ತಾವವನ್ನು ಇಡಿಯಾಗಿ ಹೀಗೆ ಅಂಗೀಕರಿಸತಕ್ಕದ್ದು :

"೧. ಭಾರತೀಯ ಸ್ವಾತಂತ್ರ್ಯ ಕಾಯಿದೆ ಅಡಿ ಸಂವಿಧಾನ ರಚನಾ ಸಭೆಯ ಕಾರ್ಯಗಳ ಮೇಲಿನ ವರದಿಯನ್ನು ಪರಿಗಣಿಸುವುದನ್ನು ಕುರಿತಂತೆ ಗೌರವಾನ್ವಿತ ಡಾ. ಬಿ.ಆರ್. ಅಂಬೇಡ್ಕರ್ ಅವರ ನಿಲುವಳಿಯನ್ನು ಕುರಿತು ತೆಗೆದುಕೊಂಡ ನಿರ್ಧಾರಗಳೆಂದರೆ,

(ಎ) ೧೯೪೬ರ ಡಿಸೆಂಬರ್ ೯ರಂದು ಆರಂಭವಾದ ಸಂವಿಧಾನ ರಚನಾಕಾರ್ಯವನ್ನು ಮುಂದುವರಿಸುವುದು ಮತ್ತು ಪೂರ್ಣಗೊಳಿಸುವುದು.

(ಬಿ) ಹೊಸ ಸಂವಿಧಾನದಡಿ ಒಂದು ಶಾಸನ ಸಭೆ ಅಸ್ತಿತ್ವಕ್ಕೆ ಬರುವವರೆಗೂ ಪ್ರಭುತ್ವ ಶಾಸನಸಭೆಯಾಗಿ ಕೆಲಸ ಮಾಡುವುದು.

(೨) ಸಂವಿಧಾನವನ್ನು ರಚಿಸುವ ಸಂಸ್ಥೆಯಾಗಿ ರಚನಾಸಭೆಯ ವ್ಯವಹಾರ ಮತ್ತು ಪ್ರಭುತ್ವ ಶಾಸನ ಸಭೆಯಾಗಿ ಅದರ ಸಹಜ ವ್ಯವಹಾರಗಳ ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ಹೊಂದಿರಬೇಕು ಮತ್ತು ಎರಡು ವ್ಯವಹಾರಗಳಿಗೆ ಬೇರೆ ಬೇರೆಯ ದಿನಗಳು ಅಥವಾ ಒಂದೇ ದಿನ ಪ್ರತ್ಯೇಕ ವೇಳೆಗಳಲ್ಲಿ ಸಮಾವೇಶಗೊಳ್ಳಬೇಕು.

(೩) ಶಾಸನ ಸಭೆಯಲ್ಲಿ ಭಾರತೀಯ ರಾಜ್ಯಗಳ ಪ್ರತಿನಿಧಿಗಳ ಸ್ಥಾನ ಕುರಿತಂತೆ ವರದಿಯ ಕಂಡಿಕೆ ೬ರಲ್ಲಿ ಶಿಫಾರಸುಗಳನ್ನು ಅಂಗೀಕರಿಸಬೇಕು.

(೪) ಪ್ರಭುತ್ವ ಶಾಸನಸಭೆಯಾಗಿ ಕಾರ್ಯನಿರ್ವಹಿಸುವಾಗ ಶಾಸನ ಸಭೆಯ ಚರ್ಚೆಗಳಲ್ಲಿ ಅಧ್ಯಕ್ಷತೆ ವಹಿಸಲು ಸ್ಪೀಕರ್ ಆಗಿರಲು ಒಬ್ಬ ಅಧಿಕಾರಿಯ ಚುನಾವಣೆಗೆ ಸಂವಿಧಾನ ರಚನಾಸಭೆಯ ನಿಯಮಗಳಲ್ಲಿ ಸೂಕ್ತ ಅವಕಾಶ ಮಾಡಬೇಕು.

(೫) ಪ್ರಭುತ್ವ ಶಾಸನ ಸಭೆಯಾಗಿ ಕಾರ್ಯನಿರ್ವಹಿಸಲು ಸಭೆ ಕರೆಯುವ ಮತ್ತು ಅದನ್ನು ಮುಂದೂಡುವ ಅಧಿಕಾರ ಸಭಾಧ್ಯಕ್ಷರಿಗಿರತಕ್ಕದ್ದು.

(೬) ಸಂವಿಧಾನ ರಚನಾಸಭೆಯ ಸದಸ್ಯರಾಗಿರುವ ಪ್ರಭುತ್ವ ಸರ್ಕಾರದ ಸಚಿವರಿಗೆ ಅವರು ಸಂವಿಧಾನ ರಚನಾಸಭೆಯ ಸದಸ್ಯರಾಗುವರೆಗೂ ಮತ ಚಲಾಯಿಸಲು ಯಾವುದೇ ಹಕ್ಕಿರಬಾರದಾದರೂ ಸಂವಿಧಾನ ರಚಿಸುವ ಕೆಲಸದಲ್ಲಿ ಭಾಗವಹಿಸುವ ಹಕ್ಕು ಅವರಿಗಿರಬೇಕು.

(೭) (ಎ) ೧೯೪೭ರ ಭಾರತ ಸ್ವಾತಂತ್ರ್ಯ ಅಧಿನಿಯಮದ ಅಡಿ ಅಳವಡಿಸಿದಂತೆ ಭಾರತ ಸರ್ಕಾರದ ಅಧಿನಿಯಮದ ಸೂಕ್ತ ಅನುಬಂಧಗಳೊಂದಿಗೆ ಭಾರತೀಯ ಶಾಸನಸಭೆಯ ನಿಯಮಗಳು ಮತ್ತು ಸ್ಥಾಯಿ ಆದೇಶಗಳು ಹೊಂದಾಣಿಕೆಯಾಗುವಂತೆ ಮಾಡಲು ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಆವಶ್ಯಕ ಮಾರ್ಪಾಡುಗಳನ್ನು ಮತ್ತು ಸೇರ್ಪಡೆಗಳನ್ನು ಮಾಡಬೇಕು.

(ಬಿ) ಸಂದರ್ಭಾನುಸಾರ ವರದಿಯ ಕಂಡಿಕೆ ೯ರ ಅವಕಾಶಗಳನ್ನು ನಿರ್ವಹಿಸಲು ಮತ್ತು ಅಗತ್ಯವಿರುವ ಕಡೆಗಳಲ್ಲಿ ಭಾರತ ಸರ್ಕಾರದ ಅಧಿನಿಯಮದ ಪ್ರಸ್ತುತ ವಿಭಾಗವನ್ನು ಸೂಕ್ತವಾಗಿ ಅಳವಡಿಸಲು ಅದನ್ನು ಹೊಸ ನಿಯಮದೊಂದಿಗೆ ಹೊಂದುವಂತೆ ಮಾಡಲು ನಿಯಮಗಳಿಗೆ ಮತ್ತು ಸ್ಥಾಯಿ ಆದೇಶಗಳಿಗೆ ಸಂವಿಧಾನ ರಚನಾಸಭೆ ಅಥವಾ ಸಭಾಧ್ಯಕ್ಷರು ಆವಶ್ಯಕ ಮಾರ್ಪಾಡುಗಳನ್ನು, ಅಳವಡಿಕೆಗಳು ಮತ್ತು ಸೇರ್ಪಡೆಗಳನ್ನು ಮಾಡಬೇಕು.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈಗ ಈ ನಿರ್ಣಯವನ್ನು ಅನುಮೋದಿಸಲಾಗಿದೆ. ನಾನು ನಿಯಮಗಳು ಮತ್ತು ಸ್ಥಾಯಿ ಆದೇಶಗಳು ಮತ್ತು ಭಾರತ ಸರ್ಕಾರದ ಅಧಿನಿಯಮದಲ್ಲಿ ಮಾಡಬೇಕಾದ ಬದಲಾವಣೆ, ಹೊಂದಾಣಿಕೆಗಳ ವಿಷಯವನ್ನು ಈಗ ಕೈಗೆತ್ತಿಕೊಳ್ಳುತ್ತೇನೆ.

ಚರ್ಚೆಯ ಅವಧಿಯಲ್ಲಿ ಸಿಬ್ಬಂದಿಯನ್ನು ಕುರಿತಂತೆ ಎತ್ತಿಕೊಳ್ಳಲಾದ ಪ್ರಶ್ನೆ ಬಗೆಗೆ ನಾನು ಸಂವಿಧಾನ ರಚನಾ ಸಭೆಯ ನೌಕರ ವರ್ಗದ ಅಧಿಕಾರಿಗಳನ್ನು ಮತ್ತು ಶಾಸನಸಭೆಯ ನೌಕರ ವರ್ಗದ ಅಧಿಕಾರಿಗಳನ್ನುಳ್ಳ ಒಂದು ಸಮಿತಿಯನ್ನು ಸೇರಿಸಿ ದಕ್ಷ ಮತ್ತು ಸಾಧ್ಯವಾದಷ್ಟು ಮಿತವ್ಯಯದ ದೃಷ್ಟಿಯಿಂದ ಎರಡೂ ಇಲಾಖೆಗಳನ್ನು ಪುನರ್ ವ್ಯವಸ್ಥಾಪನೆ ಮಾಡುವ ಒಂದು ಯೋಜನೆಯನ್ನು ತಯಾರಿಸಲು ಉದ್ದೇಶಿಸಿದ್ದೇನೆ.

**ಶ್ರೀ ಕೆ.ಎಮ್. ಮುನ್ಷಿ :** ತಿಳಿಯಲು ನಾಡಿದ್ದು ರಜಾದಿನ ಮತ್ತು ಸದಸ್ಯರು ಸಂವಿಧಾನ ರಚನಾಸಭೆಯ ಕಚೇರಿ ನಾಳೆ ಮುಚ್ಚಿರುತ್ತದೆಯೆ ಎಂದು ತಿಳಿಯಲು ಕಾತರವಾಗಿದ್ದಾರೆ ಎಂದು ಹೇಳಬಹುದೆ? ನಾಡಿದ್ದು ಒಂದು ಹಿಂದೂ ರಜಾದಿನ ಮತ್ತು ಬಹಳಷ್ಟು ಸದಸ್ಯರು ತಮ್ಮ ಮನೆಗಳಿಗೆ ಹಿಂದಿರುಗಬಯಸಿದ್ದಾರೆ.

**ಮಾನ್ಯ ಸಭಾಧ್ಯಕ್ಷರು :** ವಿಷಯ ಸದಸ್ಯರ ಕೈಲೇ ಇದೆ. ನಾನು ನಾಳೆ ಅಧಿವೇಶನ ಇರುವುದಿಲ್ಲ ಎಂದು ಉದ್ದೇಶಿಸಿದ್ದೇನೆ.

ಅನಂತರ ಸಭೆಯನ್ನು ೧೯೪೭ರ ಆಗಸ್ಟ್ ೩೦ರ ಶನಿವಾರ ಬೆಳಗ್ಗೆ ೧೧ ಗಂಟೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.]*